ಕನ್ನಡ ವಿಶ್ವವಿದ್ಯಾಲಯಕ್ಕೆ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ - 583 276

"ಕೆ. ಸತ್ಯನಾರಾಯಣರವರ ಪ್ರಾತಿನಿಧಿಕ ಕಥೆಗಳ ಪ್ರಾಯೋಗಿಕ ವಿಮರ್ಶೆ"

ನೋಂದಣಿ ಸಂಖ್ಯೆ : 160701030041

ವರ್ಷ: 2016-17

ಕನ್ನಡ ವಿಶ್ವವಿದ್ಯಾಲಯಕ್ಕೆ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 583 276

“ಕೆ. ಸತ್ಯನಾರಾಯಣರವರ ಪ್ರಾತಿನಿಧಿಕ ಕಥೆಗಳ ಪ್ರಾಯೋಗಿಕ ವಿಮರ್ಶೆ”

ನೋಂದಣಿ ಸಂಖ್ಯೆ : 160701030041

ವರ್ಷ: 2016–17

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ಸ್ವರೂಪದ ವ್ಯಾಪ್ತಿ

ನಮ್ಮ ಪ್ರಾಚೀನ ಕಾವ್ಯಗಳಲ್ಲಿ ನವ್ಯತನ ಗದ್ಯತನಗಳಿದ್ದರೂ, ಗದ್ಯವೇ ಪ್ರಮುಖವಾಗಿ ಬಳಸಿದ ಕಥಾಪ್ರಕಾರ 19ನೇಯ ಶತಮಾನದಿಂಧೀಚೆಗೆ ಕನ್ನಡದಲ್ಲಿ ರೂಪ ತಳೆಯಿತು. ಜಾಗತಿಕ ಸಾಹಿತ್ಯದಲ್ಲಿ ಸಣ್ಣಕಥೆ ತನ್ನದೇ ಆದ ಒಂದು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಕನ್ನಡದಲ್ಲಿ ಸಣ್ಣಕಥೆಗಳು ಬೇರೆ ಯಾವ ಪ್ರಕಾರಕ್ಕಿಂತ ಕಡಿಮೆಯೇನು ಇಲ್ಲ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ನವ್ಯದ ಅಂಶಗಳು ಕಂಡು ಬಂದರು ಸಹ ಗದ್ಯವೇ ಒಂದು ಪ್ರಕಾರವಾಗಿ ಬೆಳೆದದ್ದು ಸಹ ತಡವಾಗಿ ಕನ್ನಡ ಕವಿಗಳು ಗದ್ಯದ ಅಂಶಗಳನ್ನೇ ಪ್ರಧಾನವಾಗಿ ಮಾಡಿಕೊಂಡು ಬರೆದದ್ದು ಬಹಳ ತಡವಾಗಿ ಪ್ರಾರಂಭದಲ್ಲೇ ಪಂಜೆಮಂಗೇಶರಾಯರಿಂದ ಕನ್ನಡ ಸಣ್ಣಕಥೆಗಳು ಪ್ರಾರಂಭವಾದವು. ಕನ್ನಡ ಕವಿಗಳು ತಮ್ಮದೇ ಆದ ಒಂದು ತಾತ್ವಿಕತೆಯನ್ನು ರೂಪಿಸಿಕೊಂಡು ಬರೆಯುತ್ತಿದ್ದಾರೆ. ಹಾಗಾಗಿ ಸಂವೇದನಾಶೀಲ ತೀವ್ರತೆಯ ಕೊರತೆ ಈ ಸಮಯದಲ್ಲಿ ಕಾವ್ಯದಲ್ಲಿ ಹಾಗೂ ಕಥೆಗಳಲ್ಲಿ ಕಂಡು ಬರುತ್ತದೆ. ಉತ್ತಮವಾದ ಕಥೆ ಹಾಗೂ ಕವಿತೆ ಬರೆಯುವುದಕ್ಕಿಂತ ಕವಿಯಾಗಬೇಕು ಎಂಬ ಧಾವಂತಕ್ಕೆ(ಕಟ್ಟುಬಿದ್ದಿದ್ದಾರೆ). ಇದು ಪೂರ್ಣ ಸತ್ಯವಲ್ಲದಿದ್ದರೂ ಸಹ ಈ ಸಂದರ್ಭದಲ್ಲಿ ಯೋಚಿಸುವ ಅಗತ್ಯವಿದೆ. ನಾನು ಎಂ.ಫಿಲ್ ಅಧ್ಯಯನಕ್ಕೆಂದು ಕೆ. ಸತ್ಯನಾರಾಯಣರವರ ಕಥೆಗಳನ್ನು ಆಯ್ದುಕೊಂಡಿದ್ದೇನೆ. ನಮ್ಮ ನಡುವಿನ ಅಪರೂಪದ ಕಥೆಗಾರರು ಕೆ.ಸತ್ಯನಾರಾಯಣರವರು. ಇವರ ತಂದೆ ಶಾಲಾ ಶಿಕ್ಷಕರಾಗಿದ್ದರಿಂದ ಸಾಮಾನ್ಯವಾಗಿ ಬಾಲ್ಯದಿಂದಲೇ ಸತ್ಯನಾರಾಯಣರವರು ಸಾಹಿತ್ಯದ ಓದುವಿಕೆಗೆ ತೊಡಗಿದರು. ನಂತರದಲ್ಲಿ ಕನ್ನಡ ಕಥಾ ಸಾಹಿತ್ಯಕ್ಕೆ "ನಿಮ್ಮ ಮೊದಲ ಪ್ರೇಮ ಕಥೆಯ ಮೂಲಕ" ಕನ್ನಡ ಕಥಾ ಜಗತ್ತಿಗೆ ಪ್ರವೇಶ ಮಾಡಿದರು.

ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಅವರು ತೆರಿಗೆ ಇಲಾಖೆಯಲ್ಲಿದ್ದ ಸಂದರ್ಭದಲ್ಲಿ ಭಾರತದ ನಾನಾ ನಗರಗಳಲ್ಲಿ, ನಾನಾ ಜನರುಗಳ ಜೊತೆ ಇವರು ಕಾಲ ಕಳೆದಿರುವ ವ್ಯಕ್ತಿಯ ಚಿತ್ರಣ ಇವರ ಕಥೆಗಳಲ್ಲಿ ಕಂಡು ಬರುತ್ತದೆ. ಸತ್ಯನಾರಾಯಣರವರ ಕಥೆ ಕಟ್ಟುವ ಶೈಲಿಯನ್ನು ಗಮನಿಸಿದರೆ, ಮಾಸ್ತಿಯವರ ತಂತ್ರಗಾರಿಕೆ ಹೆಚ್ಚಾಗಿ ಕಂಡು ಬರುತ್ತದೆ. ಕಥೆ ಪ್ರಾರಂಭವಾಗುವುದೇ ಯಾವುದಾದರೂ ಹಳ್ಳಿಯ ಸಾಮಾನ್ಯನಿಂದ ನಗರದ ಸಾಮಾನ್ಯನಿಂದ. ಸಾಮಾನ್ಯ ಹೆಣ್ಣು ಮಗಳು ಕೂಡ ಸತ್ಯನಾರಾಯಣ ಕಥೆಗಳಲ್ಲಿ ಬಹುಮುಖ್ಯ ಪಾತ್ರವಹಿಸುತ್ತಾಳೆ. ಈ ತಲೆಮಾರಿನಲ್ಲಿ ಬರೆಯುವ ಕಥೆಗಾರರಾದ ವಸುಧೇಂದ್ರ ಅವರಿಗೆ ಹೋಲಿಸಿದರೆ ಕೆ. ಸತ್ಯನಾರಾಯಣರವರ ಕಥಾಲೋಕ ಹಳೆಯದಾಗಿ ಕಂಡು ಬರುತ್ತದೆ. ಈ

ತಲೆಮಾರಿನ ವಸುಧೇಂದ್ರ ಅವರ ಇವತ್ತಿನ ಸಾಪ್ಟ್‌ವೇರ್ ಯುಗದ ಯುವಜನರ ತಳಮಳ, ತಾಕಲಾಟ ಹೇಳುವ ಕಥೆಗಾರರಾದರೆ ಕೆ.ಸತ್ಯನಾರಾಯಣ ಈ ರೀತಿಯ ಹೊಸ ಕಾಲದ ಯಾವ ಸಮಸ್ಯೆಗಳು, ಹೊಸ ಸಮಸ್ಯೆಗಳು ಕೆ.ಸತ್ಯನಾರಾಯಣರವರ ಕಥೆಗಳಲ್ಲಿ ಕಂಡು ಬರುವುದಿಲ್ಲ. ವಸುಧೇಂದ್ರರವರ ಕಥೆಗಳು ಹೊಸಕಾಲದ ಅನುಭವ ಪ್ರೇರಿತವಾದರೂ ಅವು ಅತ್ಯುತ್ತಮ ರೀತಿಯಲ್ಲಿ ನಿರೂಪಣೆ ಮಾಡುವಲ್ಲಿ ವಸುಧೇಂದ್ರರವರು ಯಶಸ್ವಿಯಾಗಿದ್ದಾರೆ. ಉದಾ:- ಯುಗಾದಿ, ಹೆಡ್‌ಹಂಟರ್ ಮುಂತಾದ ಹೊಸ ತಲೆಮಾರಿನ ಯುವ ಜನತೆಯ ಕಥೆಗಳಾಗಿ ಚಿತ್ರಣಗೊಂಡಿದೆ. ಒಂದು ಸಾಂಪ್ರದಾಯಿಕ ಮನೋಧರ್ಮದ ಲೇಖಕರಾಗಿದ್ದು ವಸುಧೇಂದ್ರ ಅವರು ವಿಶಿಷ್ಟ ಕಥೆಗಳನ್ನು ಕನ್ನಡ ಕಥಾಲೋಕಕ್ಕೆ ಪರಿಚಯಿಸಿದ್ದಾರೆ. ಈ ರೀತಿಯ ಕಥೆಗಳು ಕೆ.ಸತ್ಯನಾರಾಯಣರವರ ಕಥೆಗಳಲ್ಲಿ ಕಂಡು ಬರುವುದಿಲ್ಲ. ಅಂದರೆ ಸತ್ಯನಾರಾಯಣ ಅವರ ಕಥೆಗಳಲ್ಲಿ ಬರುವ ಪಾತ್ರಗಳು ಕಂಡ ಮುಖಗಳಾಗಿವೆ. ಇವರ ಅನುಭವಗಳು ಕಥೆಗಳಾಗಿ ಹೊರಹೊಮ್ಮಿವೆ. ಇವರ ಕಥೆಗಳು ಮಹಾನಗರಗಳ ಮಧ್ಯಮ ವರ್ಗಗಳ ಮನಸ್ಸು ತೆರೆದಿಡುತ್ತಾ ಹೋಗುತ್ತದೆ. ಕೆ. ಸತ್ಯನಾರಾಯಣರವರು ಸಹ ಕಥೆಯ ನಿರೂಪಕರಾಗಿ, ಕಥೆಯಲ್ಲಿ ಸಹ ಪಾತ್ರವಾಗಿ ಸಾಗಿ ಬರುತ್ತಾರೆ. ಕಥೆ ಪ್ರಾರಂಭವಾದಾಗಿನಿಂದ ಹಿಡಿದು ಮುಕ್ತಾಯದ ಹಂತದವರೆಗೂ ಕಥೆಯಲ್ಲಿ ಉಪ ಕಥೆಗಳು ಬರುವುದು ಸತ್ಯನಾರಾಯಣರವರ ವೈಶಿಷ್ಟ್ಯವಾಗಿದೆ. ಈ ತಂತ್ರಗಾರಿಕೆ ಮಾಸ್ತಿಯವರ ಪ್ರಭಾವವೆಂದು ತಿಳಿಯಬಹುದು.

ಸತ್ಯನಾರಾಯಣರವರ ಕಥೆಗಳಲ್ಲಿ ಹೆಣ್ಣಿನ ಪಾತ್ರಗಳಿಗೆ ಬಹುಮುಖ್ಯ ವ್ಯಕ್ತಿತ್ವವನ್ನು ಕೊಟ್ಟಿದ್ದಾರೆ. ಇವರ ಕಥೆಗಳಲ್ಲಿ ಬರುವ ಬಹುಪಾಲು ಹೆಣ್ಣಿನ ಚಿತ್ರಗಳು ಬಡಮಧ್ಯಮವರ್ಗದ ಸಮಸ್ಯೆಗಳನ್ನ ತೆರೆದಿಡುತ್ತವೆ. ಉದಾಹರಣೆಗೆ ಅಮೆರಿಕನ್ ಮನೆಯ ವೇದತ್ತೆ ಸಾಮಾನ್ಯ ಮಧ್ಯಮ ವರ್ಗದ ಹೆಣ್ಣುಮಗಳ ತೊಳಲಾಟ, ಹಠ, ಛಲ ಚಿತ್ರಿಸಿದ್ದಾರೆ.

ಹಾಗೆ ನಿಜ ಕವಲು ಕಥೆಯಲ್ಲಿ ಬರುವ ಕಂಡಕ್ಟರ್ ರಾಜಮ್ಮ ಮಧ್ಯಮವರ್ಗದ ಮಹಿಳೆಯಾಗಿದ್ದು ರಾತ್ರಿಪಾಳಿಯಲ್ಲಿ ಕಂಡಕ್ಟರ್ ಆಗಿ ಬದುಕಿನಲ್ಲಿ ಪಡುವ ಕಷ್ಟಗಳನ್ನು ರಾಜಮ್ಮನ ಮೂಲಕ ಹೇಳಿದ್ದಾರೆ. ರಾಜಮ್ಮ ಒಂದು ಕಡೆ ಸಾಂಸಾರಿಕ ಬದುಕು ಹಾಗೂ ಮತ್ತೊಂದು ಕಡೆ ವೃತ್ತಿ ಬದುಕನ್ನು ನಿರ್ವಹಿಸುವ ಸಾಮಾನ್ಯ ಮಧ್ಯಮ ವರ್ಗದ ಹೆಣ್ಣು ಮಗಳಾಗಿ ಕಂಡು ಬರುತ್ತಾಳೆ. ಹಾಗೇ ಕಾರ್ಲ್‌ಮಾರ್ಕ್ಸ್ ನಂಜಮ್ಮ

ಕಥೆಯಲ್ಲಿ ಸಾಮಾನ್ಯಳಲ್ಲಿ ಸಾಮಾನ್ಯಳಾದ ನಂಜಮ್ಮ ಬದುಕಿನ ಬಗ್ಗೆ ಹೊಂದಿರುವ ಆದರ್ಶವಾದ ಹಾಗೂ ದುಡಿಮೆಯ ಪ್ರತಿಮೆಯಾಗಿ ನಂಜಮ್ಮ ಕಾಣುತ್ತಾಳೆ. ನಂಜಮ್ಮ ಮನೆಗೆಲಸದ ಮಾಡಿದರೂ ಬದುಕಿನಲ್ಲಿ ಉತ್ತಮವಾಗಿ ಬದುಕುವ ಆದರ್ಶವಾದ ಉತ್ತಮವಾಗಿ ಕಥೆಯಲ್ಲಿ ಮೂಡಿಬಂದಿದೆ. ಯಾವುದೇ ಒಂದು ಐಡಿಯಾಲಜಿಗೆ ಒಳಗಾಗದೆ ಕಾರ್ಲ್‌ಮಾರ್ಕ್ಸ್‌ನ ಒಂದು ಸಿದ್ಧಾಂತವನ್ನು ಕಾರ್ಯರೂಪಕ್ಕೆ ತರುತ್ತಿರುವವಳು ಕಾರ್ಲ್‌ಮಾರ್ಕ್ಸ ನಂಜಮ್ಮ. ಇದನ್ನು ಕಂಡ ಈಗಲ್‌ಟನ ತನ್ನ ಕಾರ್ಲ್‌ಮಾರ್ಕ್ಸ್ ಪುಸ್ತಕವನ್ನು ಅನುವಾದ ಮಾಡಿದ ಲೇಖಕರಿಂದ ಕೇವಲ ಕಾರ್ಲ್‌ಮಾರ್ಕ್ಸ್ ವಿಚಾರಗಳು ಅನುವಾದ ಮಾತ್ರ ಸಾಧ್ಯ ಆದರೆ ಅದು ಅನುಷ್ಠಾನದ ವಿಚಾರ ಸಾಮಾನ್ಯಳಲ್ಲಿ ಸಾಮಾನ್ಯಳಾದ ನಂಜಮ್ಮನಿಂದ ಸಾಧ್ಯವೆಂದು ನಾವು ಅರಿಯಬಹುದು.

ಮುಂದೆ ಬರುವ ಪ್ರಮುಖ ಪಾತ್ರವೆಂದರೆ ಚಿಕ್ಕತಾಯಿ ಎಂಬ ಕಥೆಯಲ್ಲಿ ಬರುವ ಜೆ.ಪಿ. ಹೆಣ್ಣುಮಗಳ ತನ್ನ ಮೇಲಾಧಿಕಾರಿ ಲೈಂಗಿಕಕಿರುಕುಳ ನೀಡಿದರು ಅದನ್ನು ಮತ್ತೊಬ್ಬ ಮೇಲಧಿಕಾರಿಗೆ ಹೇಳುವುದು. ಕೊನೆಗೆ ಆ ಮೇಲಾಧಿಕಾರಿಗೆ ವರ್ಗಾವಣೆಯಾದ ಸಂದರ್ಭದಲ್ಲಿ ಜೆ.ಪಿ. ಯೇ ಬಂದು ದೂರದ ಊರಿಗೆ ಪ್ರಸಾದ್‌ರಾವ ಎಂಬ ಅಧಿಕಾರಿಯನ್ನು ವರ್ಗಾವಣೆ ಮಾಡಬೇಡಿ ಅವರಿಗೆ ಸಾಕಷ್ಟು ಮನೆಯ ವೈಯುಕ್ತಿಕ ಸಮಸ್ಯೆಗಳಿವೆ ಎಂದು ಹೇಳಿ ಮತ್ತೊಂದು ವಿಭಾಗಕ್ಕೆ ವರ್ಗಾವಣೆ ಮಾಡಿ ಎಂದು ಹೇಳುವ ಜೆ.ಪಿ. ಲೈಂಗಿಕ ಕಿರುಕುಳ ಕೊಟ್ಟ ಅಧಿಕಾರಿಯ ಬಗ್ಗೆಯೂ ಒಂದು ಸಹಾನುಭೂತಿ ಇರುವುದು ಕಂಡು ಬರುತ್ತದೆ. ಅಂದರೆ ಹೆಣ್ಣು ಮಗಳು ತನಗೆ ಲೈಂಗಿಕ ಕಿರುಕುಳ ಕೊಟ್ಟ ಅಧಿಕಾರಿಯ ಬಗ್ಗೆಯೂ ಒಂದು ಸಹಾನುಭೂತಿ ಇರುವುದು ಕಂಡು ಬರುತ್ತದೆ. ಅಂದರೆ ಹೆಣ್ಣು ಮಗಳು ತನಗೆ ಲೈಂಗಿಕ ಕಿರುಕುಳ ನೀಡಿದ ಮೇಲಧಿಕಾರಿಗೂ ಸಹ ತೊಂದರೆಯಾಗಬಾರದು ಸಾಮಾನ್ಯವಾಗಿ ಗಂಡನ ಶೋಷಣೆಯನ್ನು ಪ್ರತಿಭಟಿಸದೆ ಪಲಾಯನ ಮಾಡುವ ಪ್ರವೃತ್ತಿ ಕಂಡು ಬರುತ್ತದೆ.

ನಜೀರ್ ಸಾಬು ಚರಿತ್ರೆ ಎಂಬ ಕಥೆಯಲ್ಲಿ ಬರುವ ವಿಜಯಪುರದ ಸಾಮಾನ್ಯ ಹೆಣ್ಣುಮಗಳು ಈ ನಗರಸಭೆ, ಮಂಡಲವರದಿಯಿಂದ ನನ್ನ ಬದುಕು ಹೊಸ ತಿರುವು ಪಡೆದುಕೊಂಡಿತ್ತು. ಈ ಹೆಣ್ಣುಮಗಳು ರಾಜಕೀಯ ಭವಿಷ್ಯ ಉತ್ತಮವಾಗಿ ಕಟ್ಟಿಕೊಂಡಳು. ಹಾಗೂ ವೈಯುಕ್ತಿಕ ಬದುಕು ಸಹ ಉತ್ತಮವಾಗಿ ಕಟ್ಟಿಕೊಂಡರೆ ಮೈಸೂರಿನ ಪ್ರಾಂತ್ಯದ ಹೆಣ್ಣುಮಗಳು ಪರಿಸ್ಥಿತಿ ಭಿನ್ನ, ವ್ಯತಿರಿಕ್ತ ಹಾಗೂ ದುರಂತಮಯವಾಗಿದೆ.

ಮೈಸೂರು ಪ್ರಾಂತ್ಯದ ಸೀತಾಲಕ್ಷ್ಮಿ ಎಂಬ ಹೆಣ್ಣುಮಕ್ಕಳು ಬಿಸಿಲುವಾಡಿಯ ಶಾಲಾ ಶಿಕ್ಷಕನಾದ

ಶ್ರೀನಿವಾಸಯ್ಯನ ಮದುವೆಯಾದಳು. ಈ ಶ್ರೀನಿವಾಸಯ್ಯ ದೇವಸ್ಥಾನದ ಪೂಜೆ, ಚೀಟಿ ವ್ಯವಹಾರ, ಮುಂತಾದವುಗಳಲ್ಲಿ ಸೀತಾಲಕ್ಷ್ಮಿ ಸಹ ಸಹಾಯ ಮಾಡುತ್ತಾಳೆ. ಈ ನಡುವೆ ಶ್ರೀನಿವಾಸಯ್ಯ ವ್ಯವಸಾಯ ಮಾಡುತ್ತಾನೆ. ಈ ರೀತಿ ಇರುವ ಸೀತಾಲಕ್ಷ್ಮಿ ತನ್ನ ಊರಿನ ಅನೇಕ ಪಿ.ಡಿ.ಓ. ಅಧಿಕಾರಿಗಳು ಹಾಗೂ ರಾಜಕೀಯ ಪ್ರಭಾವದಿಂದ ಮುಂದೆ ಅವಳು ಚುನಾವಣೆಗೆ ನಿಂತು ನಗರಸಭಾಧ್ಯಕ್ಷೆಯಾಗಿ ಆಯ್ಕೆಯಾಗುತ್ತಾಳೆ. ಹೀಗೆ ರಾಜಕೀಯ ಎರಡನ್ನು ನಡೆಸಿಕೊಂಡು ಹೋಗುತ್ತಾಳೆ. ಮುಂದೆ ಇವಳಿಗೆ ರಾಜಕೀಯದಲ್ಲಿ ಇವಳಿಗೆ ಗಂಡನ ಯಾವುದೇ ಸಹಕಾರ ಇಲ್ಲದೇ ಇವಳು ಅತಿಯಾದ ಓಡಾಟ ಮುಂತಾದವುಗಳಿಂದ ಸೀತಾಲಕ್ಷ್ಮಿಗೆ ಗರ್ಭಕೋಶದ ತೊಂದರೆಯುಂಟಾಗುತ್ತದೆ. ಅವಳು ಆಸ್ಪತ್ರೆಗೆ ದಾಖಲಾಗುತ್ತಾಳೆ. ಗಂಡ ಅವಳನ್ನು ನೋಡಲು ಸಹ ಹೋಗದೆ ಇರುವುದು ನಾನು ಸಾಮಾನ್ಯ ಶಾಲಾಶಿಕ್ಷಕ ಎಂದು ಹಿಂಜರಿಕೆ ಪಟ್ಟುಕೊಳ್ಳುವುದು. ಈ ರೀತಿ ಸೀತಾಲಕ್ಷ್ಮಿ ಕಥೆ ಒಂದು ರೀತಿ ದುರಂತವಾಗುತ್ತದೆ. ಈ ರೀತಿ ಮಹಿಳೆಯೊಬ್ಬಳು ರಾಜಕೀಯದಲ್ಲಿ ಎತ್ತರಕ್ಕೆ ಸಾಗಿದರೆ ಮತ್ತೊಬ್ಬಳು ವ್ಯತಿರಿಕ್ತವಾಗಿ ಮಹಿಳೆ ಸಮಸ್ಯೆ ಕಂಡು ಬಂದಿವೆ.

ಸೈಕಲ್ ಇನ್ನೊಂದು ಸಾಕು ಎಂಬ ಕಥೆಯಲ್ಲಿ ಬರುವ ಕುಸುಮ ಎಂಬ ಹೆಣ್ಣುಮಗಳು ಮಧ್ಯಮವರ್ಗದ ಸಾಮಾನ್ಯ ಹೆಣ್ಣುಮಗಳು ಒಂದು ಸೈಕಲ್ ಪಡೆಯಲು ಪಡುವ ಕಷ್ಟಗಳು ಹಾಗೂ ವಾರದಲ್ಲಿ 3 ದಿನಗಳಲ್ಲಿ ಸೈಕಲ್ ಪಡೆದು ಶಾಲೆಗೆ ಹೋಗುವಾಗ ಅವಳು ಪಡುವ ವ್ಯಥೆ ಉಳಿದ ದಿನ ತನ್ನ ಮಗ ಹಾಗೂ ಮಗಳು ಸೈಕಲ್ ತೆಗೆದುಕೊಂಡು ಹೋಗುವುದು ಗಂಡ ಯಾವುದೋ ಫ್ಯಾಕ್ಟರಿಯಲ್ಲಿ ಉದ್ಯೋಗ ಸಂಬಳ ಕಡಿಮೆ. ಇರುವುದರಲ್ಲೇ ಸಂಸಾರ ನಡೆಸಿಕೊಂಡು ಹೋಗಬೇಕು. ಈ ಕಥೆಯಲ್ಲಿ ಸೈಕಲ್ "ರೂಪಕವಾಗಿ" ಕಂಡು ಬರುತ್ತದೆ. ಮಧ್ಯಮವರ್ಗದ ಕುಸುಮ ವಾರದ 3 ದಿನ ಸೈಕಲ್ ಮೇಲೆ ಹೋಗುವಾಗ ತಾನು ಪಡುವ ಕಷ್ಟಗಳನ್ನು ಯೋಚಿಸದೆ ಕೇವಲ ಈ ಕಷ್ಟಗಳನ್ನು ಸೈಕಲ್ ಮೂಲಕ ಮರೆಯುವ ಪ್ರಯತ್ನ ಈ ಕಥೆಯು ಆಕರ್ಷಕವಾಗಿದೆ. ಕುಸುಮಳ ಬದುಕು ಸೈಕಲ್‌ನಿಂದ ಆನಂದ ಪಡೆಯುವುದು ಕಂಡು ಬರುತ್ತದೆ.

ಪಂಡಿತ್ ರಮಾಭಾಯಿ – 1998 ಕಥೆಯಲ್ಲಿ ಬ್ರಾಹ್ಮಣನಾದ ಶ್ರೀನಿವಾಸ ಧನಲಕ್ಷ್ಮಿ ಎಂಬ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಮುಂದೆ ಶ್ರೀನಿವಾಸನ ಮನೆಯವರೆಗೆ ನಾಚುವಂತೆ ಕ್ರಿಶ್ಚಿಯನ್ ಧರ್ಮದ ಧನಲಕ್ಷ್ಮಿ ಬ್ರಾಹ್ಮಣ ಸಂಪ್ರದಾಯ ನಾಚುವಂತೆ ಬ್ರಾಹ್ಮಣರ ಆಚಾರ ವಿಚಾರ

ಪಾಲಿಸುತ್ತಾಳೆ. ಆದರೆ ಮುಂದೆ ವಿಧಿಯಾಟ ಶ್ರೀನಿವಾಸಗೆ ಕ್ಯಾನ್ಸರ್ ಖಾಯಿಲೆಯಿದೆ ಎಂದು ತಿಳಿದಾಗ ಶ್ರೀನಿವಾಸನ ತಾಯಿ ಸೊಸೆಯನ್ನು ದೂರಮಾಡುವುದು ಮುಂದೆ ಶ್ರೀನಿವಾಸ ಹಾಗೂ ಧನಲಕ್ಷ್ಮಿ ಬ್ರಾಹ್ಮಣ ಜಾತಿಯಿಂದ ದೂರವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮರುಳುವುದಕ್ಕೆ ಕಾರಣ ಬ್ರಾಹ್ಮಣ ಜಾತಿಯಲ್ಲಿ ವಿಧವೆಯರನ್ನು ನಡೆಸಿಕೊಳ್ಳುವ ರೀತಿ ವಿಧವೆಯರ ಕಷ್ಟಗಳನ್ನು ಕಣ್ಣಾರೆ ಕಂಡ ಶ್ರೀನಿವಾಸ ಹೆಂಡತಿಗೆ ಹೇಳಿ ಕ್ರಿಶ್ಚಿಯನ್ ಆಗಿ ಬದಲಾಗುತ್ತಾನೆ. ಮುಂದೆ ಧನಲಕ್ಷ್ಮಿ ಮಗಳು ಸಹ ಬ್ರಾಹ್ಮಣ ಹುಡುಗನನ್ನು ಮದುವೆಯಾಗುವ ಸಂದರ್ಭದಲ್ಲಿ ಧನಲಕ್ಷ್ಮಿ ಹಿಂದಿನ ವಿಚಾರಗಳನ್ನು ಲೇಖಕರಿಗೆ ಹೇಳುತ್ತಾಳೆ. ತಾವು ಬಿಟ್ಟು ಬಂದ ಸಂಪ್ರದಾಯಕ್ಕೆ ಮತ್ತೆ ಮರಳುವ ವಿಚಾರ ಬಂದಾಗ ಆಗುವ ತಳಮಳ ಚಿತ್ರಿತವಾಗಿದೆ.

ಕೆ. ಸತ್ಯನಾರಾಯಣ ಕಥೆಯಲ್ಲಿ 'ಇನ್ನೊಬ್ಬ ವೇಶ್ಯೆಯ ಪ್ರಶಸ್ತಿ" ಕಥೆಯಲ್ಲಿ ಬರುವ ಪ್ರಮುಖ ಪಾತ್ರ ಕಲ್ಕತ್ತದಲ್ಲಿ ಲೇಖಕರ ಗೆಳೆಯನ ಮನೆಯಲ್ಲಿ ಸಿಕ್ಕುವ ಲಕ್ಷ್ಮಿ ಹುಲಿಯೂರುದುರ್ಗದವಳು. ಸೋದರ ಮಾವನ ಪುಸಲಾಯಿಸಿ ಕಲ್ಕತ್ತೆಗೆ ಕರೆದುಕೊಂಡು ಬಂದು ಕೊನೆಗೆ ಲೇಖಕರ ಕಾದಂಬರಿ ಸನ್ನಿಧಾನ ಪುಸ್ತಕದ ಮೂಲಕ ಇವಳ ವೃತ್ತಾಂತ ಕೊನೆಗೆ ನಿಮ್ಮ ಊರಿಗೆ ಹೋಗು ಎಂದು ಲಕ್ಷ್ಮಿಗೆ ಹೇಳಿದಾಗ ಉಳಿದ ತಂಗಿಯರಿಗೆ ಕೆಟ್ಟ ಹೆಸರು ಬರುತ್ತದೆ ಎಂದು ತಿಳಿದು ಯಾವ ಭಾಷೆ, ಯಾವ ಊರು, ಆದರೂ ಸರಿ ನಾನು ಇಲ್ಲೇ ಬದುಕುತ್ತೇನೆ ಎಂದು ಧೋರಣೆ ಲಕ್ಷ್ಮಿಯದು. ಈ ಕಥೆಯಲ್ಲಿ ಲಕ್ಷ್ಮಿ ವೇಶ್ಯೆಯಾಗಲು ಸಂದರ್ಭ ಕಾರಣ.

ಮುಂದೆ ಇದೇ ಕಥೆಯಲ್ಲಿ ಬರುವ ಸುಜಾತ ಎಂಬ ಹೆಣ್ಣುಮಗಳು ತಾನಾಗಿಯೇ ವೇಶ್ಯಾವಾಟಿಕೆಗೆ (ಪ್ರೌಢಶಾಲೆಯಲ್ಲಿ) ಸಹವಾಸದಿಂದ ಬಂದು ಕೆಟ್ಟು ಕೊನೆಗೆ ಮನೆಯವರಿಂದ ಅಣ್ಣನವರಿಂದ ದೂರವಾದಳು. ಮನೆಯವರು ಕೀಳಾಗಿ ಕಂಡರು ಸುಜಾತ ಮೊರಬರ ಸಾಹುಕಾರ ತನ್ನನ್ನು ಇಟ್ಟುಕೊಂಡಿರುವುದಾಗ, ಆದರೆ ಸಾಹುಕಾರನ ಇನಾಮಿನಿಂದ ಬಂದಿರುವ ತೋಟ, ಜಮೀನು ಮಾತ್ರ ಅಣ್ಣನ ಅತ್ತಿಗೆಯರಿಗೆ ಬೇಕು ಅಂದರೆ ಮೊದಲ ಕಥೆ ಅನಿವಾರ್ಯವಾದರೆ 2ನೇ ಕಥೆ ಸ್ವಇಚ್ಛೆಯಿಂದ ವೇಶ್ಯೆಯಾಗಿ ನರಳುವುದು.

ಹೀಗಿಲ್ಲಿ ಅಮೆರಿಕಾ ಕಥೆಯಲ್ಲಿ ಬರುವ ಸಾವಿತ್ರಿ ಎಂಬ ಪಾತ್ರ ಪ್ರಮುಖ ಪಾತ್ರವಾಗಿದೆ. ಶಂಕರರಾಯರಿಗೆ ಒಬ್ಬಳೇ ಮಗಳು. ಇವಳನ್ನು ಅಮೆರಿಕಾದಲ್ಲಿ ಕೆಲಸ ಮಾಡುವ ನಾಗರಾಜ ಎಂಬುವವನಿಗೆ ಕೊಟ್ಟು ಮದುವೆ ಮಾಡಿದರು. ನಂತರ ಕುಟುಂಬದ ಪ್ರತಿಷ್ಠೆ, ಘನತೆ ಹಾಗೂ ನಗರದಲ್ಲಿ ವಾಸಿಸುವ

ಸಾವಿತ್ರಿ ತಾಯಿಯ ಬಳಗದವರು ಹಾಗೂ ಶಂಕರರಾಯ ತಮ್ಮಂದಿರ ನಗರಗಳಲ್ಲಿ ವಾಸವಾಗಿದ್ದರು. ಇವರ ಪ್ರತಿಷ್ಠೆಗೆ ಬಿದ್ದ ಶಂಕರರಾಯ ಅಮೆರಿಕಾದಲ್ಲಿ ಕೆಲಸ ಮಾಡುವ ನಾಗರಾಜನಿಗೆ ಕೊಟ್ಟು ಮದುವೆ ಮಾಡಿದರು. ಮುಂದೆ ಆ ಅಮೆರಿಕಾದಲ್ಲಿ ನಾಗರಾಜ ಹಾಗೂ ಅತ್ತೆ ಮಾವನ ಕಾಟ ಹಾಗೂ 15ಲಕ್ಷ ರೂಪಾಯಿಯನ್ನು ಸಾವಿತ್ರಿ ತಂದೆ ಮನೆಯಿಂದ ತೆಗೆದುಕೊಂಡು ಬಾ ಎಂದು ಹೇಳಿದಾಗ ಸಾವಿತ್ರಿ ನಿರಾಕರಿಸಿದಾಗ ಮುಂದೆ ಅವಳಿಗೆ ಮಾನಸಿಕ ಕಿರುಕುಳ, ದೈಹಿಕ ಹಲ್ಲೆ ಮಾಡಿದರು. ಈ ರೀತಿಯಾಗಿ ನೊಂದ ಸಾವಿತ್ರಿ ಕೊನೆಗೆ "ಇಂದಿರಾಗಾಂಧಿ" ಯವರ ಸಹಾಯದಿಂದ ಭಾರತಕ್ಕೆ ಬಂದಳು ಕೊನೆಗೆ ಬಿ.ಎಡ್ ಮುಗಿಸಿ ಬೆಂಗಳೂರಿನ ಒಂದು ಸ್ಕೂಲಲ್ಲಿ ಕೆಲಸಕ್ಕೆ ಸೇರಿದಳು. ಈ ರೀತಿ ವರದಕ್ಷಿಣೆ ವಿಚಾರಗಳು ಸಹ ಕೆ.ಸತ್ಯನಾರಾಯಣ ಕಥೆಗಳಲ್ಲಿ ಅಡಕವಾಗಿದೆ. ಈ ರೀತಿ ಪ್ರತಿಷ್ಠೆಗಳಿಗೆ ಬಿದ್ದು ಅಮೆರಿಕಾಕ್ಕೆ ಹೋದ ಸಾವಿತ್ರಿ ಬದುಕು ಅನೇಕ ತಿರುವು ಕೊನೆಗೆ ತಾನೆ ಒಂದು ಬದುಕು ಕಟ್ಟಿಕೊಳ್ಳುವುದು ಸಹ ಅತ್ಯುತ್ತಮವಾಗಿದೆ.

ಅಡಿಟಿಪ್ಪಣಿ:
ಅಮೆರಿಕನ ಮನೆ, ಪರಸ್ಪರ ಪ್ರಕಾಶನ, 2016, ಪುಟ ಸಂಖ್ಯೆ – 186

ಸತ್ಯನಾರಾಯಣರ ಕಥೆಗಳಲ್ಲಿ ಮಹಿಳಾ ಸಮಸ್ಯೆ

ಕೆ.ಸತ್ಯನಾರಾಯಣರ ಕಥೆಗಳಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ಚಿಕ್ಕತಾಯಿ ಕಥೆಯಲ್ಲಿ ವ್ಯಕ್ತವಾಗಿರುವ ಸನ್ನಿವೇಶ ತನ್ನ ಮೇಲಧಿಕಾರಿ ಜೆ.ಪಿ. ಎಂಬ ಕ್ರಿಶ್ಚಿಯನ್ ಹುಡುಗಿಗೆ ಲೈಂಗಿಕ ಕಿರುಕುಳವನ್ನು ನೀಡಿದರೂ ಆಕೆ ತನ್ನ ಮೇಲಧಿಕಾರಿಗಳಿಗೆ ಅದನ್ನು ಹೇಳಿಕೊಳ್ಳುವ ಸಂದರ್ಭಗಳು ಹಾಗೂ ಅದರಲ್ಲೂ ಸಹ ವಿನಯವಂತಿಕೆ ಕಂಡು ಬರುತ್ತದೆ. ಮೇಲಧಿಕಾರಿಗಳು ಅವನನ್ನು ಬೇರೆ ಊರಿಗೆ ವರ್ಗ ಮಾಡಿದ್ದನ್ನು ತಿಳಿದ ಜೆ.ಪಿ. ಅವನನ್ನು ಬೇರೆ ವಿಭಾಗಕ್ಕೆ ವರ್ಗ ಮಾಡಿದ್ದರೆ ಸಾಕು ಅದು ಬಿಟ್ಟು ಬೇರೆ ಊರಿಗೆ ವರ್ಗಮಾಡಿದರೆ ಅವನಿಗೆ ಸಮಸ್ಯೆಯಾಗುತ್ತದೆ ಹಾಗೂ ಅವನ ವೈಯುಕ್ತಿಕ ಸಮಸ್ಯೆಗಳನು ಕಣ್ಣಾರೆ ಕಂಡ ಜೆ.ಪಿ. ಮಾನವೀಯತೆ ಈ ಕಥೆಯಲ್ಲಿ ಪ್ರಮುಖ ಸ್ಥಾನದಲ್ಲಿ ಕಂಡು ಬರುತ್ತದೆ.

ಹೊಸಕಾಲದ ಆಧುನಿಕ ಹುಡುಗಿಯಾದ ಜೆ.ಪಿ. ಕಾನೂನುಗಳ ಮೂಲಕ ತನಗೆ ಆದ ಅನ್ಯಾಯವನ್ನು ಸರಿಪಡಿಸಿಕೊಳ್ಳಬಹುದಿತ್ತು. ಆದರೆ ಆಕೆ ವರ್ಗಾವಣೆ ಮೂಲಕ ತನ್ನ ಸಮಸ್ಯೆಯನ್ನು ಬಗೆ ಹರಿಸಿಕೊಳ್ಳುವುದು ಒಂದು ಪಲಾಯನವಾದವಾಗಿದೆ.

ಕಥೆಯಲ್ಲಿ ಜೆ.ಪಿ. ಎಂಬ ಹುಡುಗಿ ತನಗೆ ಎಷ್ಟೇ ಕಿರುಕುಳ ಕೊಟ್ಟ ಅಧಿಕಾರಿಯ ಬಗ್ಗೆ ಒಂದು ರೀತಿ ಅನುಕಂಪ ಸಹ ಇರುವುದು ಕಂಡು ಬರುತ್ತದೆ.

ಈ ರೀತಿಯಾಗಿ ಜೆ.ಪಿ. ತನ್ನ ಬದುಕಿನ ಸಮಸ್ಯೆಗೆ ವರ್ಗಾವಣೆ ಮೂಲಕ ಉತ್ತರ ಕಂಡು ಕೊಳ್ಳುತ್ತಾಳೆ. ಅದರಲ್ಲೂ ಸಹ ಮಾನವೀಯತೆ ಮೆರೆಯುತ್ತಾಳೆ.

ಕೆ.ಸತ್ಯನಾರಾಯಣರವರ ನಿಜಕವಲು ಕಥೆಯಲ್ಲಿ ಒಂದು ಮಹಿಳಾಪಾತ್ರ ರಾಜಮ್ಮ. ರಾತ್ರಿ ಪಾಳಯದಲ್ಲಿ ತಮಿಳುನಾಡಿನ ಬಸ್‌ನಲ್ಲಿ ಅಂದರೆ ಕರ್ನಾಟಕ ಕಂಡಕ್ಟರ್ ಆಗಿ ಕೆಲಸ ಮಾಡುವ ಸಾಮಾನ್ಯ ಮಹಿಳೆ. ಪ್ರಾರಂಭದಲ್ಲಿ ಲೇಖಕರಿಗೆ ರೇಗುವ ಮೂಲಕ ಕಥೆ ಪ್ರಾರಂಭವಾಗುತ್ತದೆ. ಹಾಗೂ ಡಿಪೋ ಸೂಪರಿಡೆಂಟನವರ ಬಳಿ ಮೂಲಭೂತ ಸೌಕರ್ಯಗಳ ಬಗ್ಗೆ ಅಂದರೆ ಹೆಣ್ಣುಮಕ್ಕಳಿಗೆ ಸಾರಿಗೆ ವ್ಯವಸ್ಥೆಯಲ್ಲಿ ಕೆಲಸ ಮಾಡುವವರಿಗೆ ಸರಿಯಾದ ರೀತಿಯಲ್ಲಿ ಮೂಲಭೂತ ವ್ಯವಸ್ಥೆಯನ್ನು ನೀಡಿಲ್ಲಾ ಎಂಬ ಗಲಾಟೆ ಮೂಲಕ ಲೇಖಕರು ರಾಜಮ್ಮನ ವಿಷಯ ತಿಳಿಯುತ್ತಾರೆ.

ರಾಜಮ್ಮನ ಅಣ್ಣನು ಚೆನ್ನಾಗಿ ಓದಿಸಿದರು ಸಹ ಅವನು ಮನೆಯಳಿಯನಾಗಿ ಬದುಕುವುದು ಕೊನೆಯದಾಗಿ ತಂದೆಯ ಸಹಾಯದಿಂದ ಕಂಡಕ್ಟರ್ ಉದ್ಯೋಗ ದೊರೆಯುವುದು ಇದಕ್ಕೂ ಮುಂಚೆ ಆಕೆ ಗಾರ್ಮೆಂಟ್ಸ್‌ನಲ್ಲೂ ಸಹ ಉದ್ಯೋಗ ಮಾಡಿ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುವುದು.

ಕೊನೆಗೆ ರಾಜಮ್ಮನಿಗೆ ಮದುವೆಯಾಗಿ ಮಕ್ಕಳು ಸಹ ಆಗುತ್ತಾರೆ. ರಾಜಮ್ಮನ ಗಂಡ ರೋಡಲೈನ್ಸ್ ಕಂಪನಿಯಲ್ಲಿ ಕ್ಯಾಂಟಿನ ಮೇಸ್ತ್ರಿ ಕೆಲಸ ಅದು ಪ್ರೈವೇಟು ಆದರೂ ಸಹ ನಂಜಮ್ಮನ ಸಂಬಳ ಬೇಕು ಆದರೆ ಅವರ ಕೆಲಸದ ಅವಶ್ಯಕತೆ ಬೇಡ.

ರಾಜಮ್ಮನ ಬಳಿ ಗಂಡ ಮತ್ತು ಮಕ್ಕಳು ಎಲ್ಲರೂ ಸಹ ಕಾಸು ಕೀಳುವವರೆ ಆದರೆ ಅವಳ ಕಷ್ಟಗಳನ್ನು ಯಾರು ಸಹ ಅರ್ಥಮಾಡಿಕೊಳ್ಳದ ಸ್ಥಿತಿಯಲ್ಲಿ ರಾಜಮ್ಮ ಬದುಕುತ್ತಿದ್ದಾಳೆ.

ರಾಜಮ್ಮ ರಾತ್ರಿ ಪಾಳಯದ ಕಂಡಕ್ಟರ್ ಕೆಲಸ ಮಾಡಿಕೊಂಡು ತನ್ನ ಗಂಡ, ಮಕ್ಕಳು ಅವರ ವಿದ್ಯಾಭ್ಯಾಸ ಹಾಗೂ ಒಬ್ಬ ಮಗನ ಮದುವೆ 2ನೇಯವನ ಓದು ಎಲ್ಲವೂ ಸಹ ರಾಜಮ್ಮ ವ್ಯವಸ್ಥಿತವಾಗಿ ನಿಭಾಯಿಸುವ ಗಟ್ಟಿಯಾದ ಮಹಿಳೆ.

ಈ ಕಥೆಯಲ್ಲಿ ರಾಜಮ್ಮ ಒಬ್ಬ ಕಂಡಕ್ಟರ್ ಆಗಿ ಒಬ್ಬ ಗೃಹಿಣಿಯಾಗಿ, ಒಂದು ಸಂಸ್ಥೆಯಲ್ಲಿ ಹಾಗೂ ಒಂದು ಕುಟುಂಬದಲ್ಲಿ ಕಾರ್ಯನಿರ್ವಹಿಸುವ ಹೆಣ್ಣಾಗಿ ಕಂಡು ಬರುತ್ತಾಳೆ.

ಲೇಖಕರು ಹಾಗೂ ರಾಜಮ್ಮನ ಸಂವಾದದ ಮೂಲಕ, ರಾಜಮ್ಮ ಅಂತರಾಳ ಹಾಗೂ ಅವಳ ಬದುಕಿನ ಚಿತ್ರಣಗಳ ಬಹಿರಂಗವಾಗುತ್ತವೆ.

ತನ್ನ ಮನೆ ಸಮಸ್ಯೆ ಹೇಳುತ್ತ ರಾಜಮ್ಮ ಬನ್ರಲ್ ಒಂದು ಹಾಳಾಗಿದೆ ಅದನು ಹಾಕಿಸಿ ಎಂದು ಗಂಡ ಮಗನಿಗೆ ಹೇಳಿದರೆ ಅದು ಹೆಂಗಸರ ಕೆಲಸ ಎಂದು ಹೇಳುತ್ತಾರೆ ಎಂದು ಪರಿ. ಆಧುನಿಕ ಸಂದರ್ಭದಲ್ಲಿ ಸಹ ಮಹಿಳೆಯ ಸಾಕಷ್ಟು ಸಮಸ್ಯೆಗಳನ್ನು ಎದುರಿಸುವುದು ಅದರಿಂದ ಹೊರಬರಲು ಹೆಣಗಾಡುವುದೇ ರಾತ್ರಿಪಾಳಯದ ಉದ್ಯೋಗದಲ್ಲಿ ರಾಜಮ್ಮ ಅನುಭವಿಸುವ ತೊಂದರೆ ಹಾಗೂ ಡಿಪೋದಲ್ಲಿ ರಾಜಮ್ಮ ಮೊದಲಿನಿಂದಲೂ ಈವರೆಗೂ ಸದರವಾದ ರೀತಿ ನೋಡುವುದು. ರಾಜಮ್ಮನ

ಅಡಿಟಿಪ್ಪಣಿ:
ಸಾಹಿತ್ಯಕೃತಿ, ಅನುಭೂತಿ, ನವ್ಯೋತ್ತರ ಮುಖ್ಯ ಧ್ವನಿ, ಸಪ್ನಬುಕ್ ಹೌಸ್
ರಚನೆ ಮಲ್ಲಿಕಾರ್ಜುನಹಿರೇಮಠ, ಪುಟ ಸಂಖ್ಯೆ 55–56,

ಪರೀಕ್ಷೆ ಮಾಡೋಕೆ ಚೂರು ಮೇಲು ಸಂಪಾದನೆ ಇಲ್ಲದೆ ಇರುವ ರೂಟಿಗೆ ಹಾಕುತ್ತಾರೆ. ಇವು ವೃತ್ತಿ ಹಾಗೂ ಸಂಸಾರಿಕೆ 2 ತೊಂದರೆಗಳನ್ನು ರಾಜಮ್ಮ ಒಟ್ಟಿಗೆ ಎದುರಿಸುವುದು.

ಸಾಮಾನ್ಯ ಸರ್ಕಾರಿ ಕೆಲಸದ ಕಂಡಕ್ಟರ್ ಕೆಲಸದ ರಾಜಮ್ಮನ ವೃತ್ತಿ ರಾತ್ರಿಪಾಳಿಯದ ಕೆಲಸವಾದರು ಅಂಜದೆ ಅಳುಕದೆ ಗಟ್ಟಿಮನಸ್ಸಿನಿಂದ ಕೆಲಸ ಮಾಡುವುದು ಈ ನಡುವೆ ಸರ್ಕಾರ ಅವ್ಯವಸ್ಥೆಯ ವಿರುದ್ಧ ಸಹ ಪ್ರತಿಭಟಿಸುವುದು ಹಾಗೂ ತನ್ನ ಸಾಂಸಾರಿಕ ಬದುಕು ಅವ್ಯವಸ್ಥೆಯಿಂದ ಇದ್ದರು ಸಹ ಪ್ರೀತಿಯಿಂದ ಗೌರವಿಸುವ ಔದಾರ್ಯ ರಾಜಮ್ಮನ ಪಾತ್ರದಲ್ಲಿ ಕಂಡು ಬರುತ್ತದೆ.

ಇದೇ ರೀತಿ ಕಾರ್ಲ್‌ಮಾರ್ಕ್ಸ್ ನಂಜಮ್ಮನ ಪಾತ್ರವು ಸಹ ಮಹಿಳಾ ಸಮಸ್ಯೆ ಪಟ್ಟಿಗೆ ಸೇರಿಸಬಹುದು. ಅಂದರೆ ಕಾರ್ಲ್‌ಮಾರ್ಕ್ಸ್ ನಂಜಮ್ಮ ಸಾಮಾನ್ಯಳಲ್ಲಿ ಸಾಮಾನ್ಯಳು ಅವಳು ಮನೆಗೆಲಸ ಮಾಡುತ್ತಾ ಹಾಗೂ ಮನೆಗೆಲಸದ ಸಂದರ್ಭದ ಮನೆಯ ಒಡತಿಯ ಮಗಳ ಗರ್ಭಿಣಿಗೆ ಸಹಾಯ ಮಾಡುವುದು ಹೆಚ್ಚು ಕೆಲಸ ಮಾಡಬೇಡ ಎಂದು ಹೇಳುವುದು ಸಹ ಭಿನ್ನವಾಗಿದೆ. ಆದರೆ ತನ್ನ ಮಗಳು ಗರ್ಭಿಣಿಯಾದರು ನಿತ್ಯಕೆಲಸ ಮಾಡುವುದನ್ನು ಕಾಣಬಹುದು ಅದಕ್ಕೆ ನಂಜಮ್ಮ ನಾವು ಬಡವರು ಕಷ್ಟಗಳು ಸಾಮಾನ್ಯ ಶ್ರೀಮಂತಿಕೆ ಆ ರೀತಿ ಇಲ್ಲ ಎಂದು ಹೇಳುವುದು.

ಆದರೆ ನಂಜಮ್ಮ ಮಗಳ ಮಗುವಿಗೆ ಬ್ಯಾಂಕಿನಲ್ಲಿ ಹಣ ಇಡುವುದು ಹಾಗೂ ಮನೆಗೆಲಸದ ಮನೆಯ ಕಾರುಗಳ ವಿಚಾರಣೆ ಇವು ನಂಜಮ್ಮ ಭವಿಷ್ಯದ ಬಗ್ಗೆ ಇಟ್ಟುಕೊಂಡಿರುವ ಕನಸುಗಳು ಬಡವರಿಗೆ ಕುಂಬಳಗುಡಿನಲ್ಲಿ ಉಚಿತ ಮನೆ ಕೊಟ್ಟರು ಅದನ್ನು ಸ್ವೀಕರಿಸದೆ ಶ್ರೀಮಂತರ ಮನೆಯ ನಡುವೆ ವಾಸಿಸುವುದು ಸಹ ನಂಜಮ್ಮ ಬಡವರಲ್ಲಿ ಬಡವಿಯಾದರು ಭವಿಷ್ಯದ ಕನಸನ್ನೇ ಹೊತ್ತಿರುವ ದಿಟ್ಟ ಮಹಿಳೆ. ಅದಕ್ಕೆ ಆಕೆ ದುಡಿಮೆ ಮಾರ್ಗವನ್ನು ಕಂಡು ಕೊಂಡಿದ್ದಾಳೆ. ಹಾಗೂ ಬದುಕಿನಲ್ಲಿ ಅನೇಕ ಸಮಸ್ಯೆಗಳಿದ್ದರು ಸಹ ಅವನ್ನು ಮೆಟ್ಟಿ ಸಾಧಿಸಬೇಕೆಂಬ ಹಂಬಲ ನಂಜಮ್ಮ ಹಾಗೂ ರಾಜಮ್ಮ ಪಾತ್ರಗಳಲ್ಲಿ ಕಂಡು ಬಂದಿರುವುದನ್ನು ಕಾಣಬಹುದು.

ರಾಜಮ್ಮ ಒಬ್ಬ ಸರ್ಕಾರಿ ಕಂಡಕ್ಟರ್ ಆಗಿ ಅನುಭವಿಸುವ ಸಮಸ್ಯೆಗಳು ಭಿನ್ನವಾದರೂ ಸಹ ಅವಳ ಉದ್ಯೋಗ ಭದ್ರತೆ ಇದೆ ಆದರೆ ನಂಜಮ್ಮ ಯಾವುದೇ ಭದ್ರತೆ ಇಲ್ಲದೆ ಕನಸು ಕಾಣುವ ಬಡವಿ. 2 ಕಥೆಗಳಲ್ಲಿ ಭಿನ್ನಪಾತ್ರದ ಚಿತ್ರಣ ಕಂಡು ಬರುತ್ತದೆ.

ನಜೀರ್ ಸಾಬು ಚರಿತ್ರೆಯಲ್ಲಿ ಒಂದು ಸಭೆಯಲ್ಲಿ ನಡೆಯುವ ಕೇಂದ್ರಿಕರಣವನ್ನು ಕುರಿತು ಮಾತನಾಡುವಾಗ ಒಬ್ಬ ನಾಯಕಿ ಲಂಬಾಣಿಯವಳು ಈ ಜಿಲ್ಲಾ ಪರಿಷತ್ ಬಾರದೇ ಇದ್ದಿದ್ರೇ ನಾನು ತಾಲ್ಲೂಕ್ ಆಫೀಸ್ ಗುಮಾಸ್ತೆಯಾಗಿ ನಿವೃತ್ತಿಯಾಗ ಬೇಕಿತ್ತು. ಆದರೆ ಈ ಜಿಲ್ಲಾಪರಿಷತ್ ಬಂದಿದ್ದರಿಂದ ರಾಜಕೀಯವಾಗಿ ನಾನು ಬೆಳೆಯಲು ಸಾಧ್ಯವಾಯಿತು. ಚುನಾವಣೆಗೆ ನಿಂತುಕೊಂಡೆ ಜಿಲ್ಲಾಪರಿಷತ್‌ನಲ್ಲಿ ಉಪಾಧ್ಯಕ್ಷೆಯಾದೆ. ರಾಜಕೀಯ ಅದೃಷ್ಟ ಒಂದು ಕಥೆಯಾದರೆ ಮುಂದೆ ಅವಳನ್ನು ಮಾಜಿ ಶಾಸಕರು ಮದುವೆಯಾದರು. ಮುಂದೆ ಅವಳ ಗಂಡ ಎಮ್.ಎಲ್.ಸಿ. ಸಹ ಆಗುತ್ತಾನೆ. ನಜೀರ ಸಾಬ್ ಎಂಬ ಮಂತ್ರಿ ಮಂಡಲಪಂಚಾಯತ್ ಜಾರಿಗೆ ತಂದಿದ್ದರಿಂದ ಬೀಜಾಪುರದ ಮಹಿಳೆಯೊಬ್ಬಳು ಅದರಲ್ಲೂ ಮಹಿಳೆಯೊಬ್ಬಳು ರಾಜಕೀಯವಾಗಿ ಶಕ್ತಿಯುತವಾಗಿ ಮುಂದುವರಿಯಲು ಸಾಧ್ಯವಾಯಿತು. ಇದಕ್ಕೆ ಕುಟುಂಬದ ಸಹಕಾರ ಹಾಗೂ ಗಂಡನ ಸಹಕಾರ ಇತ್ತು. ಆದ್ದರಿಂದ ಆಕೆ ರಾಜಕೀಯದಲ್ಲಿ ಬಹಳ ಎತ್ತರಕ್ಕೆ ಬೆಳೆಯುತ್ತಾ ಸಾಗುತ್ತಾಳೆ. ಹಾಗೂ ಬೆಂಗಳೂರಿನಂತ ನಗರಕ್ಕೆ ಬಂದು ಸಭೆಯಲ್ಲಿ ಒಬ್ಬ ಹಳ್ಳಿಯ ಹೆಂಗಸು ಮಾತನಾಡುವುದು ಎಂದರೆ ಅದು ಸುಮ್ಮನೆ ಮಾತೆ ಹಾಗೂ ಮಹಿಳೆಯೊಬ್ಬಳು ರಾಜಕೀಯದಲ್ಲಿ ಮುಂದುವರಿಯುವುದಕ್ಕೆ ಕುಟುಂಬ ಹಾಗೂ ಗಂಡನು ಸಹ ಕಾರಣನಾಗಿದ್ದಾನೆ. ಗಂಡನ ಸಹಕಾರದ ಜೊತೆ ಈ ಬೀಜಾಪುರದ ಮಹಿಳೆ ರಾಜಕೀಯದಲ್ಲಿ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲಾ!.

ರಾಜಕೀಯದಲ್ಲಿ ಗಂಡನ ಸಹಕಾರ ಇಲ್ಲದ ಸೀತಾಲಕ್ಷ್ಮಿ ಕಥೆ ಒಂದು ರೀತಿ(ಇದು ಬೀಜಾಪುರದ ಕಥೆಯಾದರೆ) ಬಿಸಿಲುವಾಡಿ ಎಂಬ ಊರಿನ ಸೀತಾಲಕ್ಷ್ಮಿ ಕಥೆ ವ್ಯತಿರಿಕ್ತ ಅಂದರೆ ಹುಟ್ಟಿದ ನಾಲ್ಕು ಜನ ಹೆಣ್ಣು ಮಕ್ಕಳ ಮಧ್ಯೆ ಹಾಗೂ ಮದುವೆಯಾಗದ ಬಿಸಿಲು ವಾಡಿಯ ಸಾಮಾನ್ಯ ಶಾಲಾಮೇಷ್ಟ್ರು ಶ್ರೀನಿವಾಸಯ್ಯನನ್ನು ಶಾಲಾ ದಿನಗಳಲ್ಲೇ ಮದುವೆಯಾದ ಜೋಡಿಗಳನು ನೋಡಿ ನಾನು ಈ ರೀತಿ ಬದುಕಬೇಕು ಎಂಬ ಆಸೆ ಹಾಗೂ ಬದುಕನ್ನು ನಾನಾ ರೀತಿ ಕಟ್ಟಿಕೊಳ್ಳಬೇಕು ಎಂಬ ಹಂಬಲದಿಂದ ಸೀತಾಲಕ್ಷ್ಮಿ ಗಂಡನ ಚೀಟಿ ವ್ಯವಹಾರ ಮಾಡುವುದು ಮುಂತಾದ ಕೆಲಸಗಳನ್ನು ಮಾಡುತ್ತಾಳೆ.

ಗಂಡ ತನ್ನ ಶಾಲಾಕೆಲಸ, ವ್ಯವಸಾಯ, ಚೀಟಿವ್ಯವಹಾರ ಈ ರೀತಿ ತನ್ನ ಕೆಲಸ ತಾನು ಎಂಬುವ ರೀತಿ ಇರುವ ಶ್ರೀನಿವಾಸಯ್ಯ. ಆದರೆ ಸೀತಾಲಕ್ಷ್ಮಿ ಬಹಳ ಒಳ್ಳೆಯ ಸಿಲ್ಕ್ ಸೀರೆ ಹಾಕಿಕೊಳ್ಳದೆ ಹೋದ್ರು ಸಹ ಸಾಮಾನ್ಯವಾದ ಸೀರೆಯ ಊರಿನ ಪಿ.ಡಿ.ಓ ಗಳು ಹಾಗೂ ಮುಂತಾದವರ ಜೊತೆ ದೇಶದ ಸ್ಥಿತಿಗತಿಗಳ ಬಗ್ಗೆ ಚರ್ಚಿಸುತ್ತಿದ್ದಳು. ಮುಂದೆ ಸೀತಾಲಕ್ಷ್ಮಿಗೆ ಮುಂದೆ ತನ್ನ ಮಾತುಗಾರಿಕೆ, ಛಾತಿಗಳಿಂದ

ಚುನಾವಣೆಗೆ ನಿಂತು ಗೆದ್ದಳು. ಮುಂದೆ ಮಂಡಲ್ ಪಂಚಾಯ್ತಿ ಉಪಾಧ್ಯಕ್ಷೆಯಾಗಿಯೂ ಸಹ ಮುಂದುವರಿದಳು. ಇದರಿಂದ ಮುಂದೆ ಸೀತಾಲಕ್ಷ್ಮಿ ಮನೆಕೆಲಸ ಸಂಸಾರ ಒಂದು ಕಡೆಯಾದರೆ ರಾಜಕೀಯ ಮತ್ತೊಂದು ಕಡೆ. ಈ ರೀತಿಯಾಗಿ ಹುದ್ದೆಯಿಂದ ನಿಷ್ಠೆಯಿಂದ ಕೆಲಸ ಮಾಡಿ ಮುಂದೆ ರಾಮಕೃಷ್ಣ ಹೆಗಡೆಯವರು ಮಂಡಲ ಪಂಚಾಯ್ತಿ ವಾರ್ಷಿಕೋತ್ಸವ ಮಾಡಿದಾಗ ಅದಕ್ಕೂ ಗಂಡನ ಜೊತೆ ಹೋಗಿ ಬಂದಿದ್ದಳು.

ಈ ರೀತಿಯಾಗಿ ಸೀತಾಲಕ್ಷ್ಮಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯ ಬೇಕಾದರೆ ಅವಳಿಗೆ ತನ್ನ ಗರ್ಭಕೋಶ ತೆಗೆಯಬೇಕು ಎಂಬ ತೊಂದರೆ ಕಾಣಿಸಿಕೊಳ್ಳುತ್ತದೆ. ಮುಂದೆ ಈ ತೊಂದರೆಯಿಂದ ಅವಳು ಮನೆಯಲ್ಲೇ ಉಳಿದು ಗಂಡನಿಗೆ ಅಡುಗೆ ಮಾಡಿ ಹಾಕಬೇಕಾಗುತ್ತದೆ. ಈ ಮಧ್ಯೆ ಮೈಸೂರಿನಲ್ಲಿ ಅವಳಿಗೆ ಆಪರೇಷನ್ ಆಗಿ ಮುಂದೆ ಗಂಡ ಅವಳನ್ನು ಕಾಣಲು ಹೋಗುತ್ತಾನೆ. ಅದರಲ್ಲೂ ಅವನಿಗೆ ಅಂಜಿಕೆ ಅವಳು ಒಬ್ಬ ಉಪಾಧ್ಯಕ್ಷೆ ಹಾಗೂ ನಾನು ಒಬ್ಬ ಶಾಲಾ ಮೇಷ್ಟ್ರು ಮುಂದೆ ಅವಳನ್ನು ಭೇಟಿಯಾಗುತ್ತಾನೆ. ಅಂದರೆ ಯಾವುದೇ ಒಂದು ಕುಟುಂಬ ಹೆಣ್ಣು ಮುಂದೆ ಬರಲು ಕುಟುಂಬ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಈ ಹೆಣ್ಣುಮಗಳು ರಾಜಕೀಯವಾಗಿ ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಾಗುವುದಿಲ್ಲ.

ಕೆ. ಸತ್ಯನಾರಾಯಣರವರ ಮತ್ತೊಂದು ಕಥೆಯಲ್ಲಿ ಕಂಡುಬರುವ ಪ್ರಮುಖ ಪಾತ್ರ ಅಮೆರಿಕನ್ ಮನೆಯಲ್ಲಿ ಕಂಡುಬರುವ ವೇದತ್ತೆ. ಯಾವುದೋ ಒಂದು ಪ್ರೆಸ್ಟೀಜ್‌ಗೆ ಬಿದ್ದು ಭಾರತೀಯ ಅಮೆರಿಕನನ್ನು ಮದುವೆಯಾಗಿ ಅಮೆರಿಕಾದಲ್ಲಿ ಹಪ್ಪಳ ಉಪ್ಪಿನಕಾಯಿ ಚಟ್ನಿಪುಡಿ ಮುಂತಾದವುಗಳನ್ನು ಮಾರಿಕೊಂಡು, ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ಹಾಗೂ ಅಮೆರಿಕಾ ದೇಶದಲ್ಲಿ ಒಂದು ಸಾಮಾನ್ಯ ಹೆಣ್ಣು ತನ್ನ ಬದುಕನ್ನು ಕಟ್ಟಿಕೊಳ್ಳಲು ಪಡುವ ಪ್ರಯತ್ನಗಳು ಹಾಗೂ ಗಂಡ ರೀಯಲ್ ಎಸ್ಟೇಟ್ ನಡೆಸುವುದಾಗಿ ಹೇಳಿದರು ಸಹ ಅವನ ಸಂಪಾದನೆ ಅಷ್ಟಕಷ್ಟೆ ಹಾಗೂ ಇದಕ್ಕಾಗಿ ವೇದತ್ತೆ ಅಮೆರಿಕಾದಲ್ಲಿ ಕೇರ್‌ಟೇಕರ್ ಆಗಿ ಹಾಡುಗಾರತಿಯಾಗಿ, ನಿತ್ಯ ಸಾಮಾನು ಮಾರುವ ಮಹಿಳೆಯಾಗಿ ಬದುಕನ್ನು ಕಟ್ಟಿಕೊಳ್ಳುತ್ತಾಳೆ.

ಭಾರತೀಯ ಸಂಪ್ರದಾಯದ ಹೆಣ್ಣು ಮಗಳು ಅಮೆರಿಕಾ ದೇಶದಲ್ಲಿ ಬದುಕಿನ ಅನಿವಾರ್ಯತೆಗಳನ್ನು ಎದುರಿಸುವ ಹಾಗೂ ಅಮೆರಿಕಾ ದೇಶದ ಮೇಲಿನ ಆಸೆಯಿಂದ ಮಧ್ಯಮವರ್ಗದ ಹೆಣ್ಣುಮಗಳು

ಪಡುವ ಕಷ್ಟಗಳನ್ನು ಅಮೆರಿಕನ ಮನೆಯಲ್ಲಿ ವೇದತ್ತೆ ಮೂಲಕ ಕಾಣಬಹುದು ಕೊನೆಯದಾಗಿ ಲೇಖಕರು ಈ ಚಟ್ನಿಪುಡಿ ಹಪ್ಪಳ ಮಾರುವುದನು ಮಂಡ್ಯ ಹಾಗೂ ಮದ್ದೂರಿನಲ್ಲೇ ಮಾಡಬಹುದು ಎಂದು ಹೇಳಿದಾಗ ವೇದತ್ತೆ ಒಮ್ಮೆ ಅಮೆರಿಕಾಕ್ಕೆ ಬಂದ ಮೇಲೆ ಮತ್ತೇ ಏನು ಸಾಧ್ಯವಿಲ್ಲ ಎಂದಾಗ ಹೋಗೋಣ ಅದು ಬಿಟ್ಟು ಅತೀ ಮಾಡುವ ಯೋಚನೆ ಯಾಕೆ ಎಂದು ಹೇಳುವ ವೇದತ್ತೆ ನಾನು ನಿಂತ ನೆಲದಲ್ಲಿ ಏನು ಮಾಡಿದರು ಸರಿ ಆದರೆ ಹುಟ್ಟುವ ಊರಿನಲ್ಲಿ ಅದು ಸಾಧ್ಯವಿಲ್ಲ ಎಂದು ಹೇಳುವ ಮಧ್ಯಮವರ್ಗದ ಹೆಣ್ಣುಮಗಳಾಗಿ ವೇದತ್ತೆ ಕಂಡು ಬರುತ್ತಾಳೆ. ಕೆ. ಸತ್ಯನಾರಾಯಣರವರ "ಸೈಕಲ್ ಇನ್ನೊಂದು ಸಾಕು" ಎಂಬ ಕಥೆಯಲ್ಲಿ 'ಕುಸುಮ' ಎಂಬ ಹೆಣ್ಣುಮಗಳು ಸಾಮಾನ್ಯ ಮಧ್ಯಮವರ್ಗದ ಹೆಣ್ಣು ಮಗಳು. ಅವಳಿಗೆ ವಾರದಲ್ಲಿ 3 ದಿನ ಮಾತ್ರ ಸೈಕಲ್ ಸಿಗುತ್ತದೆ. ಇವಳ ಮನೆ ಇರುವುದು ಬೆಂಗಳೂರಿನ ಪಾದರಾಯನಪುರದಲ್ಲಿ. ಇವಳು ಕೆಲಸ ಮಾಡುವ ಶಾಲೆ ಇರುವುದು. ಬೆಂಗಳೂರಿನ ಬಸವೇಶ್ವರನಗರದ ಮತ್ತೊಂದು ತುದಿಯಲ್ಲಿ ಮೋತಿಚಂದ ಸ್ಮಾರಕ ಹೈಸ್ಕೂಲಿನಲ್ಲಿ ಸೋಷಿಯಲ್ ಸ್ಟಡೀಸ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದಳು. ವಾರದಲ್ಲಿ 3 ದಿನ ಸೈಕಲ್ ಸಿಗುವುದಿಲ್ಲ. ಬುಧವಾರ – ಗುರುವಾರ ಮಗಳು ಪಂಕಜ ಸೈಕಲ್ ತೆಗೆದುಕೊಂಡು ಹೋಗುತ್ತಾಳೆ. ಶುಕ್ರವಾರ ಮಗ ನಾಗರಾಜ ಸೈಕಲ್ ತೆಗೆದುಕೊಂಡು ಹೋಗುತ್ತಾನೆ. ಭಾನುವಾರ ಸಹ ನಾಗರಾಜನೇ (ಮಗ) ಸೈಕಲ್ ಉಪಯೋಗಿಸುತ್ತಾನೆ. ಈ ರೀತಿಯಾಗಿ ಒಂದು ಬಾಡಿಗೆ ಮನೆಯಲ್ಲಿ ವಾಸವಾಗಿರುವ ಕುಸುಮಾಳ ಗಂಡನ ಹೆಸರು ವಿಶ್ವನಾಥ. ವಿಶ್ವನಾಥ ಕೂಡ ಸೈಕಲ್‌ನಲ್ಲೇ ಪ್ಯಾಕ್ಟರಿಗೆ ಹೋಗುತ್ತಾನೆ. 2 ಸೈಕಲ್ ಇರುವುದರಿಂದ ಈ ಸಮಸ್ಯೆ ಹೆಚ್ಚಾಗದೆ 3 ಸೈಕಲ್ ತೆಗೆದುಕೊಳ್ಳಲು ನಾನಾ ಪ್ರಯತ್ನ ಮಾಡಿದರು ಸಹ ಸಾಧ್ಯವಾಗದ ಸ್ಥಿತಿಗೆ ಬಂದಿದ್ದಾರೆ. ಕೊನೆಗೆ ಒಂದು ಸೈಟು ತೆಗೆದುಕೊಳ್ಳಲು ಹೋಗಿ ಅಲ್ಲೂ ಸಹ ಸಮಸ್ಯೆ ಎದುರಾಗಿದೆ. ಈ ಕಥೆಯಲ್ಲಿ ಕುಸುಮ ಒಬ್ಬ ಶಾಲಾ ಶಿಕ್ಷಕಿಯಾಗಿ ಯಾವುದೇ ಟ್ರಾಫಿಕ್ ಹಾಗೂ ಬಸ್ಸಿನಲ್ಲಿ ಜನಸಾಮಾನ್ಯರಿರುವ ಬಸ್ಸಿನಲ್ಲಿ ಹೋಗಲು ಇಷ್ಟಪಡದೆ ತನ್ನ ಸೈಕಲ್‌ನಲ್ಲಿ ವಾರದಲ್ಲಿ 3 ದಿನ ಸೈಕಲ್‌ನಲ್ಲಿ ಶಾಲೆಗೆ ಹೋಗಲು ಸಾಕಷ್ಟು ಇಷ್ಟಪಡುತ್ತಾಳೆ. ಬುಧವಾರ, ಗುರುವಾರ, ಶುಕ್ರವಾರ ಬಂದರೆ ಸಾಕು ಮನೆಯ ಸಾಕಷ್ಟು ಕೆಲಸಗಳನ್ನು ಮುಗಿಸಿ ಸೈಕಲ್‌ಗಾಗಿ ಕಾಯುತ್ತಾಳೆ. ಒಮ್ಮೆ ಈ ಮಧ್ಯೆ ಶಾಲೆಗೆ ಬಂದ ಧಾರವಾಡ ಜಗದೀಶ ಹಿರೇಮಠ್ ಮ್ಯಾಜಿಕ್ ಮಾಡ್ತೀನಿ ಎಂದು ಹೇಳಿ ಕುಸುಮಳನ್ನು ವೇದಿಕೆಗೆ ಕರೆದು ಮೋಡಿ ಮಾಡಿ ನೀನಗೇನು ಬೇಕು ಎಂದು ಹೇಳಿದಾಗ ಇನ್ನೊಂದು ಸೈಕಲ್ ಸಾಕು ಎಂದು ಹೇಳಿದಾಗ ಶಾಲೆಯವರು ಮ್ಯಾಜಿಕ್ ಮಾಡುವವರು ಸೈಕಲ್ ಹೇಗೆ ಕೊಡುತ್ತಾನೆ ಎಂದು ಹಾಸ್ಯ ಮಾಡುತ್ತಿದ್ದರು.

ಕಥೆಯಲ್ಲಿ ಕುಸುಮ ಸಾಮಾನ್ಯ ಮಧ್ಯಮ ವರ್ಗದ ಕುಸುಮ ಶಾಲಾ ಶಿಕ್ಷಕಿಯಾಗಿ, ಮನೆಯ ಒಡತಿಯಾಗಿ, ತಾಯಿಯಾಗಿ, ಗಂಡನಿಗೆ ಹೆಂಡತಿಯಾಗಿ ಕೊನೆಗೆ ಸಾಮಾನ್ಯ ಒಂದು ಸೈಕಲ್‌ನನ್ನು ಖರೀದಿ ಮಾಡಲು ಸಾಧ್ಯವಾಗದ ಅಸಹಾಯಕತೆ ಕುಸುಮಾಳಲ್ಲಿ ಕಂಡು ಬರುತ್ತದೆ. ಈ ಅಸಹಾಯಕತೆಯಿಂದ ಬಸ್‌ಡ್ರೈವರ್ ನಿಂದ ಬೈಯಿಸಿ ಕೊಳ್ಳುವುದು ಹಾಗೂ ಮಕ್ಕಳಿಗಾಗಿ ವಾರದಲ್ಲಿ 3 ದಿನ ಸೈಕಲ್ಲನ್ನೇ ಮಕ್ಕಳಿಗೆ ನೀಡಿ ತಾನು ಬಸ್‌ನಲ್ಲಿ ಹೋಗುವುದು ಒಂದು ಅಸಹಾಯಕತೆಯ ಸನ್ನಿವೇಶ.

ಕಥಾನಾಯಕಿ ಈ ಎಲ್ಲಾದರ ನಡುವೆ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನ ಹಾಗೂ ಬದುಕಿನ ಜೊತೆ ತನ್ನ ಸೈಕಲ್‌ನಲ್ಲಿ ಸಾಗುವಾಗ ಈ ಬದುಕಿನ ಪರಿಸ್ಥಿತಿಗಳು ಮರೆಯುವುದು ಕಂಡು ಬರುತ್ತದೆ. ಈ ಕಥೆ ಮಧ್ಯಮ ವರ್ಗದ ಒಬ್ಬ ಮಹಿಳೆಯ ಜಂಜಾಟವನ್ನು ಕಟ್ಟಿಕೊಡುತ್ತದೆ. ಹಾಗೂ ಸಣ್ಣ ಸಣ್ಣ ವಸ್ತುಗಳಿಂದ ಮಧ್ಯಮವರ್ಗ ದೊಡ್ಡ ದುಃಖಗಳನ್ನು ಮರೆಯುವುದು ಹಾಗೂ ಆ ವಸ್ತುಗಳನ್ನು ಪಡೆಯಲು ಪ್ರಯತ್ನಿಸುವುದು ಕಥೆಯಲ್ಲಿ ಕಂಡು ಬರುತ್ತದೆ.

ಈ ಕಥೆಯಲ್ಲಿ ಕಂಡು ಬರುವ ಪ್ರಮುಖ ಅಂಶವೆಂದರೆ ಮಧ್ಯಮವರ್ಗ ಹಾಗೂ ಕುಸುಮಳ ಬಯಕೆ ಅದು ಸಾಧ್ಯವಾಗದೆ ಹೋದಾಗ ಇನ್ನು ಉಳಿದ ವಾರದ 3 ದಿನಗಳಾದರು ಸೈಕಲ್ ಸಿಕ್ಕುವುದರಿಂದ ಹೊಸ ಸೈಕಲ್‌ನಲ್ಲಿ ಹಳೆಯ ಸೈಕಲ್‌ನಲ್ಲಿ ಉಳಿದ 3 ದಿನಗಳನ್ನೇ ಆನಂದದಿಂದ ಅನುಭವಿಸುವ ಕುಸುಮ ಮಧ್ಯಮವರ್ಗದ ಸಾಮಾನ್ಯ ಹೆಣ್ಣುಮಗಳ ಅಸಹಾಯಕತೆ ಅನುಕಂಪ ಉಂಟುಮಾಡುತ್ತದೆ.

ಕೆ. ಸತ್ಯನಾರಾಯಣರವರ ಅ–ಪಂಡಿತ್ ರಮಾಬಾಯಿ – 1988ರ ಕಥೆಯಲ್ಲಿ ಬ್ರಾಹ್ಮಣ ಕುಟುಂಬದ ಶ್ರೀವಿನಾಸ ಎಂಬ ವ್ಯಕ್ತಿ ಧನಲಕ್ಷ್ಮಿ ಎಂಬ ಕ್ರಿಶ್ಚಿಯನ್ ಹುಡುಗಿಯನ್ನು ತಾನು ಮ್ಯಾನೇಜಮೆಂಟ ಓದುತ್ತಿರುವಾಗ ಪರಸ್ಪರ ಇಬ್ಬರು ಸಹ ಪ್ರೀತಿಸಿ ಮದುವೆಯಾದರು. ಮುಂದೆ ಶ್ರೀನಿವಾಸ ಮನೆಯವರು ಬಹಳ ಸಂಪ್ರದಾಯ ಕುಟುಂಬ ಹಾಗೂ ತಂದೆ ಬ್ಯಾಂಕೊಂದರ ಅಧ್ಯಕ್ಷರಾಗಿದ್ದರು ಹಾಗೂ ಪ್ರತಿಷ್ಠಿತರಾಗಿದ್ದರು. ಧನಲಕ್ಷ್ಮಿ ತಂದೆ ನಾಡಾರ್ ಜಾತಿಗೆ ಸೇರಿದ ಸೈನ್ಯಧಿಕಾರಿಯಾಗಿದ್ದ ಬಹುಭಾಗ ನದಿಯ ಪ್ರದೇಶದಲ್ಲೇ ಕಾಲ ಕಳೆದಿದ್ದು. ಹಾಗೂ ಒಮ್ಮೆ ಪಾಕಿಸ್ತಾನದ ಜೊತೆ ಯುದ್ಧವಾದಾಗ ಕಾಲ ಕಳೆದಿದ್ದು ಹಾಗೂ ಒಮ್ಮೆ ಪಾಕಿಸ್ತಾನದ ಜೊತೆ ಯುದ್ಧವಾದಾಗ ಗುಂಡು ತಗುಲಿ 2 ತಿಂಗಳು ನಾಡಾರ ಆಸ್ಪತ್ರೆಯಲ್ಲಿದ್ದಾಗ ಆರೈಕೆ ಮಾಡಿದ ಸೂಸಾನ ಎಂಬ ಉತ್ತರದ ಕ್ರಿಶ್ಚಿಯನ್ ಒಬ್ಬಳನ್ನು ಮದುವೆಯಾದ.

ಇವಳ ಮಗಳೆ ಧನಲಕ್ಷ್ಮಿ. ಮುಂದೆ ಧನಲಕ್ಷ್ಮಿ ಸಹ ಶ್ರೀನಿವಾಸನನ್ನೇ ಪ್ರೀತಿಸಿ ಮದುವೆಯಾಗಿ ಅವಳು ಅಯ್ಯಂಗಾರ ಬ್ರಾಹ್ಮಣರೇ ನಾಚುವಂತೆ ಸಂಪ್ರದಾಯ ಆಚಾರ ವಿಚಾರ ಪಾಲಿಸುವ ಹೆಣ್ಣಾಗುತ್ತಾಳೆ. ಆದರೆ ವಿಧಿಯಾಟ ಬೇರೆಯಾಗಿರುತ್ತದೆ. ಶ್ರೀನಿವಾಸನಿಗೆ ಕ್ಯಾನ್ಸರ್ ಬಂದು ಬಿಡುತ್ತದೆ. ಆ ಕಾರಣಕ್ಕಾಗಿ ಬಹಳ ಪ್ರೀತಿಯಿಂದ ಇರುತ್ತಿದ್ದ ಶ್ರೀನಿವಾಸನ ತಾಯಿ ಧನಲಕ್ಷ್ಮಿಯಿಂದ ದೂರವಾಗುತ್ತಾಳೆ. ಮುಂದೆ ಶ್ರೀನಿವಾಸನ ಮನೆಯವರು ಧನಲಕ್ಷ್ಮಿ ಹಾಗೂ ಅವರ 3 ಮಕ್ಕಳನ್ನು ದೂರವಿಡುತ್ತಾರೆ. ಮುಂದೆ ಶ್ರೀನಿವಾಸನ ಸಾಯುವ ಮುನ್ನ ನೀವು ನಾನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗೋಣ. ಏಕೆಂದರೆ ಬ್ರಾಹ್ಮಣ ಜಾತಿಯಲ್ಲಿ ವಿಧವೆಯರನ್ನು ನಡೆಸಿಕೊಳ್ಳುವ ರೀತಿಯೇ ಬೇರೆ. ಅದಕ್ಕೆ ಅವನು ಕಂಡಿದ್ದ ತನ್ನ ಮನೆತನದ ಉದಾಹರಣೆ ಹೇಳುತ್ತಾನೆ.

* ಒಬ್ಬಳು ಬಹು ಹಿಂದೆಯೇ ತಲೆ ಬೋಳಿಸಿಕೊಳ್ಳಲು ನಿರಾಕರಿಸಿ ಜೋಲಾರ್‌ಪೇಟೆಗೆ ಹೋಗಿ ಸೂಳೆ ಆದದ್ದು

* ಇನ್ನೊಬ್ಬಳು ಜಮೀನ್ದಾರ ಭಾವನ ಮನೆಯಲ್ಲಿ ಉಳಿಗದವಳಾಗಿ ನಂತರ ಅವನ ಕಾಮಪಿಪಾಸೆಯನ್ನು ಜೀವನದುದ್ದಕ್ಕೂ ಪೂರೈಸಿದ್ದು.

ಈ ರೀತಿಯ ಕಟ್ಟುಪಾಡುಗಳಿರುವ ಬ್ರಾಹ್ಮಣ ಸಮಾಜದಲ್ಲಿ ಬದುಕುವುದಕ್ಕಿಂತ ಕ್ರಿಶ್ಚಿಯನ್ ಸಮಾಜದಲ್ಲೇ ಮತ್ತೊಂದು ಮದುವೆ ಮಾಡಿಕೊಂಡು ಬದುಕಬಹುದು ಎಂಬ ನಿಲುವು ಶ್ರೀನಿವಾಸನದು ಹಾಗೂ ಬ್ರಾಹ್ಮಣ ಸಂಪ್ರದಾಯವನ್ನು ಚಾಚೂ ತಪ್ಪದೆ ಪಾಲಿಸಿದ ಧನಲಕ್ಷ್ಮಿ ಗಂಡನ ಕ್ಯಾನ್ಸರಿನಿಂದ ಅತ್ತೆ ದೂರವಾಗುತ್ತಾಳೆ. ಮುಂದೆ ಗಂಡನ ಮಾತಿನಂತೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರರಾಗುತ್ತಾರೆ. ತನ್ನ 3ನೇ ಮಗಳು ಸರೋಜಿನಿ ತನ್ನ ಸಹಪಾಠಿ ರಾಮನ್‌ನನ್ನು ಪ್ರೀತಿಸಿ ಮದುವೆಯಾಗುತ್ತೇನೆ ಎಂದಾಗ ಎದುರಾಗುವ ಸಮಸ್ಯೆಗಳನ್ನು ಲೇಖಕರ ಜೊತೆ ಕಥಾನಾಯಕಿ ಹೇಳುತ್ತಿದ್ದಾಳೆ.

ಯಾವುದೇ ಒಂದು ಧರ್ಮ ಸಾಕಷ್ಟು ಬದಲಾವಣೆಗೆ ಅವಕಾಶ ಮಾಡಿಕೊಡಬೇಕು. ಆದರೆ ಬ್ರಾಹ್ಮಣ ಸಮಾಜ ಅದಕ್ಕೆ ಅವಕಾಶ ಮಾಡಿಕೊಡದೆ ಇರುವುದು ಸಹ ಹೆಣ್ಣಿನ ಸಮಸ್ಯೆಯಾಗಿ ವಿಧವೆ ಹೆಣ್ಣುಮಕ್ಕಳನ್ನು ಬ್ರಾಹ್ಮಣ ಸಮಾಜ ಕಾಣುವ ರೀತಿ ಭಿನ್ನ ಹಾಗೂ ವ್ಯತಿರಿಕ್ತವಾಗಿದೆ.

ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣ ಜಾತಿ ಶ್ರೇಷ್ಠ ಎಂದು ಹೇಳುವ ನಾವು ಅವರ ಕಂದಾಚಾರಗಳು, ಮಡಿ–ಮಡಿವಂತಿಕೆ ಬ್ರಾಹ್ಮಣ್ಯ ಇವುಗಳಿಂದ ಬ್ರಾಹ್ಮಣ ಹೆಣ್ಣುಮಕ್ಕಳು ನರಳುವ ಪರಿಸ್ಥಿತಿಗೆ ಬಂದಿವೆ.

ಅನ್ಯ ಧರ್ಮದ ಒಬ್ಬ ಹೆಣ್ಣುಮಗಳು ಬ್ರಾಹ್ಮಣ ಹುಡುಗನನ್ನು ಮದುವೆಯಾದ ಸಂದರ್ಭದಲ್ಲಿ ವಿಧವೆಯಾಗಿ ಅನುಭವಿಸುವ ನೋವುಗಳನ್ನು ಕಂಡಿದ್ದ ಗಂಡ ಶ್ರೀನಿವಾಸನ ಮತಾಂತರದ ಮೂಲಕ ಬದಲಾವಣೆಗೆ ಅವಕಾಶ ಮಾಡಿಕೊಡುತ್ತಾನೆ. ಮುಖ್ಯವಾಗಿ ಬ್ರಾಹ್ಮಣ ಜಾತಿಯಲ್ಲಿ ವಿಧವೆಯರ ಪರಿಸ್ಥಿತಿ ಹಾಗೂ ಅವರಿಗೆ ಆ ಸಮಾಜದಲ್ಲಿ ಕಾಣುವ ರೀತಿ–ನೀತಿ ಹಾಗೂ ಶ್ರೀನಿವಾಸ ತನ್ನ ಮನೆಯ ಹಿಂದಿನ ತಲೆಮಾರಿನ ಬ್ರಾಹ್ಮಣ ವಿಧವೆಯ ಪರಿಸ್ಥಿತಿಯನ್ನು ಹೇಳುವ ಮೂಲಕ ಅನ್ಯಮಾರ್ಗಗಳಿಗೆ ಮುಂದಾಗುತ್ತಾನೆ.

ಈ ಕಥೆಯಲ್ಲಿ ಬೇರೆ ಕೆಳವರ್ಗದ ಜಾತಿಯಲ್ಲಿ ಗಂಡ ಕಳೆದುಕೊಂಡ ಹೆಣ್ಣುಮಗಳು ಮತ್ತೊಂದ ಮದುವೆ ಹಾಗೂ ಕೂಡಿಕೆ ಮಾಡಿಕೊಳ್ಳುವ ಅವಕಾಶಗಳಿವೆ. ಆದರೆ ಬ್ರಾಹ್ಮಣ ಜಾತಿಯಲ್ಲಿ ಈ ಅವಕಾಶಗಳು ಸಾಧ್ಯವಿಲ್ಲ. ಬ್ರಾಹ್ಮಣ ವಿಧವೆಯನ್ನು ಆ ಸಮಾಜ ತಲೆಬೋಳಿಸುವ ಹಾಗೂ ಅವಳನ್ನು ವಿಕಾರವಾಗಿ ಮಾಡಿ ಸಾಯುವ ತನಕ ಬದುಕುವ ಪರಿಸ್ಥಿತಿಗೆ ತರುತ್ತಾರೆ.

ಅನ್ಯಧರ್ಮದಿಂದ ಬಂದ ಧನಲಕ್ಷ್ಮಿ ಬ್ರಾಹ್ಮಣರಿಗಿಂತ ಚೆನ್ನಾಗಿ ಆಚಾರ ವಿಚಾರಗಳನ್ನು ತಿಳಿದುಕೊಂಡ ಧನಲಕ್ಷ್ಮಿ ತನ್ನ ಗಂಡ ಕ್ಯಾನ್ಸರಿಂದ ಸಾಯುವುದರ ಮೂಲಕ ಗಂಡನ ತಾಯಿ ದೂರವಾಗುತ್ತಾಳೆ. ಧನಲಕ್ಷ್ಮಿ ಗಂಡ ಸಾಯುವ ಮುಂಚೆ ತಾನು ತೆಗೆದುಕೊಂಡ ನಿರ್ಧಾರ ಉತ್ತಮವಾಗಿದೆ. ಆದರೆ ಈಗ ಧನಲಕ್ಷ್ಮಿ 2ನೇ ಮಗಳು ಈ ಬ್ರಾಹ್ಮಣ ಜಾತಿಯ ರಾಮನನ್ನು ಮದುವೆಯಾಗುತ್ತಿದ್ದಾಳೆ. ಆದರೆ ಧನಲಕ್ಷ್ಮಿಯವರಿಗೆ ತಾನು ಬಿಟ್ಟು ಬಂದ ಜಾತಿಗೆ ಮಗಳು ಹೋಗುತ್ತಿರುವುದು ಮತ್ತೇ ಸಮಸ್ಯೆಗೆ ಸಿಲುಕುವ ಅಂತರಾಳದ ಬಗ್ಗೆ ಯೋಚಿಸುತ್ತಿದ್ದಾಳೆ. ತಾನು ತೊರೆದು ಬಂದ ಧರ್ಮಕ್ಕೆ ಮತ್ತೆ ಮಗಳ ಆಗಮನ ಒಂದು ತೊಂದರೆಯೆಂದು ಧನಲಕ್ಷ್ಮಿ ಯೋಚನೆ ಯಾಗಿದೆ.

ಕೆ. ಸತ್ಯನಾರಾಯಣ ಕಥೆಯಲ್ಲಿ ವೇಶ್ಯೆಯರ ಸಮಸ್ಯೆ ಕೂಡ ದಟ್ಟವಾಗಿ ಇನ್ನೊಬ್ಬ ವೇಶ್ಯೆಯ ಪ್ರಶಸ್ತಿಯಲ್ಲಿ ಕಂಡು ಬರುತ್ತದೆ. ಈ ಕಥೆಯಲ್ಲಿ ಕಂಡು ಬರುವ ಪ್ರಮುಖ ಪಾತ್ರ ಕಲ್ಕತದಲ್ಲಿ ಲೇಖಕರ ಗೆಳೆಯನ ಮನೆಯಲ್ಲಿ ಸಿಕ್ಕುವ ಲಕ್ಷ್ಮಿ ಹುಲಿಯೂರುದುರ್ಗದವಳು. ಸೋದರ ಮಾವನೆ ಪುಸಲಾಯಿಸಿ

ಕಲ್ಕತೆಗೆ ಕರೆದುಕೊಂಡು ಬಂದಿರುತ್ತಾನೆ. ಈ ಹುಡುಗಿ ಕಲ್ಕತದ ಧರ್ಮಶಾಲಾ ಎಂಬ ಕಟ್ಟಡದಿಂದ ತಪ್ಪಿಸಿಕೊಂಡ ಲೇಖಕರ ಗೆಳೆಯನಿಗೆ ಒಂದು ಪಾನಿಪೂರಿ ಮಾರುವ ಅಂಗಡಿಯಲ್ಲಿ ಪ್ಲೇಟ್ ತೊಳೆಯುತ್ತಾ ಸಿಗುತ್ತಾಳೆ. ಲೇಖಕರ ಸಂವಿಧಾನ ಪುಸ್ತಕದ ಮೂಲಕ ಈ ಹುಡುಗಿ ವೃತ್ತಾಂತ ಹಾಗೂ ಅವಳಿಗೆ ನೀಡಿದ ಲೈಂಗಿಕ ಕಿರುಕುಳ ಲೇಖಕರ ಗೆಳೆಯನ ಹೆಂಡತಿಗೆ ತಿಳಿಯುತ್ತದೆ. ಕೊನೆಗೆ ಲಕ್ಷ್ಮಿ ತನ್ನ ಸ್ವಂತ ಊರಿಗೆ ಹೋಗುವುದಿಲ್ಲಾ ಯಾಕೆಂದರೆ ತನ್ನ ಮನೆ ಹಾಗೂ ತಂಗಿಯರಿಗೆ ಕೆಟ್ಟ ಹೆಸರು ಬರುತ್ತದೆ ಎಂದು ತಿಳಿದು ಯಾವ ಭಾಷೆ ಯಾವ ಊರು ಆದರೂ ಸರಿ ನಾನು ಇಲ್ಲೇ ಬದುಕುತ್ತೇನೆ ಎಂದು ಧೋರಣೆ ಅವಳದು.

ಈ ಕಥೆಯ 2ನೇ ಭಾಗದಲ್ಲಿ ಬರುವ ಗದಗಿನ ಸುಜಾತ ಎಂಬ ಹೆಣ್ಣುಮಗಳು ತಾನೇ ವೇಶ್ಯವಾಟಿಕೆಗೆ (ಪ್ರೌಢಶಾಲೆಯಲ್ಲಿ) ಸಹವಾಸದಿಂದ ಬಂದು ಕೊನೆಗೆ ಮನೆಯವರಿಗೆ ಅಣ್ಣಂದಿರಿಂದ ದೂರವಾದರೂ ಕೀಳಾಗಿ ಕಂಡು ಹಾಗೂ ಆದರೆ ಸುಜಾತ ಮೊರಬರ ಸಾಹುಕಾರ ತನ್ನನ್ನು ಇಟ್ಟುಕೊಂಡಿರುವುದಾಗಿ ಆದರೆ ಸಾಹುಕಾರನ ಇನಾಮಿನಿಂದ ಬಂದಿರುವ ತೋಟ ಜಮೀನು ಮಾತ್ರ ಅಣ್ಣನ ಅತ್ತಿಗೆಯರಿಗೆ ಬೇಕು. ಅಂದರೆ 2 ಕಥೆಗಳಲ್ಲಿ ಲಕ್ಷ್ಮಿ ಅನಿವಾರ್ಯತೆಯಿಂದ ವೇಶ್ಯೆಯ ಬದುಕಿಗೆ ಬಂದರೆ, ಸುಜಾತ ತನ್ನ ಸಹವಾಸದಿಂದ ಈ ವೇಶ್ಯವೃತ್ತಿಗೆ ಬಂದರು ಸಹ ಹೊರಹೋಗದ ಸನ್ನಿವೇಷಕ್ಕೆ ಬಂದಿದ್ದಾಳೆ. ಲಕ್ಷ್ಮಿಗೆ ಮನೆತನ ಮಾನ ಮರ್ಯಾದೆ ಬಹಳ ಮುಖ್ಯವಾದರೆ ಸುಜಾತನಿಗೆ ಮನೆ ಪ್ರೀತಿ ವಿಶ್ವಾಸ ಬೇಕು. ಆದರೆ ಅದು ಸಾಧ್ಯವಾಗುತ್ತಿಲ್ಲ.

"ನಿಜಕವಲು" ಕಥೆಗೆ ಕಾಲ–ಕವಲು ಕುಟುಂಬ ಎಂಬ ವಿಷಯದ ಮೂರು ದಿನದ ರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಭಾಗವಹಿಸಿ "ವೈಚಾರಿಕ ದಣಿವಿನ ಭಾವನೆಯಿಂದ" ಚನ್ನೈನಿಂದ ಬೆಂಗಳೂರಿಗೆ ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ರಾತ್ರಿ ಹಿಂತಿರುಗುತ್ತಿರುವಾಗ ಮಹಿಳಾ ಕಂಡಕ್ಟರ್ ರಾಜಮ್ಮನ ಬದುಕಿನ ವಿವರಗಳು ತೆರೆಯುತ್ತಿದ್ದಂತೆ ಕವಲು ಬದುಕಿನ ನಿಜ ದರ್ಶನ ಮಾಡಿಕೊಳ್ಳುತ್ತಾರೆ. ವಿಚಾರ ಸಂಕೀರಣದ ಬುದ್ಧಿವಂತರ ಒಣ ತರ್ಕ ವಿತರ್ಕಗಳಿಗಿಂತ ಬದುಕಿನ ನಿಜಕವಲು ಇಲ್ಲಿದೆ ನೋಡಿ ಎಂದು ಕತೆಗಾರ ಹೇಳುವಂತಿದೆ.

ಸತ್ಯನಾರಾಯಣರ "ನಿಜಕವಲು" ಓದುತ್ತಿದ್ದಂತೆ ನೆನಪಾಗುವುದು ಭೈರಪ್ಪನವರ "ಕವಲು" ಕಾದಂಬರಿ. ಆಧುನಿಕ ಉದ್ಯೋಗಸ್ಥ ಮಹಿಳೆಯಿಂದಾಗಿ ನಮ್ಮ ಸನಾತನ ಸಂಸ್ಕೃತಿ ಕವಲು ದಾರಿ ಹಿಡಿದು

ಹಾಳಾಗುತ್ತಿದೆಯೆಂಬ ಆತಂಕ ಭೈರಪ್ಪನವರನ್ನು ಕಾಡುತ್ತದೆ. ದುಡಿಯುವ ಮಹಿಳೆಯ ಬಗ್ಗೆ ಅವರದು ವಾರೆನೋಟ. ಆದರೆ ಸತ್ಯನಾರಾಯಣ ಕಾಣಿಸುವ ಕವಲು ಭಿನ್ನವಾದುದು. ನಾವು ಹುಟ್ಟಿದಂದಿನಿಂದ ಸಾಯುವವರೆಗೆ ನಮ್ಮ ಬದುಕು ಹಲವು ಟಿಸಿಲಾಗಿ ಅನೇಕ ತಿರುವುಗಳನ್ನು ಪಡೆದುಕೊಳ್ಳುವಂಥದ್ದು. ಅದರಲ್ಲೂ ಆಧುನಿಕ ಬದುಕಿನ ನಿಜಕವಲು ಭೈರಪ್ಪನವರು ಹೇಳುವಂಥದಲ್ಲ. ಅದು ಸಾಕಷ್ಟು ಸಂಘರ್ಷಮಯ ಹಾಗೂ ಹೋರಾಟದ್ದು. ದುಡಿಯುವ ಮಹಿಳೆ ಎದುರಿಸುವ ಸಂಕಷ್ಟಗಳು, ನೋವುಗಳು, ಸಮಸ್ಯೆಗಳು ನಾನಾ ಬಗೆಯವು. ಆಧುನಿಕ ಕವಲು ಬದುಕಿನ ರೀತಿಯೇ ಬೇರೆ ಕಥೆಯ ಓದು ಕೊಡುವ ತಿಳಿವಳಿಕೆ ಇದೆ.

ಕಂಡಕ್ಟರ್ ರಾಜಮ್ಮನ ವ್ಯಕ್ತಿತ್ವದ ನಿಜದಲ್ಲಿ ಆಧುನಿಕ ಬದುಕಿನ ಕವಲು ನಮಗೆ ಕಾಣುವುದು. ಆಕೆ ಒಬ್ಬ ಗಟ್ಟಿವಾಣಗಿತ್ತಿ. ಧೈರ್ಯದಿಂದ ತನ್ನ ವೃತ್ತಿ ಮತ್ತು ಸಂಸಾರದ ಆತಂಕಗಳನ್ನು ಎದುರಿಸುತ್ತಿದ್ದಾಳೆ, ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಆರಂಭದಲ್ಲಿ ನಿರೂಪಕನಿಗೆ ರೇಗುವ, ಡಿಪೋ ಸುಪರಿಂಟೆಂಡೆಂಟ್‌ಗೆ ದಬಾಯಿಸುವ ರಾಜಮ್ಮನ ಕಠಿಣ ನಿಲುವು ಸಡಿಲಾಗುತ್ತ ನಿರೂಪಕನೊಂದಿಗೆ ಮಾತಾಡುತ್ತ ತನ್ನ ಬದುಕನ್ನು ತೆರೆಯುತ್ತಾಳೆ. ಆಕೆಯ ಬದುಕಿನ ಅನಾವರಣದಲ್ಲಿ ದುಡಿಯುವ ಮಹಿಳೆಯ ದೈನಂದಿನ ಹೋರಾಟದ ಸ್ವರೂಪ ತಿಳಿದು ಬರುತ್ತದೆ.

ರಾಜಮ್ಮ ಗಂಡನಿಗೆ ಆಕೆಯ ಪಗಾರ ಬೇಕು. ಆದರೆ ಆತನಿಗೆ ಆಕೆಯ ಕಂಡಕ್ಟರ್ ವೃತ್ತಿಯ ಬಗ್ಗೆ ಹೇಳಿಕೊಳ್ಳಲು ನಾಚಿಕೆ. ಆಕೆ ತನ್ನ ವೃತ್ತಿಯೊಂದಿಗೆ ಏಗುವುದನ್ನು ಹೇಳಿಕೊಳ್ಳುತ್ತಾಳೆ. "ಮನೇದು ಸಾವರಿಸಿಕೊಬಹುದು, ನುಂಗಕೋಬಹುದು, ಬಸ್ ಡಿಪೋದಲ್ಲಿ ಮಾತ್ರ ಮೊದಲಿನಿಂದಲೂ ಈವತ್ತಿನತನಕವೂ ನಮ್ಮನ್ನು ಸದರವಾದ ಪದಾರ್ಥವೆಂದೇ...... ನಮ್ಮ ಮನಸ್ಸು ಪರೀಕ್ಷೆ ಮಾಡೋಕೆ ಚೂರು ಮೇಲು ಸಂಪಾದನೆ ಇಲ್ಲದೆ ಇರುವ ರೂಟಿಗೆ ಹಾಕ್ತಾರೆ. ಹಾಗೆ ಹಾಕಿದ ರೂಟ್‌ನಲ್ಲೂ ನಾವೇನೋ ಕೊಳ್ಳೆ ಹೊಡೆದಿದ್ದೀವಿ ಎಂದು ಮಾಮೂಲಿ ಪರ್ಸೆಂಟೇಜ್‌ನ ಕೇಳತಾರೆ. ಕೊಡದೆ ಹೋದ್ರೆ, ಬ್ರೇಕ್, ಸೀಟುಗಳು ಸರಿಯಿಲ್ಲದ ಬಸ್ ಡ್ಯೂಟಿಗೆ ಹಾಕ್ತಾರೆ.

ರಾಜಮ್ಮ ಡ್ಯೂಟಿ ಮುಗಿಸಿ ಹೋಗುವಾಗ ತಾನು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ವಿಷಯ ಹೇಳಿ ನಿರೂಪಕ ಆಕೆಯ ಪ್ರತಿಕ್ರಿಯೆ ನಿರೀಕ್ಷಿಸಿದಾಗ ಅದಕ್ಕೆಲ್ಲ ಸಮಯವೆಲ್ಲಿದೆ ಹೇಳಿ ಎನ್ನುತ್ತ ತನ್ನಪ್ಪ

ಬೆಳಿಗ್ಗೆ ಸೂರ್ಯ ನಮಸ್ಕಾರ ಹಾಕುತ್ತ "ಈ ಸೂರ್ಯಪ್ಪ ಹುಟ್ಟುವ ಕ್ಷಣದಲ್ಲೇ ಕವಲು ಹೊರಟು ಬಿಡ್ತಾನೆ ಎಲ್ಲಾ ದಿಕ್ಕಿನಲ್ಲೂ" ಎಂದು ಹೇಳುತ್ತಿದ್ದುದು ಮಾತ್ರ ಗೊತ್ತು ಎನ್ನುತ್ತಾಳೆ.

ಕೇವಲ ಬುದ್ಧಿವಂತರ ಪೂರ್ವಗ್ರಹದ ತರ್ಕ ವಿತರ್ಕಗಳ ಚರ್ಚೆಗಳಲ್ಲಿ ಇಂಥ ಸಮಸ್ಯೆ ಅರ್ಥವಾಗದು. ತೆರೆದ ಕಣ್ಣಿಂದ ಬದುಕನ್ನು ನೋಡಿದಾಗ ಅದು ಅರ್ಥವಾಗುವಂಥದ್ದು ಎಂಬುದನ್ನು ಕಥೆ ಧ್ವನಿಸುತ್ತದೆ. ರಾಜಮ್ಮ ಬದುಕಿನ ಅಧಿಕೃತತೆಯಲ್ಲಿ ವಿಚಾರದ ಬೀಜ ಮೊಳಕೆಯೊಡೆದು ಬೆಳೆದಿದೆ.

"ಹೀಗಿಲ್ಲಿ ಅಮೆರಿಕಾ ಕಥೆಯಲ್ಲಿ" ಬರುವ ಮಂಡ್ಯದ ಕೊತ್ತೊತ್ತಿ ಶಂಕರರಾಯನ ಮಗಳು ಸಾವಿತ್ರಿಯ ಮದುವೆ ಒಂದು ಸಾಮಾನ್ಯ ಹಳ್ಳಿಗಾಡಿನ ಶಂಕರರಾಯರು ತಮ್ಮಂದಿರು ನಗರವಾಸಿಗಳಾಗಿ ಆನಂದದಿಂದ್ದಿರಾರೆಂದು ಶಂಕರರಾಯನ ಹೆಂಡತಿ ತಿಳಿದು ತಮ್ಮ ಮಗಳನ್ನು ಅಮೆರಿಕಾದಲ್ಲಿ ಕೆಲಸ ಮಾಡುವ ನಾಗರಾಜನಿಗೆ ಸಾಕಷ್ಟು ಅದ್ದೂರಿಯಾಗಿ ಮದುವೆ ಮಾಡಿಕೊಡುತ್ತಾರೆ. ಸಾವಿತ್ರಿ ಅಮೆರಿಕಾಕ್ಕೆ ಹೋಗುತ್ತಾಳೆ. ಮುಂದೆ ಅಮೆರಿಕಾದಲ್ಲಿ ನಾಗರಾಜನ ಸತ್ಯಾಂಶಗಳು ಹಾಗೂ ಅತ್ತೆ ಮಾವನ ಕಾಟ ನಿತ್ಯವು ನರಳಾಟ ಈ ರೀತಿ ಬದುಕು ಸಾಗುತ್ತಿರಬೇಕಾದರೆ ನಾಗರಾಜ ಬೆಂಗಳೂರಿನಲ್ಲಿ ಒಂದು ಮನೆ ತೆಗೆದುಕೊಳ್ಳಲು ಸಾವಿತ್ರಿ ತಂದೆಯಿಂದ 15ಲಕ್ಷ ರೂಪಾಯಿ ತೆಗೆದುಕೊಂಡು ಬಾ ಎಂದಾಗ ಸಾವಿತ್ರಿ ಇದಕ್ಕೆ ನಿರಾಕರಿಸಿದಾಗ ಅತ್ತೆ ದೈಹಿಕವಾಗಿ ಹಿಂಸೆ ನೀಡುತ್ತಾಳೆ. ನಂತರ ಸಾವಿತ್ರಿ ಅಮೆರಿಕಾದಲ್ಲಿ ಭಾರತೀಯ ದೂತವಾಸ ಭೇಟಿ ನೀಡಿ ಭಾರತದ ಪ್ರಧಾನಿ ಇಂದಿರಾಗಾಂಧಿಯವರನ್ನು ಸಹ ಭೇಟಿ ಮಾಡಿ ಮುಂದೆ ಭಾರತಕ್ಕೆ ತನ್ನ ತವರು ಮನೆಗೆ ಬರುತ್ತಾಳೆ. ಮುಂದೆ ತವರು ಮನೆಯಲ್ಲೂ ಸಹ ಮಗಳ ಬಗ್ಗೆ ಉತ್ತಮವಾದ ರೀತಿಯ ವಾತಾವರಣ ಇರುವುದಿಲ್ಲ. ಅತ್ತೆ ಮನೆಯವರು ಸಾವಿತ್ರಿ ಬಗ್ಗೆ ಇಲ್ಲಸಲ್ಲದ ವಿಚಾರಗಳನ್ನು ಹೇಳುತ್ತಾರೆ. ಮುಂದೆ ಸಾವಿತ್ರಿ ಬಿ.ಎ. ನಂತರ ಮಂಡ್ಯದಲ್ಲಿ ಬಿ.ಎಡ್. ಸೇರಿ ತೇರ್ಗಡೆಯಾಗುತ್ತಾಳೆ. ಈ ರೀತಿಯಾಗಿ ಮುಂದೆ ತನ್ನ ಸಹಪಾಠಿ ಜಯಲಕ್ಷ್ಮಿ ಅನ್ನುವ ಬೆಂಗಳೂರು ಹುಡುಗಿ ಇವಳ ಜೊತೆ ಓದುತ್ತಿದ್ದಳು. ಅವರ ತಂದೆ ಅಮಲ್ದಾರ ಕೆಲಸ. ಹಾಗಾಗಿ ಅವರಿಗೆ ಬೆಂಗಳೂರಿನ ನಾನಾ ಸ್ಕೂಲ್ ಪರಿಚಯದಿಂದ ಸಾವಿತ್ರಿಗೆ ಒಂದು ಕೆಲಸ ಹಾಗೂ ಉಳಿದುಕೊಳ್ಳಲು ಹಾಸ್ಟೆಲ್ ವ್ಯವಸ್ಥೆ ಸಹ ಮಾಡಿದರು. ಈ ರೀತಿಯಾಗಿ ಯಾವುದೇ ಒಂದು ಪ್ರತಿಷ್ಠೆಗೆ ಬಿದ್ದ ಜನ ಬದುಕನ್ನು ಯಾವ ರೀತಿಗೆ ತಂದು ಬಿಡುತ್ತದೆ. ಅಮೆರಿಕಾದಲ್ಲಿ ಕೆಲಸ ಮಾಡುವವನಿಗೂ ಸಹ "ವರದಕ್ಷಿಣೆ" ಹುಚ್ಚು ಇದೆ ಎಂದರೆ ವರದಕ್ಷಿಣೆಯ ಕರಾಳ ಮುಖ ಯಾವ ರೀತಿ ಇದೆ ಎಂದು ತಿಳಿಯಬಹುದು. ಸಾಮಾನ್ಯ

ಹಳ್ಳಿಯ ಸಾವಿತ್ರಿ ಈ ಕಥೆಯಲ್ಲಿ ದಿಟ್ಟ ಮಹಿಳೆಯಾಗಿ ಕಂಡು ಬರುತ್ತಾಳೆ. ತಂದೆ ಬಳಿ 15ಲಕ್ಷ ಕೇಳದೆ ಅಮೆರಿಕಾ ದೇಶ ಬಿಟ್ಟು ಬಂದು ಭಾರತದಲ್ಲಿ ಶಿಕ್ಷಣ ಮುಂದುವರಿಸಿ ಮುಂದೆ ಶಿಕ್ಷಕ ವೃತ್ತಿಯಲ್ಲಿ ಮುಂದುವರೆಯುವ ದಿಟ್ಟ ಮಹಿಳೆಯಾಗಿ ಸಾವಿತ್ರಿ ಕಂಡು ಬರುತ್ತಾಳೆ.

ಇಲ್ಲಿ ಹೆಣ್ಣಿನ ಬಗೆಗಿನ ಸರಳ ತೀರ್ಮಾನದ ಜಾಡನ್ನು ವಿಷಣದ ಶೋಧ ಕಥೆಯು ಹೊಡೆಯುತ್ತದೆ. ಕಥೆಯು ಹೊಡೆಯುತ್ತದೆ ಎಂದು ಹೇಳಿದ್ದೆ ಈ ಸಂದರ್ಭದಲ್ಲಿ ನಾನು ಹೇಳಬೇಕಾದ ಇನ್ನೊಂದು ಅಂಶವನ್ನು ಹತ್ತಿಕ್ಕಲಾಗುತ್ತಿಲ್ಲ. ಅದೆಂದರೆ, ಸತ್ಯನಾರಾಯಣರ ಕಥೆಗಳಲ್ಲಿ ಬರುವ ಸ್ತ್ರೀಪಾತ್ರಗಳು, ಅದು ಕಾರ್ಲ್‌ಮಾರ್ಕ್ಸ್ ನಂಜಮ್ಮ ಕಥೆಯಲ್ಲಿ ಈಗಲ್‌ಟನ್ ಚಿಂತನೆಗೆ ಹೊಸ ಆಯಾಮ ಕೊಡುವ ನಂಜಮ್ಮನಾದರೂ ಸರಿ. ವಿಷಣ್ಣ ಶೋಧದ ಶರ್ಮಿಲಾ ಗೌರಿಯಾದರೂ ಸರಿ, ಯಾಕೂಬ್ ಕಥೆಯ ಅಜ್ಜಿ ಅಮೆರಿಕನ ಮನೆ, ಕೆಸ್ತೂರ್ ವೇದತ್ತೆ, ಹೀಗಿಲ್ಲಿ ಅಮೆರಿಕಾದ ಸಾವಿತ್ರಿಯಾಗಿರಬಹುದು. ಇವರೆಲ್ಲಾ ಎಷ್ಟು ದಿಟ್ಟರಾಗಿದ್ದಾರೆ! ಜೀವಂತಿಕೆಯಿಂದ ಕೂಡಿದ್ದಾರೆ. ಹೇಗ ಬದುಕನ್ನು ನಿಭಾಯಿಸುತ್ತಾರೆ ಎನ್ನವುದನ್ನು ಗಮನಿಸಬೇಕು. ನಿಜ ಹೇಳ ಬೇಕೆಂದರೆ ನನ್ನ ಸುತ್ತಲಿನ ಅನೇಕ ಹೆಂಗಸರು ಇಷ್ಟೇ ದಿಟ್ಟೆಯರಾಗಿದ್ದಾರೆ ಮತ್ತು ಬದುಕಿಗೆ ಸ್ಪಂದಿಸುತ್ತಾರೆ. ಈ ವಾಸ್ತವಿಕ ಚಿತ್ರಣವು ಸತ್ಯನಾರಾಯಣರ ಎಲ್ಲಾ ಕಥೆಗಳಲ್ಲಿ ಗಮನಿಸಬಹುದು.

ನಿಜಕವಲು, ನಂಜಮ್ಮ, ಚಿಕ್ಕತಾಯಿ ಕಥೆಗಳಲ್ಲಿ ಬರುವ ಹೆಣ್ಣಿನ ಪಾತ್ರಗಳು ಸಮಯಾನುವರ್ತಿಯಾಗಿ ಕೆ. ಸತ್ಯನಾರಾಯಣರ ಕೈಗಳಲ್ಲಿ ರೂಪಿತವಾಗಿವೆ. ಕೆಳವರ್ಗದಿಂದ ಬಂದ ಈ ಹೆಣ್ಣುಗಳು ಪರಿಸ್ಥಿತಿಯ ಕೈಗೊಂಬೆಗಳಾಗಿದ್ದು, ಅದನ್ನು ಪ್ರಶ್ನಿಸದೇ ಅಥವಾ ಪ್ರತಿಭಟಿಸದೆ ಹೊಂದಿಕೊಂಡು ಹೋದ ಪಾತ್ರಗಳಂತೆ ಸತ್ಯನಾರಾಯಣ ಅವರು ಚಿತ್ರಿಸುತ್ತಾ ಅಂದಿನ ಹೆಣ್ಣುಮಕ್ಕಳ ತಾಳ್ಮೆಯನ್ನು ವಿಜೃಂಭಿಸಿದ್ದಾರೆಯೇ ಹೊರತು ಪ್ರಸಾದ್‌ರಾವ್‌ನ ಲೈಂಗಿಕ ಕಿರುಕುಳವನ್ನು ವಿರೋಧಿಸದಿರುವುದನ್ನು ನೋಡಿದರೆ, ಹೆಣ್ಣಿನ ಸ್ಥಿತಿಯಲ್ಲಿ ಬದಲಾವಣೆ ಅಪೇಕ್ಷಿಸದ ಮನೋಸ್ಥಿತಿ ಕತೆಗಾರರಲ್ಲಿ ಮನವರಿಕೆಯಾಗಿದೆ. ಹೆಣ್ಣಿನ ಸ್ವಾತಂತ್ರ್ಯಕ್ಕೆ ಒತ್ತುಕೊಡುವ ಪಾತ್ರಗಳ ಸೃಜನೆ ಇವರು ಚಿತ್ರಿಸಬಹುದಿತ್ತು. ಹೆಣ್ಣಿನ ತಳಮಳ, ಅಂತರಾಳದ ಸಂಕಟಗಳ ಕಡೆಗೆ ಸತ್ಯನಾರಾಯಣರ ಕತೆಗಳು ತನ್ನ ಮುನ್ನೋಟ ಹರಿಸಿ, ಹೆಣ್ಣಿನ ಪಾತ್ರಗಳು ಪುರುಷದರ್ಪದಿಂದ ವಿಮುಕ್ತವಾಗಿದ್ದರೆ, ಚೆನ್ನಾಗಿರುತ್ತಿತ್ತು.

ಕಾರ್ಲ್‌ಮಾರ್ಕ್ಸ್ ನಂಜಮ್ಮ ಕಥೆಯು ಯಾವುದೇ ಐಡಿಯಾಲಜಿಯ ಅನುಯಾಯಿಯಾದರೂ, ನಿತ್ಯ ಬದುಕಿನ ಜನರ ಬದುಕಿನ ಜನರ ಜೊತೆಗಾನ ಸಾವಯವ ಸಂಬಂಧದ ಅಗತ್ಯವನ್ನು ಒತ್ತು ಹೇಳಿದೆ. ಮಾರ್ಕ್ಸ್‌ವಾದದ ಉತ್ತಮಭವಿಷ್ಯ ಕಥಾ ಸಂಬಂಧದ ಅಗತ್ಯವನ್ನು ಒತ್ತುಹೇಳಿದೆ. ಮಾರ್ಕ್ಸ್‌ವಾದದ ಉತ್ತಮ ಭವಿಷ್ಯ ಕಥಾಪಾತ್ರ ಈಗಲ್‌ಟನ್‌ರಿಗೆ ಸಾಮಾನ್ಯರಲ್ಲಿ ಸಾಮಾನ್ಯಳಾದ ಮನೆಗೆಲಸದಾಕೆ ನಂಜಮ್ಮನಲ್ಲಿ ಕಾಣುತ್ತದೆ ವಿನಃ ತನ್ನ ಪುಸ್ತಕವನ್ನು ಒಂದೇ ಕಾಲದಲ್ಲಿ ಬೇರೆ ಬೇರೆಯಾಗಿ ಅನುವಾದಿಸಿದ ಮಾರ್ಕ್ಸ್‌ವಾದಿ ಕಾರ್ಯಕರ್ತರಿಂದಲ್ಲ. ತನ್ನ ಬದುಕನ್ನು ಕಟ್ಟಿಕೊಳ್ಳಲು ತಾನಿದ್ದ ಸನ್ನಿವೇಶದಲ್ಲಿ ಕೊರಗದೆ ತಮ್ಮ ಮುಂದಿನ ಪೀಳಿಗೆಯ, ಜನರ ಉತ್ತಮ ಸ್ಥಿತಿಯ ಬಗೆಗೆ ಆಶಾವಾದ ಹೊಂದಿದ ನಂಜಮ್ಮನಿಂದ ಮಾರ್ಕ್ಸ್‌ವಾದದ ಭವಿಷ್ಯ ಕುರಿತಾದ ಹೊಸ ಚಿಂತನೆಯೇ ಈಗಲ್‌ಟನ್‌ಗೆ ಹೊಳೆದು ಬಿಡುತ್ತದೆ. ಕಣ್ಣು ತೆರೆದಿದ್ದರೆ, ನೋಡುವ ಮನಸ್ಸಿದ್ದರೆ ಎಲ್ಲರೂ ಈಗಲ್‌ಟನ್ ಆಗಬಹುದು. ಇಲ್ಲದಿದ್ದರೆ ಇರುವ ವಿಚಾರವನ್ನು ಅನುವಾದ ಮಾಡಬಹುದಷ್ಟೇ ವಿನಃ ಹೊಸ ಚಿಂತನೆ ಬೆಳೆಸಲು ಸಾಧ್ಯವಿಲ್ಲ ಎನ್ನವುದು ಕಥೆಯ ಆಶಯವಾಗಿದೆ.

ಕಾರ್ಲ್‌ಮಾರ್ಕ್ಸ್‌ನ ವ್ಯಕ್ತಿತ್ವವನ್ನು ನಂಜಮ್ಮನಲ್ಲಿ ಕಥೆಗಾರರು ಯಾವ ರೀತಿ ಗುರುತಿಸಿದ್ದಾರೋ ಸ್ಪಷ್ಟವಾಗಿಲ್ಲ. ನನ್ನ ಹೇಳಿಕೆಯಲ್ಲಿ ನಂಜಮ್ಮ ಕಾಯಕ ತತ್ವಕ್ಕೆ ಬದ್ಧಳಾಗಿದ್ದಳು. ತಾನು ಪಟ್ಟ ಬವಣೆ ತನ್ನ ಮೊಮ್ಮಕ್ಕಳ ಕಾಲಕ್ಕಾದರೂ ಬದಲಾಗಿತ್ತು ಎಂಬ ಎತ್ತರದ ಆಶೋತ್ತರದಲ್ಲಿ ಅವಳ ಬದುಕು ಈ ಕಥೆಯಲ್ಲಿ ಬಿಚ್ಚಿಕೊಳ್ಳುತ್ತದೆ. ಮಗಳ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನ ಭವಿಷ್ಯ ರೂಪಿಸುವುದಕ್ಕೆ ಹೊಟ್ಟೆ ಬಟ್ಟೆ ಕಟ್ಟಿಯಾದರೂ ಫಿಕ್ಸೆಡ್ ಡಿಪಾಸಿಟ್ ಇಡುವ ಮುಂದಾಲೋಚನೆ ಇದೆ. ತನ್ನ ಕೆಲಸ ಮಾಡುವ ಮನೆಯವರಲ್ಲಿ ಇರುವ ಕಾರು ಎಂತದ್ದು ಎಷ್ಟು ಬೆಲೆ ಎಂದೆಲ್ಲಾ ಕೇಳಿಕೊಳ್ಳುವ ಆ ಮುಗ್ಧ ಜೀವಿಯ ಎತ್ತರದ ಕನಸು ನಿಜವಾಗಲೂ ಕಲ್ಪನಾತೀತ. ತನಗೆ ಸರ್ಕಾರದವರು ಕೊಟ್ಟಿರುವ ಬಿಟ್ಟಿ ಮನೆಯಲ್ಲಿ ವಾಸ್ತವ್ಯ ಮಾಡುವುದಕ್ಕೆ ಹಿಂಜರಿಯುವ ಇಕೆ ತನ್ನ ಮೊಮ್ಮಗು ಮುದೊಂದು ದಿನ ದೊಡ್ಡ ಬಂಗಲೆಯ, ದೊಡ್ಡ ಬಡಾವಣೆಯ ನಾಗರಿಕ ಎಂದೆನಿಸಿಕೊಳ್ಳಲಿ ಎಂಬ ಹೆಬ್ಬಯಕೆ ಇಲ್ಲಿ ಚಿತ್ರಿತವಾಗುತ್ತಿದೆ.

ಕನ್ನಡದಲ್ಲಿ ಸಣ್ಣಕಥೆಗಳು ನಡೆದು ಬಂದ ದಾರಿ

ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳ ಅಂಶ ಕಂಡು ಬಂದಿರುವುದು ಪ್ರಾಚೀನ ಕಾವ್ಯಗಳಲ್ಲೂ ಕಾಣಬಹುದು. ಕ್ರಿ.ಶ. 850 ರಲ್ಲಿ ರಚನೆಯಾಗಿರುವ ಕವಿರಾಜಮಾರ್ಗ ಎಂಬ ಲಕ್ಷಣಗ್ರಂಥದಲ್ಲಿ ಕನ್ನಡ ನಾಡು, ನುಡಿ, ಜನ ಭಾಷೆಗಳ ಬಗ್ಗೆ ಹೇಳಲಾಗಿದೆ. ಇದರ ಜೊತೆಗೆ ಗದ್ಯಗ್ರಂಥ ಎಂಬ ಪ್ರಬೇಧದ ಬಗ್ಗೆ ಹೇಳಲಾಗಿದೆ. ಮುಂದೆ ಅಮರಸಿಂಹನ ಅಮರಕೋಶದಲ್ಲಿ ಕಥಾ ಎಂಬ "ಪ್ರಬಂಧ ಕಲ್ಪನಾ" ಎಂದು ಹೇಳಲಾಗಿದೆ. ಕನ್ನಡ ಉಪಲಬ್ದ ಶಾಸನ ಹಲ್ಮಿಡಿಶಾಸನ ಕೂಡ ಗದ್ಯದಲ್ಲಿದೆ.

ಪ್ರಾಚೀನವಾದ ಪೈಶಾಚಿಕ ಭಾಷೆಯಲ್ಲಿರುವ ಗುಣಾಢ್ಯನ "ಬೃಹತ್ಕಥಾ ಕೋಶವು" ಕೂಡ ಭಾರತೀಯ ಜಾನಪದ ಕಥೆಗಳಾಗಿವೆ. ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿರುವ "ಕಥಾಸರಿತ್ಸಾಗರ" ಹಾಗೂ "ಹಿತೋಪದೇಶ" ಕೃತಿಗಳು ಕಥೆಗಳು ಸಂಸ್ಕೃತ ಸಂಜಾತ ಕಥೆಗಳೇ ಆಗಿವೆ. ಕನ್ನಡದಲ್ಲಿ ಮೊದಲು ದೊರೆತಿರುವ "ವಡ್ಡಾರಾಧನೆ" ಕೂಡ ಗದ್ಯಕೃತಿಯಾಗಿದೆ. ಈ ರೀತಿಯಾಗಿ ಪ್ರಾಚೀನ ಲಕ್ಷಣಗ್ರಂಥ ಹಾಗೂ ಕಾವ್ಯಗಳ ಗದ್ಯ ಅಂಶಗಳು ಕಂಡು ಬಂದಿವೆ. ಮುಂದೆ ನವೋದಯದ ಕಾಲಕ್ಕೆ ಕನ್ನಡದಲ್ಲಿ ಅನೇಕ ಕವಿಗಳ ಆಗಮನವಾಗುತ್ತದೆ. ಮೊದಲು ಪಂಜೆ ಮಂಗೇಶರಾಯರ "ನನ್ನ ಚಿಕ್ಕಪ್ಪ", "ಕಮಲಪುರದ ಹೋಟ್ಲಿನಲ್ಲಿ" ಹಲವಾರು ನವೋದಯ ಕಥಾಸಾಹಿತ್ಯದ ರಚನೆಗಳಾದವು. ಪಂಜೆಯವರು ಮಂಗಳೂರು ಪ್ರಾಂತ್ಯದ ಹೊಸ ಪ್ರಯೋಗ ನಡೆಸಿದ ಲೇಖಕರು. ಮುಂದೆ ಉತ್ತರ ಕರ್ನಾಟಕದ ಕಡೆಗೆ ಕೆರೂರು ವಾಸುದೇವಾಚಾರ್ಯ ಸಣ್ಣಕಥೆಗಳನ್ನು ಬರೆದರು. ಉತ್ತರ ಕರ್ನಾಟಕದ ಪ್ರಾದೇಶಿಕ ಶೈಲಿಯನ್ನು ತಂದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಆನಂದ ಮುಂದೆ ಉತ್ತಮ ಕಥೆಗಳನು ಬರೆದರು. ಸ್ವಾತಂತ್ರ್ಯ ನಂತರದಲ್ಲಿ ಮಾಸ್ತಿ, ಕುವೆಂಪು, ಗೊರೂರು, ಕಾರಂತರು ಕನ್ನಡ ಕಥಾಸಾಹಿತ್ಯಕ್ಕೆ ಮುಖ್ಯ ಕೊಡುಗೆ ನೀಡಿದ್ದಾರೆ. ಮಾಸ್ತಿಯವರು ಮುಂದೆ ಕಥೆಗಳನ್ನು ಬರೆಯುತ್ತಾ ಗ್ರಾಮೀಣ, ನಗರ ಜೀವನ ಚಿತ್ರಣಗಳನು ನೀಡಿದರು. ಎ.ಆರ್. ಕೃಷ್ಣಾಶಾಸ್ತ್ರಿಗಳ "ಶ್ರೀಪತಿಗಳ ಕಥೆಗಳು" ಒಂದು ರೀತಿಯಲ್ಲಿ ಜೀವನದ ದರ್ಶನ. ಮೌಲ್ಯಗಳ ಸೂಚನೆ ಅಂತರ್ಗತವಾಗಿ ಬರುತ್ತೆ. ಮುಂದೆ ಕೊಡಗಿನ ಗೌರಮ್ಮ ಎಂಬ ಹೆಸರಿನಿಂದ ಕನ್ನಡ ಕಥಾಲೋಕಕ್ಕೆ ಪರಿಚಯವಾದ ಗೌರಮ್ಮನವರು ಹೆಣ್ಣೆ (ಹೆಣ್ಣಿನ) ಬದುಕಿನ ನೋವು ನಲಿವು ಬದುಕಿನ ನಾನಾ ಮುಖಗಳನು ಗೌರಮ್ಮ ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಮಲ್ಲಿಕಾ ಎಂಬುವವರು ಹೆಣ್ಣಿನ ಮೇಲಿನ ದೌರ್ಜನ್ಯಕ್ಕೆ, ದಾಸ್ಯಕ್ಕೆ ಆರ್ಥಿಕ ಕಾರಣವನ್ನು ಇವರು ಕಮಲಾಕ್ಷಿ ಕಥಾ, ಶ್ರೀಹರ್ಷ ಪಾಲ್ಗುಗೇ ಪರ್ವ, ಕಥಾಸಂಕಲನಗಳಲ್ಲಿ ಬರುವ ಕಥೆಗಳಲ್ಲಿ ಪ್ರಶ್ನಿಸಿದ್ದಾರೆ. ಮುಂದೆ ಬಂದ ದೇವುಡು ಕಥೆಗಳು ಸಹ ವಿಶಿಷ್ಟವಾಗಿವೆ. ಬೇಂದ್ರೆಯವರ

ಪಾಲಾಹ್ಯ, ಹಿರಿದಕತ್ತಿ, ಏಕಾಕಿನಿ, ಉತ್ತಿಮ ರೀತಿಯ ಕಥೆಗಳಾಗಿವೆ. ಇವರ ಕಥೆಗಳಲ್ಲಿ ಸಂಗೀತದ ನಾದಮಯ ಇದೆ. ಕುವೆಂಪುರವರು ಬರೆದ ಕಥೆಗಳು ಆದರ್ಶ ಸಮಾಜವನ್ನು ತಿದ್ದುವ ರೀತಿ ಕುವೆಂಪುರವರ ಕಥೆಗಳಲ್ಲಿ ಮೂಡಿಬಂದಿದೆ. ನನ್ನ ದೇವರು, ಸನ್ಯಾಸಿ ಮತ್ತು ಇತರ ಕಥೆಗಳು, ಆದರ್ಶತೆ ಕಂಡು ಬಂದಿದೆ. ಧನ್ವಂತ್ರಿ ಚಿಕಿತ್ಸೆ ಎಂಬ ಒಂದು ಕಥೆ ಸಾಮಾಜಿಕ ಕ್ರಾಂತಿಯನ್ನು ಈ ಕಥೆಯಲ್ಲಿ ಕಾಣಬಹುದು ಮೀನಾಕ್ಷಿ ಮನೆ ಮೇಷ್ಟ್ರು ಕಥೆಯ ಭಗ್ನ ಪ್ರಣಯಿ ಸುಂದರವಾಗಿ ಕಂಡು ಬಂದಿವೆ – 1920–1940 ರವರ ಅವಧಿಯಲ್ಲಿ ಈ ಸಣ್ಣಕಥೆ ಸಾಹಿತ್ಯ ಅಂದುಕೊಂಡಷ್ಟು ಬೆಳೆಯಲಿಲ್ಲ. ಹೊಸಗನ್ನಡದ ಸಾಹಿತ್ಯಾಸಕ್ತರು ಕಾದಂಬರಿಗೆ ಹೆಚ್ಚು ಒಲವು ಪ್ರಕಟಿಸಿದರು. ಕಥೆಗಳನ್ನೇ ಪ್ರಕಟಿಸುತ್ತಿದ್ದ ಪತ್ರಿಕೆಗಳು ನಿಂತು ಹೋದವು. ಪ್ರಾರಂಭದ ಪತ್ರಿಕೆ "ಮಿಂಚಿನ ಬಳ್ಳಿ ಪ್ರಕಾಶ ಸಂಸ್ಥೆ" ಕನ್ನಡದಲ್ಲಿ ಉತ್ತಮ ಶ್ರೇಷ್ಠ ಕಥೆಗಳನ್ನು ಹೊರತಂದಿದೆ. ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘ ಹೊರಡಿಸಿದ "ಪ್ರಬುದ್ಧ ಕರ್ನಾಟಕ" ಹಾಗೂ ಅ.ನ. ಕೃಷ್ಣರಾಯರ "ಕಥಾಂಜಲಿ" ಅನೇಕ ತರುಣ ಕಥೆಗಾರರನ್ನೇ ಬೆಳಕಿಗೆ ತಂದಿದೆ. ಧಾರವಾಡದ "ಜಯಂತಿ", "ಜಯಕರ್ನಾಟಕ" ಸಣ್ಣಕಥೆಗಳನ್ನು ಪ್ರಕಟಿಸಿದುವು.

ಕನ್ನಡ ಕಥಾಸಾಹಿತ್ಯದ ಮುಖ್ಯವಾದ ಕೇಂದ್ರ ಮನುಷ್ಯ. ನವೋದಯ ಕಾಲಘಟ್ಟದ ಲೇಖಕರಿಗೆ ಅನ್ವೇಷಣೆಯ ಸಾಧನ ಗುರಿಯಾಗಿದ್ದವು. ಇದರ ಫಲವಾಗಿ ಮಾಸ್ತಿ, ಕುವೆಂಪು, ಗೊರೂರು, ಕಾರಂತ ಇವರ ಸಾಹಿತ್ಯ ಸೃಷ್ಟಿಯಾಯಿತು. ಈ ಲೇಖಕರ ಅನ್ವೇಷಣೆ – ನಾವು ಕಾಣಬಹುದು. ವಸಾಹತುಶಾಹಿ ಅನುಭವದ ಗ್ರಹಿಕೆ ಮತ್ತು ಮಂಡನೆಯನು ಈ ಕಾಲದ ಕಥಾ ಸಾಹಿತ್ಯ ಮುಖ್ಯವಾಗಿ ಅರಗಿಸಿ ಕೊಳ್ಳಬೇಕಾಗುತ್ತದೆ. ಮಾಸ್ತಿಯವರು ತಮ್ಮ ಕಥೆಗಳಲ್ಲಿ ಇಂತಹ ಗ್ರಹಿಕೆ ಮತ್ತು ಬಿಡುಗಡೆ ಹೊಂದಲು ಹಲವು ಮಾದರಿಗಳನ್ನು ಹುಡುಕುವುದನ್ನೇ ಕಾಣಬಹುದು.

"ಇದು ಒಳ್ಳೆಯದು ಇದು ಕೆಟ್ಟದು, ಅಂತ ಹೇಳೋದಿಲ್ಲ. ನನ್ನ ಮುಖ್ಯ ಉದ್ದೇಶ ಜೀವನದ ಚಿತ್ರಣ ಕೊಡೋದು" ಎಂದು ಆಶಯವನ್ನು ಹೇಳಿಕೊಳ್ಳೊ ಮಾಸ್ತಿಯವರ ಕಥನ ನಿರೂಪಣೆಯ ಕ್ರಮದಲ್ಲಿ ಮಾದರಿಗಳಿವೆ. "ನನ್ನ ಮುಖ್ಯ ಉದ್ದೇಶ ನಮ್ಮ ಜನಕ್ಕೆ ಓದನ್ನು ಒದಗಿಸುವುದು" ಎನ್ನುವ ಮಾಸ್ತಿಯವರ ಈ ಧೋರಣೆ ಇಡಿ ನವೋದಯ ಸಾಹಿತ್ಯಕ್ಕೆ ಅನ್ವಯಿಸುತ್ತದೆ. ನವೋದಯದ ಪ್ರಮುಖ ಗುಣವೆಂದರೆ – ಮಾನವೀಯತೆ ಹಾಗೂ ಔದಾರ್ಯದ ಸೃಷ್ಟಿ ಎಂದು ತಿಳಿಯಬಹುದು. ಮುಂದೆ ಮಾಸ್ತಿನಂತರದ ಭಾರತೀಪ್ರಿಯ, ಆನಂದ, ಕಲ್ಲೂರ, ಬಾಗಲೋಡಿ ಮುಂತಾದವರ ಈ ಕಾಲದ ಕಥಾಸಾಹಿತ್ಯದ ಪರಂಪರೆಯನ್ನೇ ಮುಂದುವರಿಸಿದ್ದಾರೆ.

ನವೋದಯದ ಪ್ರಮುಖ ಕವಿಯಾದ ಕುವೆಂಪುರವರು ತಮ್ಮ ಕಥೆಗಳಲ್ಲಿ ಕಲಾತ್ಮಕತೆ, ತಮಾಷೆ, ವರ್ಣನೆ, ರಸಿಕತೆ, ಈ ಗುಣಗಳು ಕುವೆಂಪುರವರ ಕಥಾ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಕುವೆಂಪುರವರು ಆದರ್ಶ ವ್ಯಕ್ತಿತ್ವ ಹಾಗೂ ಸಮಾಜವಾದೀ ಸಮಾಜದ ನಿರ್ಮಾಣದ ಕನಸು ಇವರ ಕವಿತೆ ಕಥೆಗಳಲ್ಲಿ ಕಂಡು ಬರುತ್ತದೆ.

ನವೋದಯದ ಮತ್ತೊಬ್ಬ ಕಥೆಗಾರರು ಗೊರೂರು ರಾಮಸ್ವಾಮಿ ಅಯ್ಯಂಗಾರ್. ಹಾಸನ ಜಿಲ್ಲೆಯ (ಬಯಲು ಸೀಮೆಯ) ಜೀವನವನ್ನು ತಿಳಿಹಾಸ್ಯ ಮೂಲಕ ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಗೊರೂರರ ಕಥೆಗಳಲ್ಲಿ ಹಳ್ಳಿಗಾಡಿನ ಹಿರಿಯರು ಹಾಗೂ ದಾಸಯ್ಯ, ಆಚಾರಿ, ಈ ರೀತಿ ಸಾಮಾನ್ಯ ಜನರ ಬದುಕಿನ ತಿಳಿ ಹಾಸ್ಯದ ಮೂಲಕ ನಿರೂಪಿಸುವ ಗೊರೂರರ ಕಥನ ಮಾದರಿ ಕಾಣಬಹುದು.

ಗೊರೂರರ "ಗರುಡಗಂಬದ ದಾಸಯ್ಯ, ಮೆರವಣಿಗೆ, ವೈಯಾರಿ, ಕಮ್ಮಾರ ವೀರಭದ್ರಾಚಾರಿ ಜೋಯಿಸನಾದುದು" ಮುಂತಾದ ಪ್ರಬಂಧದ ಮಾದರಿ ಕಥೆಗಳು ಸ್ವಾತಂತ್ರ ಪೂರ್ವ ಕಥೆಗಳಾಗಿವೆ. ನವೋದಯ ಕಥೆಗಳಲ್ಲಿ ವ್ಯಕ್ತವಾಗುತ್ತಿರುವ ಹಾಸ್ಯ ವಿಡಂಬನೆ ನವ್ಯ ಕಥೆಗಳಲ್ಲಿ ಕಂಡು ಬರುವುದಿಲ್ಲ. ಮಾಸ್ತಿಯವರು ಸಹ ಕನ್ನಡ ಸಾಹಿತ್ಯಕ್ಕೆ ಪ್ರಾರಂಭದಲ್ಲಿ ರಂಗನ ಮದುವೆ ಎಂಬ ಹಾಸ್ಯದ ಕಥೆಯ ಮೂಲಕ ಕನ್ನಡ ಸಾಹಿತ್ಯಕ್ಕೆ ಪಾದಾರ್ಪಣೆ ಮಾಡಿದರು. ಮುಂದೆ ಇವರು ರಂಗಪ್ಪನ ದೀಪಾವಳಿ ಕಥೆಯೂ ಸಹ ಹಾಸ್ಯದ ಲೇಪ ಕಂಡು ಬರುತ್ತದೆ.

ಮುಂದೆ ಪ್ರಗತಿಶೀಲ ಕಾಲಘಟ್ಟದಲ್ಲಿ ಪ್ರಮುಖವಾಗಿ ಸಾಮಾಜಿಕ ಪ್ರಜ್ಞೆ, ನಿಷ್ಠುರವಾದ ತತ್ವಪ್ರಣಾಲಿ, ಉದ್ದೇಶ ಪೂರ್ಣವಾದ ಕಥನಸೃಷ್ಟಿ ಇವರ ಕಾಲಘಟ್ಟದಲ್ಲಿ ಪ್ರಧಾನವಾಯಿತು. ಪ್ರಮುಖವಾದ ಈ ಕಾಲದ ಲೇಖಕರೆಂದರೆ ನಿರಂಜನ, ಬಸವರಾಜಕಟ್ಟೀಮನಿ, ಚದುರಂಗ, ತರಾಸು ಮುಂತಾದವರು. ಇವರು ತಮ್ಮ ಕಥೆಗಳ ಮೂಲಕ ಪ್ರಗತಿಶೀಲತೆ ತಂದರು. ಪ್ರಗತಿಶೀಲ ಲೇಖಕರು ದಲಿತವರ್ಗಗಳ ಬಗ್ಗೆ ಸಹಾನುಭೂತಿ, ಶೋಷಣೆ ವಿರುದ್ಧ ಆಕ್ರೋಶ, ಸಾಮಾಜಿಕ ವೈಷಮ್ಯಗಳ ಬಗ್ಗೆ ಅಸಮಾಧಾನ ಇವರ ಪ್ರಮುಖ ದೃಷ್ಟಿಕೋನಗಳಾಗಿವೆ. ಅ.ನ.ಕೃ ರವರ ಪ್ರಗತಿಶೀಲವಾದ ಉಳಿದ ಲೇಖಕರಿಗೆ ವಿಶೇಷ ಅಂತರವನ್ನೂ ಕಾಣಬಹುದಿಲ್ಲ ಇವರ ಪ್ರಭಾವ ಉಳಿದ 2–3 ತಲೆಮಾರಿನ ಲೇಖಕರ ಮೇಲೆ ಬಿದ್ದಿದೆ. ತ.ರಾ.ಸು., ನಿರಂಜನ, ಬಸವರಾಜು ಕಟ್ಟಿಮನಿ, ಅರ್ಚಕ ವೆಂಕಟೇಶ, ವೆಂಕಟರಾಜ ಪನಸಿ ಮೊದಲಾದವರು ಸಾಹಿತ್ಯವನ್ನು ಸಮಾಜದ ಕನ್ನಡಿಯಲ್ಲಿ ನೋಡಲು ಯತ್ನಿಸಿದರು.

ಉದಾಹರಣೆಗೆ: 0–0=0, ಕೊನೆಯ ಗಿರಾಕಿ, (ಹೆಣ್ಣನ್ನು ಭೋಗವಸ್ತುವಾಗಿ ಅಸಹ್ಯವಾಗಿ, ಕ್ರೂರವಾಗಿ ಬಳಸಲೆತ್ನಿಸುವ ಜಗತ್ತಿನ ರೌದ್ರ ವಾಸ್ತವ ಕತೆ ಕಾಣಬಹುದು). ಬೂಟ್ ಪಾಲಿಷ್, ಗಿರಿಜಾಕಂಡ ಸಿನಿಮಾ ಈ ರೀತಿ ಬಾಳಿನ ಪ್ರತಿ ವಿಶೇಷಗಳನ್ನು ಹೇಳುವ ಶಕ್ತಿ ಇವರ ಕಥೆಗಳಲ್ಲಿ ಕಂಡು ಬರುತ್ತದೆ.

ಈ ಕಾಲದಲ್ಲಿ ಅನೇಕ ಲೇಖಕರು ಉತ್ತಮ ಕಥೆಗಳನ್ನೇ ರಚಿಸಿದರು. ತ್ರಿವೇಣಿ, ಆರ್ಯಾಂಬಪಟ್ಟಾಭಿ, ಗೀತಾಕುಲಕರ್ಣಿ, ಜಯಲಕ್ಷ್ಮಿ ಶ್ರೀನಿವಾಸ, ಎಂ.ಕೆ. ಜಯಲಕ್ಷ್ಮಿ, ಶಾಂತಾದೇವಿ ಕಣವಿ, ವೈದೇಹಿ, ಸಾರಾ ಅಬೂಬಕ್ಕರ್, ಗೀತಾನಾಗಭೂಷಣ್, ಭಾನು ಮಷ್ತಾಕ, ಹೇಮಾ ಪಟ್ಟಣಶೆಟ್ಟಿ ಮುಂತಾದವರು ಸೊಗಸಾದ ಕಥೆಗಳನ್ನು ರಚಿಸಿದ್ದಾರೆ.

ಸ್ವಾತಂತ್ರ ನಂತರದಲ್ಲಿ ಗೋಪಾಲಕೃಷ್ಣ ಅಡಿಗರ ಮೂಲಕ ನವ್ಯಕಾವ್ಯಕ್ಕೆ ನಾಂದಿ ಹಾಕಿದರು. ಈ ಕಥೆಗಾರರು ಪ್ರಗತಿಶೀಲಕ್ಕಿಂತ ಭಿನ್ನವಾದರು ಈ ಕಾಲದಲ್ಲಿ ಅನೇಕ ಮನೋವೈಜ್ಞಾನಿಕ ಕಥೆಗಳು ಹುಟ್ಟಿಬಂದವು. ಕಥಾ ಪ್ರಪಂಚದಲ್ಲೂ ನವ್ಯತೆ ಮೂಡಿತು. ಈ ಕಾಲದ ಪ್ರಮುಖ ಕಥೆಗಾರರು ಪಿ. ಲಂಕೇಶ, ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಕೆ. ಸದಾಶಿವ, ಗಿರಡ್ಡಿ ಗೋವಿಂದರಾಜು, ಪೂರ್ಣಚಂದ್ರ ತೇಜಸ್ವಿ, ಮುಂತಾದ ಹಲವಾರು ನವ್ಯಕಾಲದ ಕಥೆಗಾರರು, ಈ ಕಾಲದಲ್ಲಿ ಬಂದಿದ್ದಾರೆ.

80ರ ದಶಕದ ನಂತರ ಕನ್ನಡ ಕಥಾಪರಂಪರೆಯಲ್ಲಿ ಈ ಅವಧಿಯಲ್ಲಿ ಉತ್ತಮ ಕಥೆಗಾರರು ಸೃಷ್ಟಿಯಾದರು. ನವ್ಯ ಕಾಲದ ಮುಂದುವರಿದ ಭಾಗವಾಗಿ ಸೃಷ್ಟಿಯಾದರು. ಈ ಕಾಲದ ಸಣ್ಣಕಥೆಗಳು ಭಿನ್ನವಾಗಿ ರೂಪುತಾಳಿವೆ. ಈ ಕಾಲದಲ್ಲಿ ಶೃಂಗಾರ ಹಾಗೂ ಪ್ರಣಯಕ್ಕೆ ಹೆಚ್ಚು ಪ್ರಧಾನ್ಯತೆ ಕೊಟ್ಟರು. ವಸ್ತುವಿನ ಆಯ್ಕೆಯಲ್ಲಿ ಒಂದು ಸಮತೂಕವಿಲ್ಲ ಎಂಬ ಮಾತು ಇದೆ. ಆದರೆ ಈ ಕಾಲದಲ್ಲಿ ಬೇರೆ ಭಾಷೆಗಳ ಅನುವಾದ ಒಂದು ಸಂತಸದ ಸಂಗತಿ.

ನವ್ಯಕಾಲದ ಸಣ್ಣಕಥೆಯ ವಸ್ತು ಸಾಮಾಜಿಕ ಸಮಸ್ಯೆಗಳ ಬದಲಾಗಿ ವ್ಯಕ್ತಿ ಕೇಂದ್ರಿತ ಕಥೆಗಳು ಮೂಡಿಬಂದವು. ನಂತರದಲ್ಲಿ ವ್ಯಕ್ತಿಯ ಸಮಸ್ಯೆಗಳು ವಿಮರ್ಶಕ ಪ್ರಜ್ಞೆಯಯನ್ನು ಇಟ್ಟುಕೊಂಡಿದ್ದರು. ನವೋದಯ ಕಥೆಗಾರರಂತೆ ಇವರಿಗೆ ಒಂದು ನಿರ್ದಿಷ್ಟವಾದ ಮೌಲ್ಯವಿರಲಿಲ್ಲ. ವ್ಯಕ್ತಿಯ ಸಾಮಾಜಿಕ ಸಮಸ್ಯೆಗಳಿಗಿಂತ ವೈಯುಕ್ತಿಕ ಸಮಸ್ಯೆ ಹೆಚ್ಚು ಎಂದು ತಿಳಿಯಬಹುದು.

ಮುಂದೆ ಬಂದ ದೇವನೂರು ಮಹಾದೇವ ಅವರು ದ್ಯಾವನೂರು ಕಥಾಸಂಕಲನದ ಮೂಲಕ ದಮನಕ್ಕೆ ಒಳಗಾದ ಒಂದು ಜನಾಂಗದ ಸಂವೇದನೆಗಳನ್ನು ಈ ಕಥಾಸಂಕಲನದಲ್ಲಿ ಕಟ್ಟಿಕೊಟ್ಟಿದ್ದಾರೆ. ತುಳಿತಕ್ಕೊಳಗಾದವರು ಅದುವರೆಗೂ ಅವ್ಯಕ್ತವಾಗಿದ್ದ ಒಂದು ಜನಾಂಗದ ಬದುಕಿನ ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ನಂತರ ಹೊಸ ಅನುಭವಗಳ ವಿಶಿಷ್ಟವಾದ ದೇಶಿ ಅಭಿವ್ಯಕ್ತಿ, ಆಡುಭಾಷೆಯ ಬಳಕೆಯಿಂದಾಗಿ ಸಣ್ಣಕಥೆ ಹೊಸ ರೀತಿಯ ಆಯಾಮವನ್ನು ಪಡೆದುಕೊಂಡಿತು. ಮೊಗಳ್ಳಿ ಗಣೇಶ, ಅಮರೇಶ ನುಗಡೋಣಿ, ಕುಂ.ವೀರಭದ್ರಪ್ಪ ಮುಂತಾದವರು ಉತ್ತಮ ಕಥೆಗಳನ್ನು ನೀಡಿದ್ದಾರೆ. ದಲಿತ ಸಂವೇದನೆಯ ನಂತರ ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆ ಅದರ ಕವಲುಗಳಂತೆ ಬೆಳೆದು ಬಂದವು. ಈ ರೀತಿಯಾಗಿ ಕನ್ನಡ ಸಣ್ಣಕಥಾ ಜಗತ್ತು ಹೊಸ ಸಂವೇದನೆಗಳನ್ನು ಆಯಾ ಕಾಲದ ಸಂದರ್ಭ ಯುಗಗಳನ್ನು ಒಳಗೊಂಡು ಬೆಳೆದು ಸಾಗಿದೆ.

ಸತ್ಯನಾರಾಯಣರವರ ಕಥೆಗಳಲ್ಲಿ ದಲಿತತನ

ಕನ್ನಡ ಸಾಹಿತ್ಯದಲ್ಲಿ ಮೊದಲು ಕನ್ನಡದಲ್ಲಿ ದಲಿತಪ್ರಜ್ಞೆ ಕಂಡು ಬಂದುದು ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯಲ್ಲಿ ದಲಿತತನ ಹಾಗೂ ದಲಿತ ಚಿತ್ರಣ ಕಂಡು ಬಂದಿದೆ. ಒಂದು ಸಾಂಪ್ರದಾಯಿಕ ಮೇಲ್ವರ್ಗದಿಂದ ಬಂದ ಕಾರಂತರು ಚೋಮನದುಡಿ ಬರೆದರು. ಕನ್ನಡ ಸಾಹಿತ್ಯದಲ್ಲಿ ದಲಿತ ಸಾಹಿತ್ಯಕ್ಕೆ ಒಂದು ಮುನ್ನುಡಿ ಬರೆದರು. ಒಬ್ಬ ಮೇಲ್ವರ್ಗದವರಾದ ಕಾರಂತರು ಆ ಕಾಲಕ್ಕೆ ಒಬ್ಬ ದಲಿತ ಚಿತ್ರಣವನ್ನು ಆ ಮಟ್ಟಕ್ಕೆ ನೀಡಿರುವ ಕಾರಂತರ ಪ್ರಜ್ಞೆ ವಿಶಿಷ್ಟವಾಗಿದೆ. ಕಾರಂತರು ದಲಿತರ ಬದುಕನ್ನು ಕಟ್ಟಿಕೊಡುವ ಪ್ರಯತ್ನವನ್ನು ಚೋಮನದುಡಿಯ ಮೂಲಕ ಮಾಡಿದರು.

ಮುಂದೆ 1970ರ ನಂತರದಲ್ಲಿ ದಲಿತಸಾಹಿತ್ಯ ಪ್ರಾರಂಭವಾಯಿತು. ಅಂದರೆ ದಲಿತರ ಒಂದು ಯುಗವೇ ಅಂದಿನಿಂದ ಆರಂಭವಾಯಿತು. ನಂತರದ ಸಮಯದಲ್ಲಿ ದಲಿತ ಸಾಹಿತ್ಯವನ್ನು ದಲಿತರೆ ಬರೆಯಲು ಪ್ರಾರಂಭಿಸಿದರು. ಶತಶತಮಾನಗಳಿಂದ ಶೋಷಣೆಗೆ ಒಳಗಾದ ಒಂದು ಜನಾಂಗ ನಂತರದಲ್ಲಿ ಅಕ್ಷರಗಳು ಕಲಿತು ಅಕ್ಷರಗಳ ಮೂಲಕ ಪ್ರತಿಭಟಿಸುವ ಕಾರ್ಯಕ್ಕೆ ಮುಂದಾಯಿತು. ಅಂದರೆ "ಗಾಯವಾದ ವ್ಯಕ್ತಿ ನೋವಿನ ಬಗ್ಗೆ ಹೇಳುವುದಕ್ಕೂ ಗಾಯವನ್ನು ನೋಡಿದ ವ್ಯಕ್ತಿ ಗಾಯದ ಬಗ್ಗೆ ಹೇಳುವುದಕ್ಕೆ ವ್ಯತ್ಯಾಸವಿದೆ". ಅಂದರೆ ಶೋಷಣೆಗೆ ಒಳಗಾದವರು ಅಕ್ಷರಗಳ ಮೂಲಕ ಪ್ರತಿಭಟಿಸುವುದು ಬಹಳ ಉತ್ತಮವಾಗಿ ಮೂಡಿಬರುತ್ತದೆ. ನಂತರದಲ್ಲಿ ಕನ್ನಡ ಸಾಹಿತ್ಯಕ್ಕೆ ಅನೇಕ ದಲಿತ ಸಾಹಿತಿಗಳ ಆಗಮನವಾಗಿದೆ. ದೇವನೂರು ಮಹಾದೇವ ಎಂಬ ಲೇಖಕರು ಒಡಲಾಳ, ಕುಸುಮಬಾಲೆ, ಮುಂತಾದ ಕೃತಿಗಳ ಮೂಲಕ ದಲಿತರ ಮೂಲ ಬೇರುಗಳ ಬಗ್ಗೆ ಉತ್ತಮವಾದ ಚಿತ್ರಣಗಳನ್ನು ನೀಡಿದ್ದಾರೆ. ಹಾಗೇ ಮುಂದೆ ಬಂದ ದಲಿತ ಕವಿ ಸಿದ್ದಲಿಂಗಯ್ಯನವರು ತಮ್ಮ ಕಾವ್ಯಗಳ ಮೂಲಕ ದಲಿತ ಸಾಹಿತ್ಯಕ್ಕೆ ಒಂದು ಹೊಸ ರೀತಿಯ ಚಾಲನೆ ನೀಡಿದ್ದಾರೆ. ಹೊಲೆ ಮಾದಿಗರ ಹಾಡು ಮುಂತಾದ ಕವನ ಸಂಕಲನದ ಮೂಲಕ ದಲಿತ ಜಾಥಾಗಳು, ಚಳುವಳಿಗಳು ಸಿದ್ದಲಿಂಗಯ್ಯನವರ ಕಾವ್ಯಗಳಲ್ಲಿ ಮೂಡಿ ಬಂದಿವೆ. ಈ ರೀತಿಯಾಗಿ ಕನ್ನಡ ಸಾಹಿತ್ಯದಲ್ಲಿ ದಲಿತತನ ಮೂಡಿ ಬಂದಿದೆ.

ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ದಲಿತಜಾತಿ ಪ್ರವೇಶ ಪಡೆದುಕೊಂಡಿರುವುದು ಬಹುಮುಖ್ಯ ಅಂಶವಾಗಿದೆ. ಒಂದು ಕೆಳವರ್ಗದ ಜನಾಂಗದವರು ಒಂದು ಸಂಪ್ರದಾಯ ಬದ್ಧ ಲೇಖಕರು ಆಯ್ಕೆ ಮಾಡಿಕೊಂಡಿರುವುದು ಸಹ ಒಂದು ಉತ್ತಮವಾದ ಅಂಶವಾಗಿದೆ.

ಸಾಮಾನ್ಯವಾಗಿ ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಬರುವ ದಲಿತ ಜಾತಿಯವರು ಬಡವನಾಗಿರದೆ ಶ್ರೀಮಂತ ಉನ್ನತ ಹುದ್ದೆಯ ಒಂದು ದಲಿತ ಜನಾಂಗದ ಚಿತ್ರಣವನ್ನು ಕಾಣಬಹುದು. ಸಾಕಷ್ಟು ನಗರದಲ್ಲಿ ವಾಸಿಸುವ ಪ್ರಜ್ಞಾವಂತ ದಲಿತರ ಚಿತ್ರಣ ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಕಂಡುಬರುತ್ತದೆ.

ಸತ್ಯನಾರಾಯಣರವರ ಕಥೆಗಳಲ್ಲಿ ದಲಿತ ಜನಾಂಗ ಸಾಂಸ್ಕೃತಿಕ ಪ್ರಜ್ಞೆ ಅಷ್ಟೊಂದು ಕಂಡು ಬರುವುದಿಲ್ಲ. ಹಾಗೂ ನಾನು ದಲಿತ ಎಂದು ಹೇಳಿಕೊಳ್ಳದ ದೊಡ್ಡಸ್ತಿಕೆ ತೋರಿಸುವ ದಲಿತ ಜಾತಿ ಬೆಳೆದು ಬರುತ್ತಿರುವುದು ಕಂಡು ಬರುತ್ತದೆ. ಹಳ್ಳಿಯ ಸಾಮಾನ್ಯ ದಲಿತನ ಮಗ ಇವರ ಕಥೆಗಳಲ್ಲಿ ಉನ್ನತ ಅಧಿಕಾರಿಯಾಗಿ ಬೆಳೆದು ಬಂದು ತನ್ನ ಊರಿನ ಒಬ್ಬ ಮನುಷ್ಯನನ್ನು ಕಂಡಾಗಲೂ ಸಹ ಪರಿಚಯ ಮಾಡಿಕೊಳ್ಳದ ಹಮ್ಮಿನ ಸ್ಥಿತಿಗೆ ದಲಿತ ಜನಾಂಗ ತಲುಪಿರುವುದನ್ನು ಇವರ ಕಥೆಯಲ್ಲಿ ಕಂಡು ಬಂದಿರುವುದು.

ದಲಿತ ಜನಾಂಗವು ಸಹ ಇವರ ಕಥೆಗಳಲ್ಲಿ ಮೇಲ್ವರ್ಗ ಸಂಪ್ರದಾಯಗಳನ್ನು ಅನುಸರಿಸುವ ಒಂದು ಜನಾಂಗವಾಗಿ ಕಂಡು ಬರುತ್ತದೆ. ಉದಾಹರಣೆಗೆ – ಮೊದಲ ಆದಲತ ಕಥೆಯ ಮಾಧವಿ ಪಾತ್ರ ಭಿನ್ನವಾಗಿದೆ. ಈ ಕತೆಯಲ್ಲಿ ಕೆಳವರ್ಗದ ಜಾತಿಯಲ್ಲಿ ಹುಟ್ಟಿದ ಮಾಧವಿ ಉನ್ನತ ಅಧಿಕಾರಿಯಾಗಿದ್ದರು ಸಹ ಸಂಪ್ರದಾಯ ಪಾಲನೆ – ಹೋಮ, ಹವನ, ಮೇಲ್ವರ್ಗದ ಅನುಕರಣೆ ಹಾಗೂ ಮೇಲ್ವರ್ಗದ ಜನಾಂಗವನ್ನು ತನ್ನ ಕಛೇರಿಯಲ್ಲಿ ನಡೆಸಿಕೊಳ್ಳುವುದು ಸಹ ಒಂದು ಅಧಿಕಾರಿಯಾಗಿ ಆಕೆಯ ಸ್ವಭಾವ ಬಿನ್ನವಾಗಿದೆ.

ತಾನು ದಲಿತ ಜನಾಂಗದವರಾದರೂ ಸಹ ಮಾಧವಿ ಕಛೇರಿಯಲ್ಲಿ ಶಿಸ್ತಿನಿಂದ ಕೆಲಸ ಮಾಡುವುದು ಮೇಲ್ವರ್ಗ ನಾಚಿಸುವ ರೀತಿಯಲ್ಲಿ ನಾಯಕಿ ಕಂಡು ಬಂದರು ದಲಿತತನ ಅಷ್ಟೊಂದು ಕಂಡು ಬರುವುದಿಲ್ಲ.

ಅದೇ ರೀತಿ ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಕಾಣುವ ದಲಿತ ಪ್ರಜ್ಞೆ ದಲಿತ ಒಂದು ಪರಿಸರ ಕಂಡು ಬರುವುದಿಲ್ಲ. ಅವರ ಕಥೆಗಳಲ್ಲಿ ಕಂಡು ಬರುವ ದಲಿತರು ನಗರದ ಶ್ರೀಮಂತ ಅಧಿಕಾದಲ್ಲಿರುವ ಒಂದು ದಲಿತ ಜನಾಂಗ ಕಂಡು ಬರುತ್ತದೆ.

ಆದರೆ ಗ್ರಾಮೀಣ ಪ್ರದೇಶ ಸಾಮಾನ್ಯ ಹಳ್ಳಿಗಾಡಿನ ದಲಿತ ಜಾತಿಯ ಜನಾಂಗ ಬೇರುಗಳು ಸತ್ಯನಾರಾಯಣರವರ ಕಥೆಗಳಲ್ಲಿ ಕಂಡು ಬರುತ್ತದೆ. ಉನ್ನತ ಹುದ್ದೆಯ ದಲಿತ ಜಾತಿಯವರು ಸಹ

ತಮ್ಮ ದಲಿತ ಜಾತಿಯನ್ನು ಮರೆ ಮಾಚುವ ಪ್ರಯತ್ನ ಸತ್ಯನಾರಾಯಣರವರ ಕಥೆಗಳಲ್ಲಿ ಕಂಡು ಬರುತ್ತದೆ.

ಸಬ್‌ಸಬಾಲ್ಟರ್ನ

ಕಥೆಯಲ್ಲಿ ಬರುವ ದೇವರಾಜ ಅರಸ ಅವರ ವ್ಯಕ್ತಿತ್ವದಲ್ಲಿ ಎರಡು ಆಯಾಮಗಳಿವೆ. 1. ವೈಯುಕ್ತಿಕವಾದದ್ದು. 2. ಸಾರ್ವಜನಿಕವಾದದ್ದು

ಮೊದಲನೆಯದು ಪ್ರಕಟವಾಗುವುದು ಶೇಷಮ್ಮನ ಪ್ರಸಂಗದಿಂದ. ಅದನ್ನು ಬೇಕಾದರೆ ಮಾನವೀಯ ಆಯಾಮ ಅಂತ ಕರೆಯಬಹುದು. ಎರಡನೆಯದು ಚಿನ್ನಯನನ್ನು ಗುರುತಿಸುವುದರ ಮೂಲಕ, ಅವನನ್ನು ಬೆಳಕಿಗೆ ತರುವುದರ ಮೂಲಕ. ಚಿನ್ನಯ್ಯನ ವ್ಯಕ್ತಿತ್ವದಲ್ಲಿ ಕೂಡ ಅವನನ್ನು ಖಾಸಗಿ ಮತ್ತು ಸಾರ್ವಜನಿಕ ಆಯಾಮಗಳಿವೆ. ಗಾಂಧಿಯಿಂದ ಪ್ರಭಾವಿತರಾಗಿ ದೇವರಾಜರಿಂದ ಪ್ರೇರಿತನಾಗಿ ರೂಪುಗೊಳ್ಳುವ ಅವರ ಸಾರ್ವಜನಿಕ ವ್ಯಕ್ತಿತ್ವ ಯಾರ ಮನೆಯಂಗಳವನ್ನು ಪ್ರವೇಶಿಸಿದೆ ಕೇವಲ ಬೀದಿಯಲ್ಲೇ ತಮ್ಮ ಸಾರ್ವಜನಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು. ಅದಕ್ಕೆ ರಚನಾತ್ಮಕ ಸ್ವರೂಪ ಬರುವುದು. ಅವರಿಗೆ ಚುನಾವಣೆಯಲ್ಲಿ ನಿಂತು ಗೆದ್ದು ಪ್ರೆಸಿಡೆಂಟ್ ಆಗಿ ಊರೊಟ್ಟಿನ ಕಾರ್ಯಗಳಲ್ಲಿ ತೊಡಗಿಸುವುದರ ಮೂಲಕ. ಆದರೆ ಅಧಿಕಾರದ ಗದ್ದುಗೆಯನ್ನು ಇಳಿದ ತಕ್ಷಣ ಜನರ ವಿಸ್ಮರಣೆಗೆ ಗುರಿಯಾಗುವ ಮೂಲಕ ಅದರ ಮಿತಿಯನ್ನು ಗ್ರಹಿಸಿ ತಮ್ಮ ಖಾಸಗೀ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರ ಕಡೆಗೆ ತೊಡಗುತ್ತಾರೆ. ಆದರೆ ಇದು ಜನರ ಅಪಹಾಸ್ಯಕ್ಕೆ ಎಂದಿನಂತೆ ಗುರಿಯಾಗುತ್ತದೆ.

ನಿರೂಪಕನ ಪ್ರತಿಕ್ರಿಯೆ ಕೂಡ ಇದಕ್ಕಿಂತ ಹೊರತಾಗಿಲ್ಲದಿರುವುದು ಇದಕ್ಕೆ ನಿದರ್ಶನವಾಗಿದೆ. ಆದರೆ ಅದನ್ನು ದಿವ್ಯ ನಿರ್ಲಕ್ಷದಿಂದ ನೋಡುವ ಸಾಮರ್ಥ್ಯವನ್ನು ಚಿನ್ನಯ್ಯ ಗಳಿಸಿಕೊಳ್ಳುತ್ತಾರೆ. ಅಂಗವಿಕಲ ಮಕ್ಕಳ ಶಾಲೆಯಲ್ಲಿ ತಮ್ಮನ್ನು ತೊಡಿಗಿಸಿಕೊಳ್ಳುತ್ತಾರೆ. ಅದರಲ್ಲಿ ಅವರ ಜೊತೆಗೂಡುವ ನಾಗರತ್ನ ತಮ್ಮ ಸಾಮಾಜಿಕ ವ್ಯಕ್ತಿತ್ವವನ್ನು ಅಲ್ಲಗಳೆದು ಪರಸ್ಪರ ಒಂದಾಗುವುದನ್ನು ನವಿಲುಗಳ ಪ್ರಸಂಗ ದಾಖಲಿಸುತ್ತದೆ. ಅವರನ್ನು ಹಿಂಬಾಲಿಸುವ ನಿರೂಪಕನಿಗೆ ತನ್ನ ವ್ಯಕ್ತಿತ್ವದ ಮಿತಿಯ ಅರಿವಾಗಿ ನವಿಲುಗಳ ಕುಣಿಯುವ ಜಾಗಕ್ಕೆ ಹೋಗುವುದರ ಮೂಲಕ ಅದನ್ನು ದಾಟಲು ಪ್ರಯತ್ನಿಸುತ್ತಾನೆ.

ಸಾಮಾಜಿಕ ವಾಸ್ತವಿಕತೆಯನ್ನು ಮಾನವೀಯವಾದುದರ ಮೂಲಕವಾಗಿಯೇ ಮೀರಲು ಸಾಧ್ಯವಿದೆ ಎಂಬುದು ಈ ಕಥೆಯ ಅನನ್ಯವಾದ ರೀತಿಯಲ್ಲಿ ಸೆರೆಹಿಡಿಯುತ್ತದೆ. ಬದಲಾವಣೆಯೆನ್ನುವುದು ಕೇವಲ ಸಾಮಾಜಿಕ ಸ್ಥರದಲ್ಲಿ ಮಾತ್ರ ಜರುಗದ ವೈಯುಕ್ತಿಕ ನೆಲೆಯಲ್ಲಿಯೂ ಜರುಗುವುದರಿಂದ ಮಾತ್ರವೇ ಅರ್ಥಪೂರ್ಣವಾಗುತ್ತದೆ ಎಂಬುದಕ್ಕೆ ಗಾಂಧೀಜಿಯ ಮೌಲ್ಯಗಳನ್ನು ಅಂತರ್ಗತಗೊಳಿಸಿಕೊಳ್ಳುವ ಚೆನ್ನಯ್ಯನ ವ್ಯಕ್ತಿತ್ವ ಇದಕ್ಕೆ ನಿರ್ದಶನ.

2. ದಲಿತರ ವೀಡಿಯೋ ಪುರಾಣ ಇದಕ್ಕೆ ವಿರುದ್ಧವಾಗಿ ಕೇವಲ ಸಾಮಾಜಿಕ ಸ್ವರೂಪವನ್ನು ಪಡೆದುಕೊಳ್ಳುವುದರ ಅಪಾಯವನ್ನು ಬಯಲಿಗೆಳೆಯುತ್ತದೆ.

ಅನಂತಮೂರ್ತಿ ಕತೆಯಲ್ಲಿನ ನವಿಲುಗಳ ವರ್ತಮಾನದ ಕಟು ವಾಸ್ತವವನ್ನು ಮೀರುವ ಬಾಲ್ಯದ ವಿಸ್ಮಯದ ಜಗತ್ತಿಗೆ ಕರೆದೊಯ್ಯುವುದರ ಸಾಧನವಾದರೆ, ಇಲ್ಲಿನ ನವಿಲುಗಳು ಗಂಡು ಹೆಣ್ಣುಗಳನ್ನು ಪರಸ್ಪರ ಒಂದು ಕೂಡಿಸುವ ಸಾಧನವಾಗಿದೆ. ದೇವನೂರರ ಒಡಲಾಳದಲ್ಲಿನ ಗೋಡೆಯ ಮೇಲಿನ ನವಿಲುಗಳು ವರ್ತಮಾನದ ಕ್ರೌರ್ಯಕ್ಕೆ ಸಿಲುಕದ ದಲಿತರ ಆತ್ಮ ಚೈತನ್ಯದ ಪ್ರತೀಕವಾಗಿ ಮೂಡಿಬಂದಿದೆ. ಕನ್ನಡದ ಕಥಾ ಸಾಹಿತ್ಯದಲ್ಲಿ ಹೀಗೆ ನವಿಲುಗಳು ತಮ್ಮ ಈ ಫಂಕ್ಷನಲ್ ವ್ಯಾಲ್ಯೂಸ್‌ಗಳನ್ನು ಪಡೆದುಕೊಂಡು ಕನ್ನಡದ ಸಮಾಜದ ಪರವರ್ತನಾ ಶೀಲತೆಯನ್ನು ದಾಖಲಿಸುತ್ತವೆ. ಆದ್ದರಿಂದ ಸತ್ಯನಾರಾಯಣರ ಕತೆಯಲ್ಲಿನ ನವಿಲುಗಳು ಕೇವಲ ಆಕಸ್ಮಿಕ ಅಲ್ಲ ಅಲ್ಲವೇ?

ದಲಿತರರತನ

ಕೆ. ಸತ್ಯನಾರಾಯಣರವರ ದಲಿತ ಕಥೆಗಳಲ್ಲಿ ದಲಿತರ ಪ್ರಮುಖ ಸಮಸ್ಯೆ ಎಂದರೆ ಸಬ್–ಸಬಾಲ್ಟ್ರನ ಕಥೆಯಲ್ಲಿ ಕಂಡು ಬರುವ ಪ್ರಮುಖ ಪಾತ್ರ ಚೆನ್ನಯ್ಯ. ಸ್ವತಂತ್ರ ಹೋರಾಟಗಾರರು ಹಾಗೂ ಗಾಂಧಿಯನ್ನು ಕೂಡಾ ನೋಡಿಬಂದ ಮಂಡ್ಯದ ವ್ಯಕ್ತಿಯಾಗಿದ್ದರು ಸಹ ಮೇಲ್ವರ್ಗದ ಜನಾಂಗದ ಮನೆಯೊಳಗಿನ ಪ್ರದೇಶ ಸೌಮ್ಯಯುತವಾಗಿ ಹಾಗೂ ಗೌರವಯುತವಾಗಿ ಕಂಡು ಬರುತ್ತದೆ. ಒಬ್ಬ ದಲಿತ ಜನಾಂಗ ವ್ಯಕ್ತಿಯ ಜೊತೆ ಊರಿನವರ ಒಡನಾಟ ಉತ್ತಮವಾಗಿರುತ್ತದೆ. ಪರಸ್ಪರ ಮಾತುಕತೆಗಳ ಮೂಲಕ ಉತ್ತಮ ಬಾಂದವ್ಯ ಹೊಂದಿರುವುದು ಕಂಡು ಬರುತ್ತದೆ.

ಅಡಿ ಟಿಪ್ಪಣಿ:
ಅನುಭೂತಿ, ಸಪ್ನಬುಕ್ ಹೌಸ್, ಕೆ. ರಘುನಾಥ್, ಚಲನಶೀಲ ಸಂಬಂಧಗಳ ಶೋದ, 2016

ಮುಂದೆ ಚಿನ್ನಯ್ಯನ ಊರಿಗೆ ಮಂಡ್ಯಕ್ಕೆ ದೇವರಾಜ ಅರಸುರವರ ಆಗಮನದಿಂದ ದೇವರಾಜ ಅರಸುರವರ ಬಗ್ಗೆ ಉತ್ತಮವಾದ ಅಂಶಗಳು ಬೆಳಕಿಗೆ ಬರುತ್ತವೆ. ಮುಂದೆ ತನ್ನ ತಂಗಿ ಮದುವೆ ಸಂದರ್ಭದಲ್ಲಿ ಮುಖ್ಯಮಂತ್ರಿ ದೇವರಾಜ ಅರಸುರವರಿಗೆ ಲಗ್ನಪತ್ರಿಕೆ ನೀಡುವುದು ಹಾಗೂ ಅರಸುರವರ ಆಗಮನದೊಂದಿಗೆ ಚಿನ್ನಯ್ಯ ಹಾಗೂ ಅರಸು ಉತ್ತಮ ಬಾಂದವ್ಯ ಬೆಳೆಯುತ್ತದೆ. ಮುಂದೆ ನಗರಸಭೆಗೆ ಚುನಾವಣೆಗೆ ನಿಲ್ಲಬೇಕೆಂದು ಅರಸುರವರು ಸಹಾಯ ಮಾಡಿ ಮುಂದೆ ಒಬ್ಬ ದಲಿತನನ್ನು ನಗರಸಭೆ ಪ್ರೆಸಿಡೆಂಟ್ ಆಗಿ ಮಾಡುತ್ತಾರೆ. ಅದರಂತೆ ಚಿನ್ನಯ್ಯ ಕೂಡ ಉತ್ತಮ ಕೆಲಸ ಮಾಡಿ ಹೆಸರು ಮಾಡುತ್ತಾ ಒಂದೂವರೆ ವರ್ಷಗಳ ಕಾಲ ಪ್ರೆಸಿಡೆಂಟ್ ಆಗಿ ಕಾರ್ಯನಿರ್ವಹಿಸುತ್ತಾರೆ. ಮುಂದೆ ತನ್ನ ಹಳ್ಳಿಯಲ್ಲಿಯ ಯಥಾಸ್ಥಿತಿಯಂತೆ ಕಾಲಕಳೆಯುತ್ತಾ ಸಾಗುತ್ತಾನೆ. ಪ್ರಮುಖವಾಗಿ ಒಂದು ದಲಿತ ಜನಾಂಗಕ್ಕೆ ಒಬ್ಬ ನಾಯಕನಿಗೆ ನಗರಸಭೆ ಪ್ರೆಸಿಡೆಂಟ್ ಸ್ಥಾನವನ್ನು ಅರಸು ದಕ್ಕಿಸಿಕೊಟ್ಟಿದ್ದಾರೆ. ಆದರೆ ಚಿನ್ನಯ್ಯ ರಾಜಕೀಯವಾಗಿ ಮುಂದೆ ಇನ್ನೂ ಎತ್ತರಕ್ಕೆ ಬೆಳೆಯಬಹುದಿತ್ತು ಆದರೆ ಆ ಕೆಲಸಕ್ಕೆ ಚಿನ್ನಯ್ಯ ಮುಂದಾಗಲಿಲ್ಲ. ಮತ್ತೊಂದು ಪ್ರಮುಖ ಕಥೆ ಮೊದಲ ಆ ದಲಿತ ಕಥೆಯಲ್ಲಿ ಬರುವ ಸನ್ನಿವೇಶಗಳೆಂದರೆ ಈ ಕಥೆಯಲ್ಲಿ ಬರುವ ಮಾಧವಿ(ಕಥಾನಾಯಕಿ) ತನ್ನ ಮೂಲ ಸಂಸ್ಕೃತಿ ಮರೆಮಾಚುವಿಕೆ ಕಂಡು ಬರುತ್ತದೆ. ಕಥಾನಾಯಕಿ ಕೆಳವರ್ಗದಿಂದ ಬಂದರು ಸಹ ಮೂಲ ಬೇರಿನ ಸಂಸ್ಕೃತಿಯನ್ನು ಮರೆಮಾಚುವ ಪ್ರಯತ್ನ ಕಂಡು ಬರುತ್ತದೆ. ಕಥಾನಾಯಕಿ ಮಾಧವಿ ಕೆಳವರ್ಗದ ಉನ್ನತ ಅಧಿಕಾರಿಯಾಗಿದ್ದರೂ ಸಹ ಮೇಲ್ವರ್ಗ ಸಂಸ್ಕೃತಿಯ ಅನುಕರಣೆ ಮಾಡುತ್ತಾಳೆ ಹಾಗೂ ತನ್ನ ಕೈಕೆಳಗೆ ಕೆಲಸ ಮಾಡುವ ಮೇಲ್ವರ್ಗದವರ ಜೊತೆ ಸಹ ಬಹಳ ಶಿಸ್ತಿನಿಂದ ವರ್ತಿಸಿದರು ಸಹ ದಲಿತ ಮೂಲ ಸಂಸ್ಕೃತಿ ಕಳಚಿಕೊಂಡಿರುತ್ತದೆ. ಅಂದರೆ ದಲಿತ ಹಾಗೂ ದಲಿತ ಜಾತಿ ಎಂದು ಹೇಳಿಕೊಳ್ಳದ ಸ್ಥಿತಿಗೆ ಕಥಾನಾಯಕಿ ಹಾಗೂ ದಲಿತ ಸಂಸ್ಕೃತಿ ಸಾಗುತ್ತಿದೆ.

ಪೂರ್ವನಾಮದ ವಲಸೆ ಎಂಬ ಕಥೆಯಲ್ಲಿ ಬರುವ ಮರಿಸ್ವಾಮಿ ಎಂಬ ದಲಿತ ಬಾಂಬೆಯಂತ ನಗರದಲ್ಲಿ ವಾಸಿಸುತ್ತಿದ್ದರು ಸಹ ತನ್ನ ಊರಿನವರು (ಲೇಖಕರು) ಭೇಟಿಯಾದಾಗಲೂ ಅವನಿಗೆ ಪರಿಚಯ ಮಾಡಿಕೊಳ್ಳದ ಮನಃ ಸ್ಥಿತಿಗೆ ಮರಿಸ್ವಾಮಿ ಸಾಗಿದ್ದಾನೆ. ತನ್ನ ಊರಿನಲ್ಲಿ ಯಾವುದೋ ಕಾಲದಲ್ಲಿ ನಡೆದ ಒಕ್ಕಲಿಗರು ದಲಿತರ ಭೂಮಿಗಳನ್ನು ಕಸಿದುಕೊಂಡರು ಎಂಬ ಹಾಗೂ ಮರಿಸ್ವಾಮಿ ಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ ಕೇವಲ ಒಕ್ಕಲಿಗರ, ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ಮರೀಸ್ವಾಮಿ ಸಹ ಶಿಕ್ಷಣ ಪಡೆಯುತ್ತಾನೆ. ಈ ಪೂರ್ವಾಗ್ರಹಗಳ ಪೀಡನೆಯಿಂದ ಮರಿಸ್ವಾಮಿ ಬಾಂಬೆ

ಎಂಬ ಮಹಾನಗರದಲ್ಲಿ ತನ್ನ ಮೂಲ ಜಾತಿಯನ್ನು ಮರೆಮಾಚುವ ಮೂಲಕ ಬದುಕು ಕಟ್ಟಿಕೊಳ್ಳುತ್ತಾನೆ. ಆ ಬದುಕು ಕಟ್ಟಿಕೊಳ್ಳುವ ಸಂದರ್ಭದಲ್ಲೂ ಸಹ ಜಾತಿ ಹೇಳಿಕೊಳ್ಳದ ಸಂದರ್ಭದಲ್ಲಿ ಒಂದು ರೀತಿಯ ಅವಮಾನ ಇದೆ.

ದಲಿತರ ವಿಡಿಯೋ ಪುರಾಣದಲ್ಲಿ ಬರುವ ಪ್ರಮುಖ ವಿಚಾರ ದಲಿತರ ಹುಡುಗ ಕ್ಯಾಮಾರವನ್ನು ತೆಗೆದುಕೊಂಡು (ಲೋನ್) ಮೂಲಕ ಕಂತಿನ ರೂಪದಲ್ಲಿ ಹಣವನ್ನು ಸರ್ಕಾರಕ್ಕೆ ಕಟ್ಟಬೇಕು. ಅವರಿಗೆ ಉದ್ಯೋಗವನು ಸರ್ಕಾರದ ಅಧಿಕಾರಿಗಳೇ ನೀಡಬೇಕು. ಆದರೆ ಈ ಅಧಿಕಾರಿಗಳು ಕೆಲಸ ನೀಡಿದರು ಯಾವುದೇ ಅನುಭವವಿಲ್ಲದ ದಲಿತ ಕ್ಯಾಮಾರಮೆನ್‌ಗಳು ಸರಿಯಾಗಿ ವಿಡಿಯೋ ಮಾಡಿರಲಿಲ್ಲ. ಇದರಿಂದ ಜಿಲ್ಲಾಧಿಕಾರಿ ಉತ್ತರ ಭಾರತವನು ಲೇಖಕರನ್ನು ಕರೆದು ಮನೆಗೆ ಊಟದ ನಂತರ ಹೈದರಾಬಾದಿನಿಂದ ಒಳ್ಳೆಯ ಕ್ಯಾಮಾರಮೆನ್‌ಗಳನ್ನು ಕರೆಸೋಣ ಎಂದು ತೀರ್ಮಾನಕ್ಕೆ ಬಂದನು. ಈ ದಲಿತ ಹುಡುಗರು ಸರ್ಕಾರದಿಂದ ಬಡ್ಡಿರಹಿತ ಕ್ಯಾಮಾರ ತೆಗೆದುಕೊಂಡಿದ್ದರು ಒಂದು ಕಂತು ಸಹ ಕಟ್ಟಿರಲಿಲ್ಲ.

ಹೈದರಾಬಾದಿನಿಂದ ಕ್ಯಾಮೆರಾಮೆನ್ ಕರೆಸುವುದು ಬಾಬುರಾವ್ ರಾಜಗುರು ಎಂದ ದಲಿತನಿಗೆ ತಿಳಿದು ಲೇಖಕರು ಬರೆದ ಮಾನಸ ಸರೋವರಕ್ಕೆ ಹೋಗಿ ಬಂದು ಆದರ ಬಗ್ಗೆ ಪುಸ್ತಕ ಬರೆದದ್ದು ತಿಳಿದು ಒಂದು ಪತ್ರದಲ್ಲಿ ದಲಿತ ಹುಡುಗರ ಹಾಸ್ಟೆಲ್ ಪರಿಸ್ಥಿತಿ, ಹಾಗೂ ದಲಿತವಾರ್ಡನಲ್ಲಿ ಮಾಡುವ ಭ್ರಷ್ಟಾಚಾರ, ಲೇಖಕರು ಹಾಗೂ ಜಿಲ್ಲಾಧಿಕಾರಿ ತೆಗೆದುಕೊಂಡ ನಿರ್ಧಾರದ ಬಗ್ಗೆ ಅಸಹನೆ ವ್ಯಕ್ತಪಡಿಸಿದ. ಲೇಖಕರು ಗ್ಯಾಲರಿಯಲ್ಲಿನ ಚಿತ್ರಗಳನ್ನು ಉತ್ಸಾಹದಿಂದ ನೋಡಿರುವುದನ್ನು ಕಂಡು ಆ ಸುಂದರ ಹೆಣ್ಣುಗಳ ಹಿಂದೆ ಇರುವ ಸತ್ಯಗಳನ್ನು ಹೇಳಿದ. ಚಿತ್ರ ಬಿಡಿಸಿದ ರಾಮ್‌ರಾವ್ ಬಗ್ಗೆ ರಾಮ್‌ರಾವ್ ಪತ್ನಿ ಬಗ್ಗೆ ಹಾಗೂ ರಾಮ್‌ರಾವ್ ಬಿಡಿಸಿದ ಚಿತ್ರಗಳು ಮಾತ್ರ ದಲಿತ ಹೆಣ್ಣುಮಕ್ಕಳ ಚಿತ್ರಗಳು ವಾರಂಗಲ್‌ನ ಕಾಡು ಹೆಣ್ಣುಮಕ್ಕಳು, ದಲತ ಹೆಣ್ಣುಮಕ್ಕಳಿಗೆ ಉನ್ನತವರ್ಗದ ದಿರಿಸು ಹಾಕಿ ಚಿತ್ರ ಬಿಡಿಸುವಂತೆ ಕೆಲವು ಹೆಣ್ಣುಮಕ್ಕಳಿಗೆ ಕ್ಷತ್ರಿಯ ಹೆಣ್ಣು ಮಕ್ಕಳ ಧಿರಿಸು ಹಾಕಿ ಚಿತ್ರಬಿಡಿಸೋವಂತೆ ಮುಂದ ಈ ಹೆಣ್ಣುಮಕ್ಕಳು ಕಾಡಿಗೆ ಹೋಗದೆ ರಾಜಮುಂಡ್ರಿ, ಭೀಮಾವರಂ ಸೇರಿ ಸಾಹುಕಾರ, ಜಮೀನ್ದಾರುಗಳ 2ನೇ ಸಂಸಾರವಾದಂತೆ. ಈ ರೀತಿಯಾಗಿ ಪತ್ರ ಬರೆದನು ಮುಂದೆ ಬಾಬುರಾವ್ ರಾಜಗುರು ಲೇಖಕರಿಗೆ ಪರಿಚಯವಾದ ಹಾಗೂ ಕರ್ನೂಲ್‌ಮಠದ ಸೋಮಯಾಜಿ ಪರಿಚಯವಾಗಿ ಬಾಬುರಾಮನ ದಲಿತ ಪ್ರಜ್ಞೆ ಲೇಖಕರಿಗೆ ಇಷ್ಟವಾಗುತ್ತದೆ.

ಬಾಬುರಾವ್ ದಲಿತರ ಬಗ್ಗೆ ಕಾಳಜಿ ಇರುವ ವ್ಯಕ್ತಿ ಹಾಗೂ ದಲಿತರಿಗೆ ಅನ್ಯಾಯವಾದರೆ ಪ್ರತಿಭಟಿಸುವ ವ್ಯಕ್ತಿ. ಆದರೆ ಬಾಬುರಾವ್ ದಲಿತನೇ ಆಗಿರುವ ವಾರ್ಡನ ಬಗ್ಗೆ ಹೇಳುವ ರೀತಿ ಅವನು ಮಾಡುವ ಭ್ರಷ್ಟಾಚಾರ ಹಾಗೂ ಅಂಬೇಡ್ಕರ ಜನಮ ದಿನದಂದು ಅಂಬೇಡ್ಕರೇ ನಾಚುವ ರೀತಿ ಭಾಷಣ ಮಾಡುವ ದಲಿತರು ಸಹ ಸ್ವಾರ್ಥಿಗಳಾಗಿ ಬದುಕುವುದು ಇದರಿಂದ ಮತ್ತಷ್ಟು ದಲಿತರಿಗೆ ಸಮಸ್ಯೆಯಾಗುವುದನ್ನು ಕಾಣಬಹುದು.

ಮಾರ್ಕ್‌ಟುಲಿ ಹೇಳಿದ ಕಥೆಯಲ್ಲಿ ಬದಲಾಗುತ್ತಿರುವ ಮೇಲುಕೋಟೆಯ ಹಾಗೂ ಬದಲಾಗದೆ ಇರುವ ಮನುಷ್ಯನನ್ನು ಹಾಗೂ ದಲಿತನ ಸಮಸ್ಯೆಗಳನ್ನು ಒಬ್ಬ ವರದಿ ಮಾಡಲು ಬಂದ ಪ್ರವಾಸಿ ಯಾವ ರೀತಿ ಕಾಣುತ್ತಾನೆ ಎಂದು ಈ ಕಥೆಯಲ್ಲಿ ಕಂಡು ಬರುತ್ತದೆ. ಈ ಕಥೆಯಲ್ಲಿ ಬರುವ ಭರತಕುಮಾರ ಎಂಬ ಡಿ.ಸಿ. ದಲಿತ ಹುಡುಗನನ್ನು ಅರ್ಚಕನನ್ನಾಗಿ ನೇಮಿಸಿ ಅದರಿಂದ ಅವನು ಪ್ರಸಿದ್ಧಿಗೆ ಬರುತ್ತಾನೆ. ಕೊನೆಗೆ ಈ ಕೆಲಸದಿಂದ ಅವನು ಸೋಲುತ್ತಾನೆ. ಅಂದರೆ ದಲಿತನು ಬಳಸಿಕೊಂಡು ಇಂದು ನಾನಾ ರೀತಿಯ ಲಾಭ ಪಡೆಯುವುದರಲ್ಲಿ ಭರತಕುಮಾರ ಸಹ ಸಾಧ್ಯವಾಗಿದ್ದರೆ ನಾಗರಾಜನಿಗೆ ಒಂದು ಉತ್ತಮ ಕೆಲಸ ನೀಡಬಹುದಿತ್ತು. ಆದರೆ ಮೇಲ್ವರ್ಗದ ಜನರ ಸರಿಸಮಾನವಾದ ಅರ್ಚಕ ಉದ್ಯೋಗದ ಅವಶ್ಯಕತೆ ಯಾಕೆ ಅದರಿಂದ ಲಾಭ ಯಾರಿಗೆ ನಾಗರಾಜನಿಗೋ – ಭರತಮುಮಾರನಿಗೋ ಇದರಲ್ಲಿ ಹೊಂದಾಣಿಕೆ ಮಾಡಿಕೊಂಡದ್ದು ಸಹ ದಲಿತರನು ಬಳಸಿಕೊಂಡ ಲಾಭಾಂಶ ಪಡೆಯುವ ಮಾರ್ಗವಾಗಿದೆ.

ಧರ್ಮ ವಿಶ್ಲೇಷಣೆ

ಕೆ. ಸತ್ಯನಾರಾಯಣರವರ ಕಥೆಯಲ್ಲಿ ಪ್ರಮುಖವಾಗಿ ಕಂಡು ಬರುವ ವಿಷಯವೆಂದರೆ ಧರ್ಮ. ಅವರ ಎಲ್ಲಾ ಕಥೆಗಳಲ್ಲೂ ಧರ್ಮವು ಪ್ರಮುಖ ವಿಷಯವಾಗಿ ಕಂಡು ಬರುತ್ತದೆ. ಅವರ ಅನೇಕ ಕಥೆಗಳಲ್ಲಿ ಸಂಪ್ರದಾಯಬದ್ಧವಾದ ಹಿಂದೂ ಸಂಸ್ಕೃತಿ ಹೆಚ್ಚಾಗಿ ಕಂಡು ಬರುತ್ತದೆ. ಹಾಗೂ ಮೇಲ್ವರ್ಗದ ಒಂದು ಜಾತಿಯ ಸಂಸ್ಕೃತಿ ಅಥವಾ ಧರ್ಮ ಹೆಚ್ಚಾಗಿ ಕಂಡು ಬರುತ್ತದೆ. ಇವರ ಎಲ್ಲಾ ಕಥೆಗಳಲ್ಲೂ ಮಡವಂತಿಕೆ ಹೆಚ್ಚಾಗಿ ಕಂಡು ಬರುತ್ತದೆ. ಕೆಳಜಾತಿಯ ದಲಿತ ಜನಾಂಗವು ಸಹ ಮೇಲ್ವರ್ಗದ ಜನಾಂಗ ಅನುಕರಣೆ ಮುಂದಾಗುವುದು ಮತ್ತು ದಲಿತ ಜನಾಂಗ ಸಹ ಜಾತಿ ಮರೆಮಾಚುವಿಕೆ ಎದ್ದು ಕಾಣುತ್ತದೆ.

ಇವರ ಕಥೆಯಲ್ಲಿ ಮೇಲ್ವರ್ಗದ ಸಂಪ್ರದಾಯ ಹಾಗೂ ಧರ್ಮ ಮುಖ್ಯವಾಗಿ ಕಂಡು ಬರುತ್ತದೆ. ಕೆಳವರ್ಗದ ಜನಾಂಗ ಅದರ ಅನುಕರಣೆಗೆ ಮುಂದಾಗುವುದನ್ನು ಮೊದಲ "ಆ ದಲಿತ ಕಥೆಯಲ್ಲಿ" ಕಂಡು ಬರುತ್ತದೆ. ಇವರ ಕಥೆಗಳಲ್ಲಿ ಕಂಡು ಬರುವ ಪ್ರಮುಖ ಪಾತ್ರಗಳು ಸಹ ಒಂದು ಧರ್ಮದ ಜನಾಂಗ ಪ್ರಧಾನವಾಗಿರುವಂತೆ ಕಂಡು ಬರುತ್ತದೆ.

ಸತ್ಯನಾರಾಯಣರವರ ಕಥೆಗಳಲ್ಲಿ ಧರ್ಮದ ವಿಶ್ಲೇಷಣೆ ಉತ್ತಮವಾಗಿದ್ದರೂ ಅದು ಸಂಪ್ರದಾಯಬದ್ಧ ಮೇಲ್ವರ್ಗದ ಜನಾಂಗವನ್ನು ಮಾತ್ರ ಪ್ರತಿನಿಧಿಸುತ್ತದೆ. ಕೆಳವರ್ಗದ ಜನಾಂಗ ಅಲ್ಲಿ ಬಂದರು ಸಹ ಯಶಸ್ವಿ ಹಂತಕ್ಕೆ ತಲುಪುದ ಮೂಲಕ ಕಥೆ ಕಟ್ಟಿಕೊಡುತ್ತಾರೆ.

ಈ ರೀತಿಯಾಗಿ ಸತ್ಯನಾರಾಯಣರವರು ಕಥೆಗಳಲ್ಲಿ ಧರ್ಮವಿಶ್ಲೇಷಣೆ ಹಿಂದೂ–ಇಸ್ಲಾಂ ಧರ್ಮ ವಿಶ್ಲೇಷಣೆ ಅತ್ಯುತ್ತಮವಾಗಿದೆ. ಬರೆದನು ಕತೆಯ ಯಾಕುಬ್ ನಲಕೊಂಡ ಕಥೆಯಲ್ಲಿ ಬರುವ ಯಾಕುಬ ಚಿಕ್ಕಪ್ಪನ ದುರಂತ ಹಾಗೂ ಇಸ್ಲಾಂ ಧರ್ಮದಲ್ಲಿರುವ ಆತಂಕಗಳನ್ನು ಅತ್ಯುತ್ತಮವಾಗಿ ಕಟ್ಟಿಕೊಟ್ಟಿದ್ದಾರೆ. ಮುಂದೆ ಯಾಕೂಬ್ ಚಿಕ್ಕಪ್ಪನ ಊರು ನಾಶವಾಗಿ ಜನ ಯಾಕೂಬ್ ಚಿಕ್ಕಪ್ಪನನ್ನು ಆತಂಕವಾದಿ ಎಂದು ಅನುಮಾನಿಸುವುದರಿಂದ ಊರಿನ ನಾಶ ಚಿಕ್ಕಪ್ಪನ ಸಾವಿನ ಮೂಲಕ ಅಂತ್ಯವಾಗುತ್ತದೆ. ಕೊನೆಗೆ ಯಾಕುಬ್ ಸಿಕ್ಕಿದ ಮೇಲೆ ಲೇಖಕರಿಗೆ ವಿಷಯ ತಿಳಿಯುವುದು. ಯಾಕುಬ್ ಹಾಗೂ ಲೇಖಕರ ಸ್ನೇಹ ಹಾಗೂ ಯಾಕೂಬ್ ಹಾಗೂ ಲೇಖಕರ ಸ್ನೇಹ ಅತ್ಯುತ್ತಮವಾಗಿ ಚಿತ್ರಿತವಾಗಿದೆ.

ಪುರಾತನ ಸೆಕ್ಯೂಲಾರ್ ಪ್ರೇಮ ಪ್ರಕರಣದಲ್ಲಿ ಗುಂಡ(ಶಾನುಭೋಗನ ಮನೆತನ ತಂದೆ ಶಿರಸ್ತೇದಾರರಾಗಿದ್ದು) ಹಾಗೂ ಕೆ.ಇ.ಬಿ. ಕಛೇರಿಯ ಎಂಜಿನಿಯರ್ ಆಗಿದ್ದ ಬೆಂಗಳೂರಿನ ಕಡೆಯ ರವೂದ ಸಾಹೇಬರ ಮಗಳ ಪ್ರೇಮ ಪ್ರಕರಣ ನಾನಾ ಹಂತಗಳಿಗೆ ಸಾಗಿ ಮುಂದೆ ಅವರು ನಾನಾ

ಪರಿಸ್ಥಿತಿಯನ್ನು ಎದುರಿಸಿ ಕೊನೆಗೆ ಒಂದಾಗುತ್ತಾರೆ. ಅಂದರೆ ಪುರಾತನ ಪ್ರೇಮವು ಸಹ ಕೊನೆಗೆ ಕಾಮದ ಮೂಲಕ ಅಂತ್ಯವಾಗುವುದು ಈ ಕಥೆಯಲ್ಲಿ ಕಂಡು ಬರುತ್ತದೆ.

ನಕ್ಸಲ್ ವರಸೆ ಕಥೆಯಲ್ಲೂ ಕೂಡ ಕಥೆಯ ಕೊನೆಯ ಹಂತದಲ್ಲಿ ಕಥೆಯ ನಾಯಕಿ – ನಾಯಕನ ಮಗಳು ಇಂಗ್ಲೆಂಡಿನಲ್ಲಿಯೇ ಯಾಕೂಬ್ ಎಂಬುವವನು ಮದುವೆಯಾಗಿ ಬದುಕತ್ತಿರುವ ಸನ್ನಿವೇಶಗಳು ಕಂಡು ಬರುತ್ತದೆ.

ಸತ್ಯನಾರಾಯಣರವರ ಕಥೆಗಳಲ್ಲಿ ಧರ್ಮ ಪ್ರಮುಖ ಪ್ರಧಾನವಾಗಿ ಕೆಲಸ ಮಾಡಿದೆ. ಇವರು ಅನೇಕ ಕಥೆಗಳಲ್ಲಿ ಮುಸ್ಲಿಂವರ್ಗಗಳು ಕಂಡು ಬರುತ್ತವೆ ಹಾಗೂ ಹಿಂದೂ–ಮುಸ್ಲಿಂ ವೈವಾಹಿಕ ಸಂಬಂಧಗಳು ಏರ್ಪಟ್ಟಿರುವುದು ಕೂಡಾ ಕಂಡು ಬರುತ್ತದೆ.

ಪ್ರಮುಖವಾಗಿ ಹೆಗ್ಗುರುತು ಕಥೆಯಲ್ಲಿ ಮುಸ್ಲಿಂಮರ ಆರ್ಥಿಕ ಭದ್ರತೆಗಾಗಿ ಯಾಕೂಬ್ ಭೇಟಿಯಾದ ಸಂದರ್ಭ ಹಾಗೂ ಮುಸ್ಲಿಂಮರೂ ಬದುಕಿನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.

ಹಿಂದೂ ಹಾಗು ಮುಸ್ಲಿಂ ಧರ್ಮಗಳ ಸಂವೇದನೆ ಇವರ ಕಥೆಗಳಲ್ಲಿ ಬಹು ಮುಖ್ಯವಾಗಿ ಕಂಡು ಬರುತ್ತದೆ.

ಅದೇ ರೀತಿ ಲೇಖಕರು ನಾಗಪೂರದಲ್ಲಿ ಒಮ್ಮೆ ಸಂಘಪರಿವಾರದವರನ್ನು ಭೇಟಿಯಾದಾಗ ಅಲ್ಲಿ ಸಂಘಪರಿವಾರದ ಆಡಿಟರ ಆಗಿ ಕೆಲಸ ಮಾಡುತ್ತಿರುವವನು ಒಬ್ಬ ಮುಸ್ಲಿಂ ಅಂದರೆ ಹಿಂದೂ ಧರ್ಮದ ಸಂಘಪರಿವಾರದಲ್ಲೂ ಒಬ್ಬ ಮುಸಲ್ಮಾನನಿಗೆ ಕೆಲಸ ನೀಡಿರುವುದನ್ನು ಗಮನಿಸಬಹುದು.

ಸತ್ಯನಾರಾಯಣರವರು ತಮ್ಮ ಪ್ರಮುಖವಾದ ಕಥೆ ಹೆಗ್ಗುರುತುವಿನಲ್ಲಿ ಒಂದು ಧರ್ಮವನ್ನು ಒಂದು ಜನಾಂಗದವರ ಕೇಂದ್ರವಾಗಿಟ್ಟುಕೊಂಡು ಬರೆದಿರುವ ಕಥೆಯಾಗಿದೆ. ಹೆಗ್ಗುರುತು ಮುಸ್ಲಿಂ ಜನಾಂಗದ ಅಭಿವೃದ್ಧಿಗೆ ಸಾಲ ನೀಡುವ ಬಗ್ಗೆ ಒಂದು ಸೆಮಿನಾರ್‌ಗೆ ಲೇಖಕರು ಹೋಗಿರುತ್ತಾರೆ. ಅಲ್ಲಿ ಬಂಗ್ಲಾದೇಶದಿಂದ ಬಂದಿದ್ದ ಯಾಕೂಬ್ ಸೆಮಿನಾರ್‌ನಲ್ಲಿ ಮುಸ್ಲಿಂಮರ ಜೀವನ ಪರಿಸ್ಥಿತಿ ಬಗ್ಗೆ ಹೇಳಿದರು. ಕೊನೆಗೆ ಯಾಕೂಬ್ ವಿಮಾನದ ನಿಲ್ದಾಣದಲ್ಲಿ ನನ್ನ ಬಳಿ ಏನು ಏಲ್ಲಾ ಎಂದು ಹೇಳುವುದು ಸಹ ತಾನು ಮುಸ್ಲಿಂ ಎಂದು ಭದ್ರತಾ ಸಿಬ್ಬಂದಿ ಹೆಚ್ಚು ಸುರಕ್ಷತೆ ವಹಿಸುವುದು ಸಹ ಕಂಡು ಬರುತ್ತದೆ.

ಅಡಿ ಟಿಪ್ಪಣಿ:
ಅಮೆರಿಕನ್ ಮನೆ, ಪರಸ್ಪರ ಪ್ರಕಾಶನ, ಮುನ್ನುಡಿ, ಪುಟ ಸಂಖ್ಯೆ 9

ರಾಜಕೀಯ ಪ್ರಭಾವ

ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ರಾಜಕೀಯ ಪ್ರಭಾವ ಪ್ರಮುಖವಾಗಿ ಅವರು ನಜೀರ್‌ಸಾಬ್ ಚರಿತ್ರೆ ಕಥೆಯಲ್ಲಿ ವ್ಯಕ್ತವಾಗುತ್ತದೆ. ನಜೀರ್ ಸಾಬ್ ಚರಿತ್ರೆ ಕಥೆಯಲ್ಲಿ ಬೀಜಾಪುರದ ಒಬ್ಬ ಹೆಂಗಸು ತಾನು ಈ ಮಂಡಲ ಪಂಚಾಯ್ತಿಯಿಂದ ಬಹಳಷ್ಟು ಶಕ್ತಿಶಾಲಿಯಾಗಿ ರಾಜಕೀಯವಾಗಿ ಹಾಗೂ ಸಾಂಸಾರಿಕ ಬದುಕಿನಲ್ಲಿ ಸಾಕಷ್ಟು ಬದಲಾವಣೆ ಕಂಡೆ ನನ್ನ ಬದುಕಿನ ಬದಲಾವಣೆಗೆ ಮಂಡಲ ಪಂಚಾಯ್ತಿ ಕಾರಣ ಎಂದು ಆಕೆ ಮಾತನಾಡುತ್ತಾಳೆ. ಈ ಕಥೆಯಲ್ಲಿ ಒಬ್ಬ ಮಹಿಳೆ ಕೂಡ ರಾಜಕೀಯವಾಗಿ ಬೆಳೆಯಲು ಯಶಸ್ವಿಯಾಗುತ್ತಾಳೆ.

ಆದರೆ ಬಿಸಿಲುವಾಡಿಯ ಸೀತಾಲಕ್ಷ್ಮಿ ತನ್ನ ಸಣ್ಣ ಊರಿನಲ್ಲೇ ಸಾಕಷ್ಟು ವರ್ಚಸ್ಸು ಬೆಳೆಸಿಕೊಂಡು ರಾಜಕೀಯವಾಗಿ ಮುಂದುವರಿಯಲು ಪ್ರಯತ್ನಪಡುವುದು ಹಾಗೂ ಪಿ.ಡಿ.ಓ. ಮುಂತಾದವರುಗಳ ಜೊತೆ ಉತ್ತಮ ಸಂಪರ್ಕ ಸಾಧಿಸುವಲ್ಲಿ ಯಶಸ್ವಿಯಾಗುವುದು ಗಂಡ ಶ್ರೀನಿವಾಸನಿಂದ ಯಾವುದೇ ಬೆಂಬಲವಿಲ್ಲದೆ ಇರುವುದರಿಂದಲೂ ಸಹ ರಾಜಕೀಯದಲ್ಲಿ ಬೆಳೆದು ನಗರಸಭಾ ಉಪಾಧ್ಯಕ್ಷೆಯಾಗಿ ಮುಂದುವರೆಯುವುದು. ಕೊನೆಗೆ ಸೀತಾಲಕ್ಷ್ಮಿಗೆ ಗರ್ಭಕೋಶದ ತೊಂದರೆ ಉಂಟಾಗಿ ನರಳಾಟ – ಆಸ್ಪತ್ರೆಗೆ ದಾಖಲು. ಈ ನಡುವೆ ಸಹ ಸಂಸಾರದ ಜಂಜಾಟದೊಂದಿಗೂ ಒಂದು ರಾಜಕೀಯ ಅಧಿಕಾರಕ್ಕಾಗಿ ಸೀತಾಲಕ್ಷ್ಮಿ ಪಡುವ ಕಷ್ಟ ನಾನಾ ರೀತಿ ವ್ಯಕ್ತವಾಗಿವೆ. ಸಾಮಾನ್ಯ ಹಳ್ಳಿಗಾಡಿನ ಹೆಣ್ಣುಮಕ್ಕಳು ಸಹ ರಾಜಕೀಯ ಪ್ರವೇಶ ಸಾಕಷ್ಟು ಕಷ್ಟವಾಗಿದೆ ಹಾಗೂ ರಾಜಕೀಯ ಪ್ರವೇಶ ಮಾಡುವುದು ಸುಲಭದ ಕೆಲಸವಲ್ಲ.

ಚಿನ್ನಯ್ಯನ ಮಂಡಲ್ ವರದಿ ಎಂಬ ಕಥೆಯಲ್ಲೂ ಸಹ ಚಿನ್ನಯ್ಯ ತನ್ನ ಕೆಲಸ ಪರ್ಮನೆಂಟ್ ಮಾಡಿಸಿಕೊಳ್ಳಲು ಲೇಖಕರ ಹಿಂದೆ ಬೀಳುವುದು ಅದು ಸಾಧ್ಯವಾಗದೆ ಲೇಖಕರು ಸಮಜಾಯಿಸುವುದು. ಮುಂದೆ ಚಿನ್ನಯ್ಯನ ಮಗ ಲೀಡರ್ ಆಗಬೇಕೆಂದು ಸಾಲಮಾಡಿ ಲೀಡರ್ ಸಹ ಆಗದೆ ಲೇಖಕರ ಬಳಿ ಸಾಲಮಾಡುವುದು ಹಾಗೂ ಲೇಖಕರು ಹೇಳಿ ಯಾವುದಾದರೂ ಕಮಿಟಿ ಸದಸ್ಯ ಮಾಡಿ ಎಂದು ಕೇಳುವುದು ಕೊನೆಗೆ ಈ ರಾಜಕೀಯದಿಂದ ದೂರ ಉಳಿಯುವುದು ಕಂಡು ಬರುತ್ತದೆ. ಸಾಮಾನ್ಯ ಹಳ್ಳಿಯ ಯುವಕರು ರಾಜಕೀಯ ಪ್ರವೇಶ ಮಾಡುವದು ಅವರು ಅಂದುಕೊಂಡಷ್ಟು ಸಾಧ್ಯವಿಲ್ಲ ಹಾಗೂ ರಾಜಕೀಯ ಮಾಡುವುದು ಇಂದು ನಾವು ಅಂದುಕೊಂಡಷ್ಟು ಸುಲಭವಲ್ಲ.

ಅದೇ ರೀತಿ ಸಬ್-ಸಬಾಲ್ಟ್ರನ್ ಎಂಬ ಕಥೆಯಲ್ಲಿ ಬರುವ ಚಿನ್ನಯ್ಯ ಎಂಬ ಸಾಮಾನ್ಯ ಮನುಷ್ಯ ತನ್ನ ಊರಿಗೆ ದೇವರಾಜ ಅರಸು ಬಂದು ತನ್ನ ಪೂರ್ವಿಕರಿಗೆ ಸಹಾಯ ಮಾಡಿದ ಕಣ್ಣುಕಾಣದ ಮುದುಕಿಯನ್ನು ಮನೆಯಲ್ಲಿ ಕಂಡು ಹಾಲು ಕುಡಿದು ಹೋದರು. ಮುಂದೆ ಯಾವುದೊ ಕೆಲಸಕ್ಕೆ ವಿಧಾನಸೌಧಕ್ಕೆ ಹೋದಾಗ ಚಿನ್ನಯ್ಯನ ತಂಗಿಯ ಮದುವೆಗೆ ದೇವರಾಜ ಅರಸುರವರಿಗೆ ಆಮಂತ್ರಣ ಪತ್ರವನ್ನು ಕೊಟ್ಟು ಬರುತ್ತಾನೆ. ಮುಂದೆ ಈ ರೀತಿ ಸ್ನೇಹ ನಡೆಯುತ್ತಾ ದೇವರಾಜ ಅರಸು ಚಿನ್ನಯ್ಯನನ್ನು ನಗರಸಭೆಗೆ 30ಸಾವಿರ ಸಹಾಯ ಮಾಡಿ ಎಲೆಕ್ಷನ್‌ಗೆ ನಿಲ್ಲಿಸಿ ಗೆದ್ದು ಉಪಾಧ್ಯಕ್ಷನು ಆಗುತ್ತಾನೆ. ಜಿಲ್ಲೆಯಲ್ಲಿ ಒಳ್ಳೆಯ ಕೆಲಸಗಳನು ಮಾಡುತ್ತಾನೆ. ಈ ರೀತಿ ಅರಸು ಸಾಮಾನ್ಯನನ್ನು ರಾಜಕೀಯಕ್ಕೆ ತರುತ್ತಾರೆ. ಮುಂದೆ ಚಿನ್ನಯ್ಯ ರಾಜಕೀಯದಲ್ಲೇ ತನ್ನ ಭವಿಷ್ಯ ಕಂಡುಕೊಳ್ಳದೆ ಎಂದಿನಂತೆ ಸಾಮಾನ್ಯ ಜನರ ಜೊತೆಗೆ ಒಡನಾಟ ಬೆಳೆಸಿಕೊಳ್ಳುತ್ತಾನೆ. ಈ ರೀತಿಯಾಗಿ ಸಾಮಾನ್ಯನೊಬ್ಬ ರಾಜಕೀಯಕ್ಕೆ ಬರುವುದು ಸಾಮಾನ್ಯವಾದರೆ, ಸೀತಾಲಕ್ಷ್ಮಿ ಕಥೆ ಬೇರೆ, ಹಾಗೇ ಬೀಜಾಪುರದ ಹೆಣ್ಣುಮಗಳು ರಾಜಕೀಯ ಪ್ರವೇಶ ಬೇರೆ ರೀತಿ ಕಂಡು ಬರುತ್ತದೆ.

ಲೋಕನಾಯಕರ ಮೇಲುಕೋಟೆ ಕೂಡ ರಾಜಕೀಯ ಪ್ರಭಾವ ಸಾಕಷ್ಟು ಕಂಡು ಬರುತ್ತದೆ. ಅಂದರೆ ಲೋಕನಾಯಕ ಜೆ.ಪಿ. ಮಂಡ್ಯನಗರಕ್ಕೆ ಭ್ರಷ್ಟಚಾರದ ವಿರುದ್ಧ ಭಾಷಣ ಮಾಡಲು ಬಂದದ್ದು ಹಾಗೂ ತಮ್ಮ ಹಳೆ ಗೆಳೆಯರೆ ಇಂದು ಮಂಡ್ಯದಲ್ಲಿ ಎಂ.ಎಲ್.ಎ, ಎಂ.ಎಲ್.ಸಿ ಗಳಾಗಿ ಸಾಕಷ್ಟು ಭ್ರಷ್ಟಾಚಾರ ಮಾಡಿದರು ಸಹ ಜೆ.ಪಿ. ಮಂಡ್ಯನಗರದಲ್ಲಿ ಉಳಿದುಕೊಳ್ಳಲು ಈ ಹಳೆಯ ಸ್ನೇಹಿತರು ಜೆ.ಪಿ. ತಿಳಿಯದ ಹಾಗೇ ಸಹಾಯ ಮಾಡಿದರು. ಜೆ.ಪಿ. ಮಂಡ್ಯಕ್ಕೆ ಬಂದರು ಭ್ರಷ್ಟಾಚಾರದ ವಿರುದ್ಧ ಮಾತನಾಡಿದರು ಮುಂದೆ ತಮ್ಮ ಹಳೆಯ ಅನುಯಾಯಿಯಾದ ಮೋಹನನ್ನು ನೋಡಲು ಮೇಲುಕೋಟೆಗೆ ಹೊರಡಲು ಸಿದ್ಧವಾದರೂ ನಂತರ ಮೋಹನನ್ನು ಕಂಡರು. ಮೋಹನ, ಜೆ.ಪಿ. ಹಾಗೂ ವಿನೋಭಾ ಅವರ ಜೊತೆ ಭೂದಾನ ಚಳುವಳಿಯಲ್ಲಿ ಭಾರತವನ್ನೇ ಸಂಚರಿಸಿದನು ಕೊನೆಗೆ ಜೆ.ಪಿ. ರವರೆ ಒಂದು ಕಡೆ ನೆಲೆಯೂರು ನೆಲೆ ನಿಲ್ಲು ಎಂದು ಮೋಹನನಿಗೆ ಹೇಳಿದರು. ಹಾಗೇ ಮೋಹನ ಮೇಲುಕೋಟೆಗೆ ಬಂದು ಅನೇಕ ವರ್ಷಗಳು ಬೆಟ್ಟಗುಡ್ಡಗಳ ನಡುವೆ ವಾಸಮಾಡಿ ಮುಂದೆ ಒಂದು ಶಾಲೆಯನ್ನು ತೆರೆದು ನಡೆಸಿಕೊಂಡು ಜೊತೆಗೆ ಮದುವೆ ಮಾಡಿಕೊಂಡು ಇರುತ್ತಾನೆ. ಜೆ.ಪಿ. ಹಳೆಯ ಸ್ನೇಹಿತ ಸಿಕ್ಕಿದ್ದರಿಂದ ಜೆ.ಪಿ.ಯವರು ನಾವು ಯಾವುದಾದರೂ ಆದರ್ಶಕ್ಕೆ ಬಿದ್ದು ರಾಜಕೀಯಕ್ಕೆ ಅಧಿಕಾರದ ಆಸೆಗೆ ಹೋಗಲಿಲ್ಲ

ಅನಿಸುತ್ತದೆ. ಸ್ವಂತ ನೆಹರೂರವರೆ ಕರೆದು ಮಂತ್ರಿಮಾಡುತ್ತಿದ್ದರು ಯಾವುದೊ ಆದರ್ಶಕ್ಕೆ ಬಿದ್ದು ಅಧಿಕಾರದಿಂದ ದೂರ ಉಳಿದೆವು. ಅಂದರೆ ರಾಜಕೀಯದಲ್ಲಿ ಅಧಿಕಾರ ಪಡೆದು ಜನ ಸೇವೆ ಮಾಡಬಹುದೇ ಹೊರತು ಕೇವಲ ನಾಯಕನಾಗಿದ್ದು ಭಾಷಣ ಮಾಡಿದರೆ ಅದು ವ್ಯರ್ಥವಾಗುತ್ತದೆ.

ಆದರೆ ಮೋಹನ ಒಂದು ಶಾಲೆಯನ್ನು ತೆರೆದು ಅನೇಕರಿಗೆ ಉದ್ಯೋಗ ನೀಡುತ್ತಾನೆ. ಆದರೆ ಸಂಬಳ ಕಡಿಮೆ ಆದ್ದರಿಂದ ಎಕ್ಸ್‌ಪೀರಿಯನ್ಸ್ ಮಾಡಿಕೊಂಡು ಮುಂದೆ ಸಾಗಲು ಇವನ ಶಾಲೆಗೆ ಬರುತ್ತಿದ್ದರು. ಈಗ ಮೋಹನ ಕೂಡ ಸಮಾಜ ಸೇವೆಯಲ್ಲಿಯೇ ತೊಡಗಿದ್ದ.

ಅಡಿ ಟಿಪ್ಪಣಿ:
ಈತನಕದ ಕಥೆಗಳು, ಮುನ್ನುಡಿ, ಗೀತಾಂಜಲಿ ಪಬ್ಲಿಕೇಷನ್, 2006

ಕೆ.ಸತ್ಯನಾರಾಯರಣರ ಕಥೆಗಳಲ್ಲಿ ನಗರ ಜೀವನ ಹಾಗೂ ಮಧ್ಯಮ ವರ್ಗ

ಭಾರತೀಯರಿಗೆ ನಗರ ಜೀವನ ಕಲ್ಪನೆ ಬಂದದ್ದು ಪುರಾತನ ಕಾಲದಿಂದಲೂ ರಾಜಮಹಾರಾಜರು ತಮ್ಮ ರಾಜಧಾನಿಗಳಲ್ಲಿ ಉತ್ತಮ ನಗರಗಳನ್ನು ನಿರ್ಮಿಸುತ್ತಿದ್ದರು. ಸಾಕಷ್ಟು ವ್ಯಾಪಾರ – ವ್ಯವಹಾರ ಹಾಗೂ ಈ ನಗರಗಳಲ್ಲಿ ನಡೆಯುತ್ತಾ ಬಂದಿದೆ. ಸ್ವಾತಂತ್ರ ನಂತರ ಭಾರತದಲ್ಲಿ ಪ್ರಮುಖ ನಗರಗಳನ್ನು ರಾಜಧಾನಿಗಳಾಗಿ ಮಾಡಿಕೊಂಡರು. ಮುಂದೆ ಸಾಮಾನ್ಯ ಹಳ್ಳಿಯ ವಾಸಿಗಳು ಸಾಕಷ್ಟು ಸೌಲಭ್ಯಗಳನ್ನು ಹಾಗೂ ಉದ್ಯೋಗಕ್ಕಾಗಿ ಈ ನಗರಗಳ ಆಶ್ರಯಿಸುತ್ತಾ ಬಂದರು. ಆ ರೀತಿ ಒಂದು ನಗರದಲ್ಲೇ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದರು. ಸಾಮಾನ್ಯ ಗ್ರಾಮೀಣ ಪ್ರದೇಶದ ಜನರು – ನಗರಗಳ ಕಡೆ ಮುಖ ಮಾಡಿದ್ದು ಪ್ರಮುಖ ಉದ್ದೇಶ ಉದ್ಯೋಗ. ಈ ಉದ್ಯೋಗ ಪಡೆದ ಮಧ್ಯಮವರ್ಗದ ಸಾಮಾನ್ಯ ಜನರು ನಗರದಲ್ಲಿನ ಬದುಕನ್ನು ಕಟ್ಟಿಕೊಳ್ಳುವುದರ ಮೂಲಕ ಅನೇಕ ಸಮಸ್ಯೆಗಳನ್ನು ಈ ನಗರಗಳಲ್ಲಿ ಅನುಭವಿಸಿದರು. ಈ ರೀತಿಯಾಗಿ ಬಂದ ಜನವೇ ಮಧ್ಯಮವರ್ಗದ ಇವರು ನಗರದ ಮಧ್ಯಮವರ್ಗ ಜೀವನದ ಎಲ್ಲಾ ಕಾಲಕ್ಕು ಅದರದ್ದೇ ಆದ ಸಮಸ್ಯೆಗಳನ್ನು ಎದುರಿಸುತ್ತದೆ. ಈ ಮಧ್ಯಮ ಸಾಕಷ್ಟು ಬದುಕಿನ ತೊಳಲಾಟ, ಭೇಗುದಿ, ಹಠ–ಛಲ ಮುಂತಾದ ಅಂಶಗಳು ಈ ಮಧ್ಯಮವರ್ಗದ ಜನರಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಜನರುಗಳ, ರೋಗಗ್ರಸ್ಥ ಬದುಕಿನ ಚಿತ್ರಣ ಈ ನಗರಗಳಲ್ಲಿ ಕಂಡು ಬರುತ್ತದೆ. ಸಾಮಾನ್ಯ ಹಳ್ಳಿಗಾಡಿನ ಜನ ಮಹಾನಗರಗಳಿಗೆ ಬಂದನಂತರ ತನ್ನ ಮುಗ್ದತನ ನಾಶವಾಗಿ ಪ್ರಾಮಾಣಿಕತೆ ಮುಂತಾದುವುಗಳು ನಾಶವಾಗಿ ಮುಂದೆ ಅವರು ನಗರದ ಬಲಿಪಶುಗಳಾಗಿ ಬದುಕನ್ನು ಸವೆಸುವುದನ್ನು ಕಾಣಬಹುದು. ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಬರುವ ಅನೇಕ ಪಾತ್ರಗಳ ನಗರ ಧಾವಂತ ಬದುಕಿನಲ್ಲಿ ತಮ್ಮ ವ್ಯಕ್ತಿತ್ವ ಮರೆಮಾಚುವ ಪಾತ್ರಗಳ ನಗರ ಧಾವಂತ ಬದುಕಿನಲ್ಲಿ ತಮ್ಮ ವ್ಯಕ್ತಿತ್ವ ಮರೆಮಾಚುವ ಸ್ಥಿತಿಗೆ ಅವರು ತಲುಪುತ್ತಾರೆ. ಈ ರೀತಿಯಾಗಿ ಕನ್ನಡ ಸಾಹಿತ್ಯದಲ್ಲಿ ನಗರ ಜೀವನ ಹಾಗೂ ಮಧ್ಯಮವರ್ಗ ಬೆಳೆದು ಬಂದಿದೆ. ಮುಂದೆ ಭಾರತದ ಮಹಾನಗರಗಳಲ್ಲಿ ಇರುವ ವಿದ್ಯಾವಂತ ಸಾಕ್ಷರತ ಉದ್ಯೋಗಸ್ಥ ಮಹಿಳೆಯರ ಸ್ಥಾನಮಾನಗಳು ಸಹ ಭಿನ್ನ ಹಾಗೂ ವ್ಯತಿರಿಕ್ತ. ಮಹಿಳಾ ಸಮಸ್ಯೆಗಳ ಬಗ್ಗೆ ಹೇಳುತ್ತಾ ಭಾರತದ ಮಧ್ಯಮ ವರ್ಗದ ಹೆಣ್ಣುಮಕ್ಕಳ ಸ್ಥಿತಿಗತಿಗಳು ಸಹ ಇಂದು ಬಹಳಷ್ಟು ಶೋಚನಿಯವಾಗಿದೆ. ಮಧ್ಯಮವರ್ಗದ ಹೆಣ್ಣುಮಕ್ಕಳ ಕಥೆಗಳು ಕೆ. ಸತ್ಯನಾರಾಯಣರವರ ಅನೇಕ ಕಥೆಗಳ ಬಿಂಬಿತವಾಗಿವೆ. ಮಧ್ಯಮವರ್ಗದ ಹೆಣ್ಣುಮಕ್ಕಳ ಸ್ಥಿತಿಗತಿ ಅವರ ಸ್ಥಾನ–ಮಾನ ಮತ್ತು ಮಹಿಳೆಯ ಶೋಷಣೆ ಸಹ ಸತ್ಯನಾರಾಯಣ ಕತೆಗಳಲ್ಲಿ ಕಂಡು ಬರುತ್ತದೆ.

ಮಧ್ಯಮವರ್ಗದ ಹೆಣ್ಣುಮಗಳು ಕೆ. ಸತ್ಯನಾರಾಯಣರವರ ಕಥೆಗಳಲ್ಲಿ ಯಾವುದೇ ಪ್ರತಿಭಟನೆ ತೋರಿಸದೆ ಮುಂದುವರಿಯುತ್ತಾರೆ. ಗಂಡಿನ ವಿರುದ್ಧ ಪ್ರತಿಭಟಿಸದೆ ಕೇವಲ ಪರಿಸ್ಥಿತಿಯನ್ನು ಒಪ್ಪುವ ಕೆಲಸಕ್ಕೆ ಸತ್ಯನಾರಾಯಣರವರ ಕಥೆಗಳಲ್ಲಿ ಕಂಡು ಬರುತ್ತದೆ. ಉದಾ: ಅಮೆರಿಕನ ಮನೆ – ಸೈಕಲ್ ಇನ್ನೊಂದು ಸಾಕು

ಇವರ ಕೆಲವು ಕಥೆಗಳಲ್ಲಿ ಮಹಿಳೆ ಸಾಕಷ್ಟು ಮುಂದುವರಿದಿದ್ದರು ಸಹ ಆಕೆ ಸಂಪ್ರದಾಯ ಬದ್ಧವಾಗಿ ಉಳಿಯುವುದು ಅಮೆರಿಕನ ಮನೆ ಕಥೆಯಲ್ಲಿ ಬರುವ ವೇದತ್ತೆ ಅಮೆರಿಕಾದಲ್ಲಿ ಇದ್ದರು ಸಹ ಚಟ್ನಿಪುಡಿ, ಹಾಗೂ ಚಕ್ಕುಲಿ ಮುಂತಾದ ವಸ್ತುಗಳನ್ನು ಮಾರುತ್ತ ಬದುಕನ್ನು ಕಟ್ಟಿಕೊಳ್ಳುವುದು. ಅಮೆರಿಕಾ ದೇಶದಲ್ಲಿದ್ದರೂ ಸಹ ಸಂಪ್ರದಾಯಬದ್ಧವಾದ ಸ್ಥಿತಿಯಲ್ಲಿ ಉಳಿಯುವುದು ಬದುಕಿನ ಅನಿವಾರ್ಯತೆಗೆ ನಾನಾ ಉದ್ಯೋಗ, ನಾನಾವೇಷಗಳನ್ನು ವೇದತ್ತೆ ಹಾಕಿಕೊಳ್ಳುತ್ತಾ ಬದುಕುವುದು. ಹಾಗೇ ನಜೀರ್ ಸಾಬ್ ಚರಿತ್ರೆ ಕಥೆಯಲ್ಲಿ ಬರುವ ಸೀತಾಲಕ್ಷ್ಮಿ ಸಹ ಸಾಮಾನ್ಯ ಮಧ್ಯಮವರ್ಗದ ಹೆಣ್ಣುಮಕ್ಕಳು ಅವಳು ಒಬ್ಬ ಶಾಲಾ ಶಿಕ್ಷಕನನ್ನು ಮದುವೆಯಾಗಿ ಮುಂದೆ ರಾಜಕೀಯದಲ್ಲಿ ಬೆಳೆಯಲು ಸೆಣಸಾಡುವುದು ಹಾಗೂ ಪತಿಯಿಂದ ಯಾವುದೇ ರೀತಿಯ ಸಹಕಾರ ಸಿಗದೆ ಇದ್ದರು ರಾಜಕೀಯದಲ್ಲಿ ಯಶಸ್ವಿಯಾಗಿ ನಗರಸಭಾ ಸದಸ್ಯೆಯಾಗುತ್ತಾಳೆ. ಈ ರೀತಿಯಾಗಿ ಸಾಂಸರಿಕ – ಬದುಕು ಹಾಗೂ ರಾಜಕೀಯ ಬದುಕು ಎರಡು ಸಹ ತೂಗಿಸುವ ಸೀತಾಲಕ್ಷ್ಮಿ ಕೊನೆಗೆ ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆ ಸೇರುವುದು ಅವರ ಆರೋಗ್ಯ ಪರಿಸ್ಥಿತಿ ಹದಗೆಡುವುದು. ಈ ರೀತಿ ಕಥೆ ಸೀತಾಲಕ್ಷ್ಮಿ ಪಾತ್ರ ಒಂದು ದುರಂತವಾಗುತ್ತದೆ. ಸತ್ಯನಾರಾಯಣರ ಎಲ್ಲ ಕಥೆಗಳಲ್ಲೂ ಸಹ ಮಧ್ಯಮವರ್ಗಗಳು ಕಂಡು ಬರುತ್ತವೆ. ಅಂದರೆ ಮಧ್ಯಮವರ್ಗ ಇವರ ಕಥೆಗಳ ಪ್ರಧಾನ ವಸ್ತುವಾಗುತ್ತದೆ. ಈ ಮಧ್ಯಮವರ್ಗದ ಸಾಮಾನ್ಯ ತಾಕಲಾಟ, ತೊಳಲಾಟ ಹಾಗೂ ಬದುಕಿನ ಬಗ್ಗೆ ಆಸೆಗಳು ಇರುತ್ತವೆ. ಅಮೆರಿಕನ್ ಮನೆ ಎಂಬ ಕಥೆಯಲ್ಲಿ ವೇದತ್ತೆ ಮಧ್ಯಮವರ್ಗದ ಸಾಮಾನ್ಯ ಹೆಣ್ಣುಮಗಳು ಅಮೆರಿಕಾ ದೇಶದಲ್ಲಿ ಮಧ್ಯಮವರ್ಗದ ಕುಟುಂಬ ನಿರ್ವಹಿಸುವುದು, ಬದುಕಿನ ಅನಿವಾರ್ಯತೆಗಳು ಹಾಗೂ ಅವುಗಳನ್ನು ಪಡೆಯಲು ವೇದತ್ತೆ ಪಡುವ ಕಷ್ಟಗಳು ಇವುಗಳಿಂದ ಹೊರಬರದೆ ನರಳುವುದು.

ಮತ್ತೊಂದು ಕಡೆ ಸೈಕಲ್ ಇನ್ನೊಂದು ಸಾಕು ಎಂಬ ಕಥೆಯಲ್ಲಿ ಬರುವ ಕಥಾನಾಯಕಿ ಕುಸುಮ ಮಧ್ಯಮವರ್ಗದ ಹೆಣ್ಣುಮಗಳು ಒಂದು ಸೈಕಲ್ ಪಡೆಯಲು ಸಾಧ್ಯವಾಗದೆ, ವಾರದಲ್ಲಿ 3 ದಿನ ಮಾತ್ರ

ಸೈಕಲ್ ಮೇಲೆ ಸಾಗುತ್ತ ಬದುಕನ್ನೂ ಕೂಡ ಸಾಗಿಸುತ್ತಾ ಇರುವ ಸೈಕಲ್‌ನಲ್ಲೇ ಕುಟುಂಬದವರು ನರಳುವುದನು ಕಾಣಬಹುದು. ಇವುಗಳ ಜೊತೆ ಕುಸುಮ ಸಂಸಾರ, ಗಂಡ, ಮಕ್ಕಳು, ಹಾಗೂ ಇವರನ್ನೆಲ್ಲಾ ಸಂಭಾಳಿಸುವುದು ಸಹ ಮಧ್ಯಮವರ್ಗದ ಹೆಣ್ಣು ಮಗಳ ಅನಿವಾರ್ಯತೆ ಅಸಹಾಯಕತೆ ಕಥೆಯಲ್ಲಿ ಎದ್ದು ಕಾಣುತ್ತದೆ. ಶಾಲಾ ಶಿಕ್ಷಕಿಯಾದ (ಕುಸುಮ) ಶಾಲೆಯಲ್ಲಿ ಮ್ಯಾಜಿಕ್ ಮಾಡಲು ಬಂದವನು ಏನು ಬೇಕು ನಿನಗೆ ಎಂದು ಕೇಳಿದಾಗ ಇನ್ನೊಂದು ಸೈಕಲ್ ಸಾಕು ಎಂದು ಹೇಳುವುದು ಕೂಡ ಮಧ್ಯಮವರ್ಗದ ಮನಃಸ್ಥಿತಿಯನು ಬಿಂಬಿಸುತ್ತವೆ. ನಜೀರ್‌ಸಾಬು ಚರಿತ್ರೆ ಎಂಬ ಕಥೆಯಲ್ಲಿ ಬರುವ ಸೀತಾಲಕ್ಷ್ಮಿ ಶಾಲಾಮೇಷ್ಟ್ರು ಮದುವೆಯಾಗಿ ಬಿಸಿಲುವಾಡಿ ಎಂಬ ಗ್ರಾಮದವಳು. ಮೂಲತಃ ಮೈಸೂರಿನವಳಾದ ಸೀತಾಲಕ್ಷ್ಮಿ ಮದುವೆಯಾಗಿ ಬಿಸಿಲುವಾಡಿ ಗ್ರಾಮಕ್ಕೆ ಬಂದ ಮಧ್ಯಮವರ್ಗದ ಹೆಣ್ಣುಮಗಳು. ಮುಂದೆ ಈಕೆ ಗಂಡನ ಮನೆಯ ಯಾರ ನೆರವು ಇಲ್ಲದೆ ಸ್ವಂತ ವರ್ಚಸ್ಸಿನಿಂದ ನಗರಸಭೆಯ ಅಧ್ಯಕ್ಷೆಯಾಗಿ ಬೆಳೆಯುತ್ತಾಳೆ. ನಂತರ ತನ್ನ ಆರೋಗ್ಯ ಸಮಸ್ಯೆಯಿಂದ ಸೀತಾಲಕ್ಷ್ಮಿ ಮುಂದೆ ಸಂಸಾರ – ಗಂಡ, ಮಕ್ಕಳು ಎಂದು ಮನೆಯಲ್ಲಿ ಉಳಿಯುವುದು. ಗಂಡನಿಗೆ ಒಂದು ರೀತಿ ಮುಜುಗರ ನಾನು ಒಬ್ಬ ಶಾಲಾ ಮೇಷ್ಟ್ರು ಹೆಂಡತಿ ನಗರಸಭಾಧ್ಯಕ್ಷೆ ಎಂದು ತಿಳಿಯುವುದು, ಸೀತಾಲಕ್ಷ್ಮಿ ರಾಜಕೀಯದಲ್ಲಿ ಆರೋಗ್ಯ ಸಮಸ್ಯೆಯಿಂದ ಮುಂದುವರಿಯಲು ಸಾಧ್ಯವಾಗದೆ ಇರುವುದು.

ನಿಜಕವಲು ಕಥೆಯಲ್ಲಿ ಬರುವ ರಾಜಮ್ಮ ಮಧ್ಯಮವರ್ಗದ ಹೆಂಗಸು ನಗರದಲ್ಲಿ ತನ್ನ ಗಂಡ ಕ್ಯಾಂಟಿನ್ ನಡೆಸಿಕೊಂಡು ಹೋಗುತ್ತಾನೆ. ತಂದೆಯಿಂದ ಪಡೆದುಕೊಂಡ ಕಂಡಕ್ಟರ್ ಕೆಲಸದಲ್ಲಿ ರಾತ್ರಿಪಾಳಯದಲ್ಲಿ ದುಡಿಯುವ ರಾಜಮ್ಮ ಸಾರಿಗೆ ವ್ಯವಸ್ಥೆಯಲ್ಲಿ ಯಾವುದೇ ಸೌಲಭ್ಯಗಳಿಲ್ಲದಿದ್ದರು ಸಹ ರಾತ್ರಿಪಾಳಯದಲ್ಲಿ ದುಡಿಯುವುದು ಇದರ ಜತೆಗೆ ರಾಜಮ್ಮನ ಗಂಡನಿಗೆ ರಾಜಮ್ಮ ಉದ್ಯೋಗ ಬೇಡ ಆದರೆ ಅವಳ ಸಂಬಳಬೇಕು. ಮಕ್ಕಳಿಗೆ ಮನೆಗೆಲಸ ಹೇಳಿದರೆ ಅದು ಹೆಂಗಸರ ಕೆಲಸ ಎಂದು ಹೇಳುವುದು ಈ ರೀತಿಯಾಗಿ ರಾಜಮ್ಮ ರಾತ್ರಿಪಾಳಯದ ಕಂಡಕ್ಟರ್‌ನ ಚಿತ್ರಣ ಕಂಡು ಬಂದಿದೆ.

ಪಂಡಿತ ರಾಮಾಭಾಯಿ ಕಥೆಯಲ್ಲಿ ಗಂಡನನ್ನು ಕಳೆದುಕೊಂಡ ಧನಲಕ್ಷ್ಮಿ ಬದುಕಿನ ಚಿತ್ರಣವಿದೆ. ಗಂಡ ಶ್ರೀನಿವಾಸನನ್ನು ಮದುವೆಯಾದ ಧನಲಕ್ಷ್ಮಿ ಕ್ರಿಶ್ಚಿಯನ್ ಆದರೂ ಬ್ರಾಹ್ಮಣರೆ ನಾಚುವಂತ ಸಂಪ್ರದಾಯ ನಿಷ್ಠೆ ಪಡೆದರು ಸಹ ಕ್ಯಾನ್ಸರ್‌ನಿಂದ ಗಂಡ ಸಾಯುತ್ತಾನೆ ಎಂದು ತಿಳಿದಾಗ ಶ್ರೀನಿವಾಸನ ತಾಯಿ ದೂರವಾಗುತ್ತಾಳೆ. ಮುಂದೆ ಶ್ರೀನಿವಾಸ ಬ್ರಾಹ್ಮಣ ಸಂಪ್ರದಾಯದಲ್ಲಿ ವಿಧವೆಯರ ಹೀನಪರಿಸ್ಥಿತಿ

ಕಂಡು ಧನಲಕ್ಷ್ಮಿಗೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಕ್ಕೆ ಮುಂದಾಗುತ್ತಾಳೆ. ಸಾಮಾನ್ಯ ಮಧ್ಯಮ ವರ್ಗದ ಧನಲಕ್ಷ್ಮಿ ಒಂದು ಕಡೆ ಧರ್ಮ ಇನ್ನೊಂದು ಕಡೆ ಸಂಸಾರ ಸಾಗಿಸುವುದು ಸಹ ಅತ್ಯುತ್ತಮವಾದ ಚಿತ್ರಣವನ್ನು ನೀಡಿದ್ದಾರೆ.

ಕಾರ್ಲ್‌ಮಾರ್ಕ್ಸ್ ನಂಜಮ್ಮ ಬಡವಳಾದರು ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿ ಮನೆಗೆಲಸವನ್ನು ಮಾಡಿಕೊಂಡು ಬದುಕನ್ನು ಕಟ್ಟಿಕೊಳ್ಳುವ ಮಧ್ಯಮವರ್ಗದ ಹೆಂಗಸು. ಈ ರೀತಿಯಾಗಿ ನಂಜಮ್ಮ ತನ್ನ ದುಡಿಮೆಯ ಮೂಲಕ ಮಧ್ಯಮವರ್ಗದ ಪರಿಸ್ಥಿತಿ ದಾಟಲು ಹೋಗುತ್ತಾಳೆ ಆದರೆ ಅದು ಸಾಧ್ಯವಾಗದೆ ಇರುವ ಪರಿಸ್ಥಿತಿಗೆ ಬಂದರು ಸಹ ಬದುಕಿನ ಬಗ್ಗೆ ಭವಿಷ್ಯದ ಬಗ್ಗೆ ಕನಸನ್ನು ಹೊಂದಿರುವ ಮಧ್ಯಮವರ್ಗದ ಹೆಣ್ಣುಮಗಳು. ತಾನು ಮಾಡುವ ಮನೆಗೆಲಸದ ಮೂಲಕ ಹಣ ಸಂಪಾದಿಸಿ ಈ ಬಡತನದಿಂದ ದೂರವಾಗಿ ಮುಂದೆ ಉತ್ತಮವಾದ ಬದುಕಿನ ಕಟ್ಟಿಕೊಳ್ಳಲು ಸೆಣಸಾಡುವ ಪಾತ್ರ ನಂಜಮ್ಮನದಾಗಿದೆ.

ಸತ್ಯನಾರಾಯಣರ ಕಥೆಗಳಲ್ಲಿ ಕಂಡು ಬರುವುದು ನಗರ ಜೀವನ ಅವರ ಎಲ್ಲಾ ಕಥೆಗಳಲ್ಲು ನಗರ ಪ್ರಜ್ಞೆ ಹೆಚ್ಚಾಗಿದೆ ಹಾಗೂ ಅವರ ಕಥೆಗಳಲ್ಲಿ ಬರುವ ಪಾತ್ರಗಳು ನಗರದ ಅತ್ಯಂತ ವಿದ್ಯಾವಂತ ಜನಾಂಗವಾಗಿದೆ. ಸತ್ಯನಾರಾಯಣರವರ ಕಥೆಗಳಲ್ಲಿ ನಡೆಯುವ ಪ್ರಸಂಗಗಳು, ಕ್ಲಬ್‌ಗಳಲ್ಲಿ ಗೆಳೆಯರ ಜೊತೆಗೆ ಈ ರೀತಿಯಾಗಿ ನಗರಗಳ ಚಿತ್ರನ ಕಂಡು ಬರುತ್ತದೆ.

ಇವರ ಕಥೆಗಳಲ್ಲಿ ಸಾಮಾನ್ಯವಾಗಿ ಹಳ್ಳಿಗಳಿಂದ ನಗರಗಳಿಗೆ ವಲಸೆ ಹೋಗಿರುವವರು ಹೆಚ್ಚಾಗಿ ಕಂಡು ಬರುತ್ತಾರೆ. ಕೆಲವು ಕಥೆಗಳಲ್ಲಿ ಸತ್ಯನಾರಾಯಣ ಮಧ್ಯಮವರ್ಗದ ಜನರ ನಗರ ಜೀವನ ಹೇಳುತ್ತಾರೆ. ಸೈಕಲ್ ಇನ್ನೊಂದು ಸಾಕು ಎಂಬ ಕಥೆ ನಗರದ ಒಂದು ಮಧ್ಯಮವರ್ಗದ ಸಾಮಾನ್ಯ ಕುಟುಂಬದ ಸಮಸ್ಯೆಗಳನ್ನು ತೆರೆದಿಡುತ್ತವೆ.

ಮಧ್ಯಮವರ್ಗದ ಕುಟುಂಬಗಳು ನಗರಗಳಲ್ಲಿ ಅವರ ಪರಿಸ್ಥಿತಿ ಅಂದಿನ ಬೆಂಗಳೂರಿನ ಚಿತ್ರಣವನ್ನು ಲೇಖಕರು ಕಟ್ಟಿಕೊಡುತ್ತಾರೆ.

ಆದರೆ ಪೂರ್ವನಾಮದ ವಲಸೆ ಕಥೆಯಲ್ಲಿ ಬಾಂಬೆಯಂಥ ನಗರದ ಚಿತ್ರಣವನ್ನು ಹಾಗೂ ಬಾಂಬೆಯನಗರದ ಜೀವನ ಚಿತ್ರಣ ಹಾಗೂ ಅಲ್ಲಿನ ಬದುಕಿನ ಚಿತ್ರಣವನ್ನು ಲೇಖಕರು ಕಟ್ಟಿಕೊಡುತ್ತಾರೆ.

ಹಾಗೇ ಬಾಂಬೆಯಂತ ನಗರದಲ್ಲಿ ಅಪಾರ್ಟಮೆಂಟ್ ಸಂಸ್ಕೃತಿಗೆ ಒಳಗಾಗುವ ಮಧ್ಯಮವರ್ಗದ ಶ್ರೀಮಂತ ಕುಟುಂಬಗಳು ಕಂಡು ಬರುತ್ತವೆ. ಅದೇ ರೀತಿ ಅಮೆರಿಕನ್ ಮನೆ ಎಂಬ ಕಥೆಯಲ್ಲೂ ಸಹ ನಾವು ಬೇರೊಂದು ದೇಶದ ರಾಜ್ಯದಲ್ಲಿನ ನಗರಜೀವನದ ಚಿತ್ರಣ ಕಂಡು ಬರುತ್ತದೆ. ಕಥಾನಾಯಕಿಯ ಮಧ್ಯಮವರ್ಗದ ಅಮೆರಿಕನ ಮನೆಯಾದರು ಸಹ ನಗರ ಜೀವನದ ಬದುಕು ಹಾಗೂ ಸಮಸ್ಯೆಗಳನು ಚಿತ್ರಿಸುತ್ತದೆ. ಅದೇ ಕಥೆಯಲ್ಲಿ ಕಂಡು ಬರುವ ಮಗ್ಗೆಯ ಚಂದ್ರಶೇಖರವರು ಸಹ ನಗರದ ಒಂದು ವಿಲ್ಲಾದಲ್ಲಿ ಐಶಾರಾಮಿ ಬದುಕನು ಅಂದರೆ ಸಾಮಾನ್ಯಳಾಗಿ ಬದುಕುತ್ತಾಳೆ. ಆದರೆ ಮಗ್ಗೆಯ ಪ್ರೋ ಚಂದ್ರಶೇಖರವರು ಸಹ ಅಮೆರಿಕಾದ ನಗರದಲ್ಲಿ ಬದುಕುತ್ತಿದ್ದರು ಐಶಾರಾಮಿ ಜೀವನ ಕಂಡು ಬರುತ್ತದೆ.

ಕೆ. ಸತ್ಯನಾರಾಯಣರವರ ಕಥೆಗಳು ಭಾರತ ದೇಶದ ನಗರಗಳಾದ ಬೆಂಗಳೂರು – ಮೈಸೂರು, ಬಾಂಬೆ – ಕಲ್ಕತ್ತ ಹಾಗೂ ಅಮೆರಿಕನ ನಗರಗಳಲ್ಲಿ ನಡೆಯುವ ಕಥೆಗಳಾಗಿವೆ.

ಸಾಮಾನ್ಯವಾಗಿ ನಗರಗಳು ಮನುಷ್ಯ ಆಕರ್ಷಣ ಕೇಂದ್ರಗಳಾಗಿವೆ ಹಾಗೂ ನಾಗರೀಕತೆ ಬೆಳೆದಂತೆ ನಗರಗಳೆ ಬೆಳೆದು ನಿಂತಿವೆ. ಆದರೆ ಮನುಷ್ಯ ನಾಗರೀಕನಾಗದಿದ್ದರು ಸಹ ನಗರದಲ್ಲಿ ಬದುಕ ಬೇಕು ಬದುಕನ್ನು ಕಟ್ಟಿಕೊಳ್ಳಬೇಕು ಎಂಬ ನಿಯಮಗಳಲ್ಲಿ ಬದುಕುತ್ತಿದ್ದಾನೆ. ಸತ್ಯನಾರಾಯಣ ತಮ್ಮ ಮುಂಬೈ – "ಒಂದು ಅಬ್ರಾಹ್ಮಣ ನಗರ" ಎಂಬ ಕಥೆಯಲ್ಲಿ ಮುಂಬೈನಗರದ ಜೀವನ, ವಲಸೆಯಿಂದಾಗುವ ಪರಿಣಾಮಗಳು ಮುಂಬೈ ನಗರ ಬೆಳೆದು ಬಂದದು ಹಾಗೂ ಮುಂಬೈನಗರದ ಕನ್ನಡಿಗರ ಸಂಸ್ಕೃತಿ – ಸ್ಥಾನಮಾನ ಹಾಗೂ ಮುಂಬೈ ನಗರವೆಂದೂ ಒಂದು ಪರಕೀಯ ಎಂದು ಹೇಳುವ ಲೇಖಕರು ಮುಂದೆ ಆ ನಗರದಲ್ಲೇ ವಾಸಿಸುವುದನ್ನು ಕಾಣಬಹುದು.

ಮುಂಬೈನಗರ ಅಧಿಪತ್ಯ ಯಾರ ಕೈಯಲ್ಲಿದೆ ಮುಂಬೈನಗರಕ್ಕೆ ಹಣ, ಸಂಪತ್ತು ತಂದವರು ಯಾರು ಪಾರ್ಸಿಗಳು ಕೇವಲ ತಮ್ಮ ಬುದ್ಧಿವಂತಿಕೆಯಿಂದ ಮಾತ್ರ ಮುಂಬೈನ ಬೇರು ಬಿಟ್ಟಿದ್ದಾರೆ ಹಾಗೂ ಮುಂಬೈ ನ ಎಲ್ಲಾ ಜನಾಂಗ ಬಾಳಿ ಬದುಕುತ್ತಿದೆ.

ಮಹಾರಾಷ್ಟ್ರಕ್ಕೆ ಸೇರಿದ ಮುಂಬೈನಲ್ಲಿ ಮರಾಠಿಗರ ಅಧಿಪತ್ಯ ಕಡಿಮೆ. ಇವರು ಮುಂಬೈ ಬಂದು ಅಧಿಪತ್ಯ ಸಾಧಿಸುವ ಹೊತ್ತಿಗೆ ಬೇರೆ ಜನಾಂಗ ಅಧಿಪತ್ಯ ಸಾಧಿಸಿತ್ತು.

ಪ್ರಮುಖವಾದ ಮುಂಬೈಯಲ್ಲಿ ಕರಾವಳಿ ಕನ್ನಡಿಗರು, ಬಹುಮುಖ್ಯವಾಗಿ ನೆಲೆಸಿದವರು ಸಹ ಅವರು ತಮ್ಮ ಸಂಸ್ಕೃತಿಯನ್ನು ಮರೆತಿಲ್ಲ ಹಾಗೂ ತಮ್ಮ ಮೂಲ ಊರುಗಳ ಒಡನಾಟ ಉತ್ತಮವಾಗಿದೆ ಎಂದು ಹೇಳುತ್ತಾರೆ.

ಈ ರೀತಿಯಾಗಿ ಮುಂಬೈಗೆ ಎಂಬ ನಗರಕ್ಕೆ ಸಾಗುವ ಮಂದಿಗೆ ಪ್ರಾರಂಭದಲ್ಲಿ ಪರಕೀಯತೆ – ಅನಾಥಪ್ರಜ್ಞೆ ಕಂಡು ಬಂದರು ಸಹ ನಂತರದಲ್ಲಿ ಅವರು ಮುಂಬೈ ನಗರದಲ್ಲಿ ಸಾಮಾನ್ಯನಾಗಿ ಬದುಕುತ್ತಾನೆ.

ಸತ್ಯನಾರಾಯಣರವರು ಸಾಮಾನ್ಯ ಹಳ್ಳಿಗರಾದರೂ ಸಹ ಅವರ ಕಥೆಗಳಲ್ಲಿ ಉನ್ನತ ನಾಗರಿಕತೆ ಪಡೆದಿರುವ ದೇಶದ ಪ್ರಮುಖ ರಾಜಧಾನಿಗಳ ನಗರ ಜೀವನ ಕಂಡು ಬರುತ್ತವೆ.

ಬೇಡ! ಬೇಡ! ಫೋರ್ಡ್ ಕಂಪೆನಿಯ ಕೆಲಸ ಎನ್ನುವ ಕಥೆಯನ್ನು ಅದರ ವಿಸ್ತಾರಕ್ಕಾಗಿ ಮೆಚ್ಚಬೇಕು. ಅಂಗಮುತ್ತು ಎನ್ನುವ ಮನುಷ್ಯ ಎಲ್ಲ ಬಿಟ್ಟು ತನ್ನ ಇಚ್ಛೆಗೆ ಒಗ್ಗುವ ಕೆಲಸ ಆಯ್ದುಕೊಂಡ ಆತ್ಮಸಂತೋಷದಿಂದ ಇರಬೇಕಾದರೆ ಭಾರತದ ಕೆಳಮಧ್ಯಮ ಹಾಗೂ ಅಷ್ಟಿಷ್ಟು ಕಲಿತ ಕೆಳಮಧ್ಯಮ ಜನರಲ್ಲಿ ಹಬ್ಬಿರುವ ಮಹಾನ್‌ರೋಗವಾದ ಪರ್ಮನೆಂಟ್ ಕೆಲಸ, ಪೆನ್ಷನ್ ಎಂಬ ಆಮೀಶಗಳಿಗೆ ತುತ್ತಾಗಿ ಕಾಲದ ಹಂಗಾರದ ಆಟದ ಕೆಲಸ ಬಿಟ್ಟು ಫೋರ್ಡ್ ಕಂಪೆನಿಯ ಕೆಲಸಕ್ಕೆ ಒತ್ತಾಯದಿಂದ ಸೇರಿಕೊಳ್ಳುತ್ತಾನೆ. ಮೆಟ್ರಿಕ್ ಫೇಲಾದರೂ ಬದುಕಿನಲ್ಲಿ ಪಾಸಾಗಿದ್ದ. ಅದರ ಆನಂದಗಳನ್ನು ಅನುಭವಿಸಿದ್ದ ಅವನು ಫೇಲಾಗುವುದೇ ಜಂಗವಮುತ್ತವನ್ನು ತೊರೆದು ಟೈಂ ಆಫೀಸ್‌ನಲ್ಲಿ ಕೆಲಸ ಮಾಡಲು ಶುರುಮಾಡುವುದರೊಂದಿಗೆ. ಟೈಂ ಆಫೀಸ್‌ನಲ್ಲಿ ಸೇರಿದ್ದೇ ಅವನ ಟೈಂ ಬರಬಾದು ಆಗತೊಡಗುತ್ತದೆ. ಫೋರ್ಡ್ ಕಂಪನಿ ಕೊಟ್ಟ ಅರಶಿನ ಬಣ್ಣದ ಟೀ ಶರಟನ್ನು ಎತ್ತಿಟ್ಟು ಅದರ ಬದಲಿಗೆ ಅಣ್ಣಾನಗರ ಕ್ಲಬ್ಬಿನ ಟೀ ಶರಟನ್ನು ತೊಟ್ಟು ಟೆರೇಸಿನ ಮೇಲೆ ಹೋದಂತೆ ಅವನೂ ಫೋರ್ಡ್ ಕಂಪೆನಿಯ ಕೆಲಸ ಬಿಟ್ಟುಹೋಗಿದ್ದರೆ ಈ ಕಥೆಯ ಆಶಯವನ್ನು ಜಾಗತೀಕರಣ ಹರಣ ಮಾಡುವ ಮನುಷ್ಯನ ಸ್ವಾತಂತ್ರದ ಹಿನ್ನೆಲೆಯ ಒಬ್ಬಿಬ್ಬರು ವಿವೇಚಿಸುತ್ತಾರೆ. ಆದರೆ ಕಥೆ ಮಾತಾಡುವುದು ದೇಶ ತಂದುಕೊಟ್ಟಿರುವ ಅಭದ್ರತೆಯ ಭಯವು ಕದಿಯುವ ಮನುಷ್ಯ ಸಂತೋಷದ ಬಗ್ಗೆ. ಜಾಗತೀಕರಣದ ಕಲ್ಪನೆಗೆ ಒತ್ತಾಸೆ ದೊರೆಯುತ್ತದೆ. ಆ ಕಂಪೆನಿ ಫೋರ್ಡ್ ಕಂಪೆನಿ ಎನ್ನುವುದು ಮತ್ತೂ ಅದು ಅಮೆರಿಕದ ಕಂಪನಿ, ಅಲ್ಲಿ ಅವರವರೇ

ರಿವಾಜುಗಳು ಎನ್ನುವ ಮಾತುಗಳಿಂದ ಮಾತ್ರ, ಆಫೀಸರುಗಳಿಗೆ ಹಾಗೂ ಇತರರಿಗೆ ಬೇರೆ ಬೇರೆ ಕ್ಲಬ್ಬುಗಳು, ಟಾಯ್ಲೆಟ್‌ಗಳು ತುಂಬಾ ಹಿಂದೆ ಒಂದು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಟಾಯ್ಲೆಟ್ಟಿನ ಬಾಗಿಲಿಗೆ ಹಾಕಿದ್ದ ಎಕ್ಸಿಕ್ಯೂಟಿವ್ ಓನ್ಲಿ, ಎಂಬ ಬೋರ್ಡ್ ಓದಿದ ನೆನಪಿದೆ ನನಗೆ, ವಾಸ್ತವವೆಂದರೆ ಜಾಗತೀಕರಣದ ಮಾಯೆ ನಮ್ಮನ್ನು ಆವರಿಸಿರುವುದಕ್ಕಿಂತ ನಾವು ಈ ಮಾಯೆಯಲ್ಲಿ ಹೋಗಿ ಸಿಕ್ಕಿಕೊಂಡಿರುವುದು. ಕೊನೆಗೆ ಆಡಲು, ಕಲಿಸಲು, ಅವಕಾಶ ದೊರಕದೆ ಅಂಗಮುತ್ತಂ ಪ್ರತಿದಿನ ಕಂಪೆನಿಯ ಪ್ಲಾಂಟಿನಲ್ಲಿ ಕೃತಕವಾಗಿ ನಿರ್ಮಿಸಿರುವ ಗುಡ್ಡದ ಮೇಲಕ್ಕೆ ಹೋಗಿ, ನಿಂತು ನೋಡಿಕೊಂಡು ಮೇಲಿಂದ ಮೇಲೆ ಸಿಗರೇಟು ಸೇದುತ್ತಾನೆ. ಅವನು ನೋಡುವುದಾದರೂ ಏನಿಲ್ಲವನ್ನು ಮಾತ್ರವೇ. ಜೀವಂತ ಆಟವನ್ನು ತೊರೆದು ಲಿಂಗಮುತ್ತು ಪುಪ್ಪದೊಳಕ್ಕೆ ವಿಷಾನಿಲವನ್ನು ತುಂಬಿಕೊಳ್ಳುತ್ತಿದ್ದಾನೆ. ಇನ್ನೆಂದೂ ಅವನು ನಿಜವಾದ ಟೆನಿಸ್ ಆಡಲಾರ ಅವನು ಅದನ್ನು ಆಡುವುದೇನಿದ್ದರೂ ಭ್ರಮೆಯಲ್ಲಿ ಮಾತ್ರ.

ಕೆ. ಸತ್ಯನಾರಾಯಣ ಕನ್ನಡ ಗದ್ಯಬರಹ ವಿಶಿಷ್ಟಮಾರ್ಗವೊಂದನ್ನು ತಮ್ಮದಾಗಿಸಿಕೊಳ್ಳು ತವಕಿಸುತ್ತಿದ್ದರೆಂಬ ಕುರುಹು ರಾಮಚಂದ್ರ ದೇವರ ಕೃತಿಗೆ ಅವರು ಬರೆದ ಸುದೀರ್ಘ ಹಿನ್ನುಡಿಯ ಮೂಲಕ ಪ್ರಸ್ತುತವಾಗುತ್ತದೆ. ಅಲ್ಲಿ ಅವರು "ಈ ಸಂಕಲನದ ಬಹುತೇಕ ಲೇಖನಗಳು ಹೊಸಬರವಣಿಗೆಯ ಕ್ರಮದ ಅಗತ್ಯದ ಪ್ರಶ್ನೆಯನ್ನು ಮತ್ತೆ ಮತ್ತೆ ಎತ್ತಿಕೊಳ್ಳುತ್ತವೆ" ಎನ್ನುವಾಗಲೂ ತಾವು ಅಂತಹ ಮಾರ್ಗವೊಂದಕ್ಕಾಗಿ ತಹತಹಿಸುತ್ತಿರುವುದರ ಕುರುಹನ್ನು ಕೊಡುತ್ತಾರೆ. ಅಲ್ಲಿಂದ ಕೊಂಚ ಮುಂದುವರಿದು ಅವರು ವಸಾಹತು ಶಾಹಿಯ ಬದುಕು, ಯೋಚನೆ ಮತ್ತು ಅಭಿವ್ಯಕ್ತಿಯ ಮೇಲಣ ಪ್ರಭಾವವನ್ನು ಹೇಗೆ ಎದುರಿಸಬೇಕು ಎಂಬ ಸಾಹಿತ್ಯಿಕ ಸವಾಲಿನ ಮುನ್ಸೂಚನೆಯನ್ನೂ ನೀಡುತ್ತಾರೆ. "ಚರಿತ್ರೆ ಮತ್ತು ಮನುಷ್ಯ ಎರಡೂ ತಲುಪಬಹುದಾದ ಅಂತಿಮ ಸಾಧ್ಯತೆಯ ಸ್ಥಿತಿಯನ್ನುನಾಗರಿಕತೆ ಈಗಾಗಲೇ ಅಮೆರಿಕಾ, ಯುರೋಪಿನಲ್ಲಿ ತಲುಪಿಬಿಟ್ಟಿವೆ. ಇನ್ನು ಉಳಿದಿರುವ ಕೆಲಸವೇನಿದ್ದರೂ ಹೇಗಾದರೂ ಮಾಡಿ ಪ್ರತಿಯೊಬ್ಬರೂ ಆ ನಾಗರಿಕತೆಗೆ ಅಧಿಕೃತವಾಗಿ ಸೇರುವುದು" ಇದೊಂದು ಅತ್ಯಂತ ಕುತೂಹಲದ ಮುನ್ಸೂಚನೆಯೆಂದು ಯಾಕೆ ಹೇಳುತ್ತಿದ್ದೇನೆಂದರೆ, ಮುಂದೆ ಕನ್ನಡ ಸಾಹಿತ್ಯ ಹಿಡಿದ ಒಂದು ಹಾದಿಯ ಅತಿಸೂಕ್ಷ್ಮ ಕುರುಹು ಇಲ್ಲಿ ಕಾಣಿಸುತ್ತಿದೆ.

ಅಡಿ ಟಿಪ್ಪಣಿ:
ಅಮೆರಿಕನ್ ಮನೆ, ಪರಸ್ಪರ ಪ್ರಕಾಶನ, ಮುನ್ನುಡಿ, ಪುಟಸಂಖ್ಯೆ – 9, 2016

ಸತ್ಯನಾರಾಯಣ ಯಾವತ್ತೂ ಬರಹದ ಹಿಂದೆ ಪರಂಪರೆಯ ಮರ ಗಟ್ಟಿಯಾಗಿ ನಿಂತು ಅವರ ಅಭಿಪ್ರಾಯಗಳು ಪಾಶ್ಚಾತ್ಯ ಪ್ರಭಾವದೆದರು ಗಲಿಬಿಲಿಗೊಳ್ಳದಂತೆ ಮತ್ತಷ್ಟು ಗಟ್ಟಿಗೊಳಿಸುವ ಸೊಗಸು ಅವರ ಕತೆಗಳನ್ನು ಮಾಸ್ತಿ ಪರಂಪರೆಗೆ ಹತ್ತಿರ ತಂದು ನಿಲ್ಲಿಸುತ್ತದೆ. ಆದರೆ ಮಾತನಾಡುವ ಮರದ ರೂಪಕವನ್ನರಿಯದ ನಮ್ಮ ವಿಮರ್ಶಕರು ಮಿತ್ರರು ಈ ಕಾರಣದಿಂದಲೇ ಕೆ. ಸತ್ಯನಾರಾಯಣ ಕತೆಗಳನ್ನು ಓದಿ ಅವರನ್ನು ಮಾಸ್ತಿಯವರ ಉತ್ತರಾಧಿಕಾರಿಗಳೆಂದೋ ದಕ್ಷಿಣಾಧಿಕಾರಿಗಳೆಂದೋ ಜನರಲೈಸ್ ಮಾಡುವ ವಿಮರ್ಶೆಯ ದುರಂತಕ್ಕೆ ದಕ್ಕಿಹೋದುದು ಇವನ್ನು ತಮಾಷೆಯ ಸಂಗತಿಯಾಗಿ ಬಿಟ್ಟಿದೆ. ರಾಮಚಂದ್ರದೇವರ ಲೇಖನ ಮತ್ತು ಲೇಖನವನ್ನು ಒಳಗೊಂಡ ಕೃತಿಗೆ ಸತ್ಯನಾರಾಯಣ ಬರೆದ ಹಿನ್ನುಡಿಯನ್ನು ಗಮನಿಸಿದಾಗ ಅವರ ಗದ್ಯಸಾಹಿತ್ಯವು ಮುಂದಿನ ದಿನಗಳಲ್ಲಿ ದಕ್ಕಿಸಿ ಕೊಂಡ ಪರಂಪರೆಯ ಸತ್ವ ಮತ್ತು ಸತ್ವದ ಮಹತ್ವ ಮನದಟ್ಟಾಗುತ್ತದೆ. ಅವರು ಒಂದು ಪರಂಪರೆಯ ಆರೋಗ್ಯಕಾರೀ ಕಂಟಿನ್ಯೂಟಿ ಆಗಿದ್ದಾರೆಯೇ ಹೊರತು ಯಾವೊಂದು ಪರಂಪರೆಯ ಉತ್ತರಾಧಿಕಾರಿಯೂ ಆಗಿರಲು ಬಯಸುವುದಿಲ್ಲ ಎನ್ನುವುದನ್ನೂ ಈ ಹಿನ್ನುಡಿ ಸ್ಪಷ್ಟಪಡಿಸುತ್ತದೆ.

ಅಡಿ ಟಿಪ್ಪಣಿ:
ಅನುಭೂತಿ, ಸಪ್ನಬುಕ್ ಹೌಸ್, ಕೆ. ರಘುನಾಥ್, ಚಲನಶೀಲ ಸಂಬಂಧಗಳ ಶೋಧ, 2016

ಕೆ. ಸತ್ಯನಾರಾಯಣರ ಕಥೆಗಳಲ್ಲಿ ಮಾಸ್ತಿ ಪ್ರಭಾವ

ಮಾಸ್ತಿಯವರು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾವದ ವ್ಯಕ್ತಿತ್ವದ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಅನೇಕ ರೀತಿಯ ಕಥೆಗಳನ್ನು ನೀಡಿದವರು. ಮಾಸ್ತಿಯವರಿಗಿಂತ ಮುಂಚೆ ಪಂಜೆ ಮಂಗೇಶರಾಯರು ನನ್ನ ಚಿಕ್ಕಪ್ಪ ಮತ್ತು ಕಮಲಪುರದ ಹೊಟ್ಲಿನಲ್ಲಿ ಕಥೆಗಳನ್ನು ಬರೆಯುವುದರ ಮೂಲಕ ಕನ್ನಡ ಸಣ್ಣಕಥೆಗಳ ಯುಗ ಆರಂಭಿಸಿದರು. ಇವರ ನಂತರದಲ್ಲಿ ಕೇರೂರು ವಾಸುದೇವಾಚಾರ್ಯರು ಉತ್ತರ ಕರ್ನಾಟಕ ಭಾಷೆಗಳಲ್ಲಿ ಕಥೆ ಬರೆದರು. ನಂತರದಲ್ಲಿ ಬಂದ ಮಾಸ್ತಿಯವರು ಕನ್ನಡ ಸಾಹಿತ್ಯ ಲೋಕದಲ್ಲಿ ರಂಗನ ಮದುವೆ, ರಂಗಪ್ಪನ ದೀಪಾವಳಿ ಕಥೆಯು ಮೂಲಕ ಮಾಸ್ತಿ ಕಥಾ ಪರಂಪರೆ ಆರಂಭಿಸಿದರು. ಒಂದು ಸಂಪ್ರದಾಯಸ್ಥ ಕುಟುಂಬದಿಂದ ಬಂದಿದ್ದ ಮಾಸ್ತಿಯವರು ತಮ್ಮ ಸಾಂಪ್ರದಾಯಿಕ ದೃಷ್ಟಿಯಿಂದಲೇ ಕಥೆಗಳನ್ನು ಬರೆಯುತ್ತಾರೆ. ಮಾಸ್ತಿಯವರ ಕಥೆಗಳಲ್ಲಿ ಸಾಮಾನ್ಯ ಹಳ್ಳಿಯ ಮಹಿಳೆ ಮಾಸ್ತಿಕಥೆಯ ಕಥಾನಾಯಕಿಯಾಗುತ್ತಾಳೆ. ಹಾಗೇ ಮೋಸರಿನ ಮಂಗಮ್ಮ ಕಥೆಯ ಹಳ್ಳಿಯ ಹೆಂಗಸು ಮಾಸ್ತಿ ಕಥೆಯ ನಾಯಕಿಯಾಗುತ್ತಾಳೆ. ಮಾಸ್ತಿಯವರು ತಾವು ಕಂಡ ಸ್ಥಿತಿ–ಗತಿ ಹಾಗೂ ಬದುಕನ್ನು ಹಾಗೇ ಹೇಳುವ ಜಾಯಮಾನ, ಮಾಸ್ತಿಯವರ ಕಥೆಗಳಲ್ಲಿ ರೂಪುಗೊಳ್ಳುತ್ತದೆ. ತಾನು ಕಂಡ ಬದುಕನು ಹಾಗೇ ಹೇಳುವ ಮಾಸ್ತಿಯವರು ತಮ್ಮ ಅನೇಕ ಕಥೆಗಳಲ್ಲಿ ಈ ಪರಿಯನು ಕಾಣಬಹುದು. ಉದಾಹರಣೆಗೆ ವೆಂಕಟಶಾಮಿಯ ಪ್ರಣಯ ಪ್ರಸಂಗ ಕಥೆಯಲ್ಲಿ ಸಾಮಾನ್ಯ ಹಳ್ಳಿಯ ಕ್ಷೌರಿಕನ ಮಗ ಮಾಸ್ತಿ ಕಥೆನಾಯಕ ಹಾಗೂ ಈ ಕಥೆಯ ಅಂತ್ಯ ಸಹ ವಿಭಿನ್ನವಾಗಿದೆ. ಹಾಗೇ ಮಾಸ್ತಿಯವರ ಕಥೆಗಳಲ್ಲಿ ಗ್ರಾಮೀಣ ಬದುಕು ಹಾಗೂ ನಗರ ಜೀವನ ಸಾಂಸಾರಿಕ ಬದುಕಿನ ಚಿತ್ರಣ–ಬದುಕಿನ ಏರುಪೇರುಗಳು ಮಾಸ್ತಿಯವರ ಕಥೆಗಳಲ್ಲಿ ಚಿತ್ರಿತವಾಗಿದೆ. ಮಾಸ್ತಿಯವರ ಅನೇಕ ಕಥೆಗಳಲ್ಲಿ ಪ್ರಾದೇಶಿಕತೆ ಕೂಡ ಹೆಚ್ಚಾಗಿ ಕಂಡು ಬಂದಿರುವುದು ಕಾಣಬಹುದು. ಮಾಸ್ತಿಯವರೆ ಹೇಳುವ ಹಾಗೇ "ತಾನು ಕಂಡ ಬದುಕನ್ನು ಹೇಳುತ್ತೇನೆ?" ಎಂದು ಮಾಸ್ತಿಯವರೇ ಹೇಳಿದ್ದಾರೆ. ಈ ರೀತಿಯಾಗಿ ಮಾಸ್ತಿಯವರು ಕನ್ನಡ ಆಸ್ತಿಯಾಗಿ ಕನ್ನಡ ಸಣ್ಣಕಥೆಗಳ ಜನಕ ಎಂದು ಹೆಸರು ಪಡೆಯುತ್ತಾರೆ.

ಮಾಸ್ತಿಯವರ ಕಥೆಗಳನ್ನೇ ಬಹುವಾಗಿ ಮೆಚ್ಚುವ ಕೆ. ಸತ್ಯನಾರಾಯಣರವರು ತಮ್ಮ ಕಥನ ಕಲೆಯಾಗಿ ರೂಢಿಸಿಕೊಂಡಿದ್ದಾರೆ. ಸತ್ಯನಾರಾಯಣರವರು 1993ರಲ್ಲಿ ಬರೆದ "ಮೊದಲ ಪ್ರೇಮದ ಕಥೆ"ಯಲ್ಲಿ ಮಾಸ್ತಿ ಪ್ರಭಾವ ಕಂಡುಬರುತ್ತದೆ . ಮಾಸ್ತಿ ಕಥೆಗಳನ್ನು ಹೇಳುತ್ತಿರಲಿಲ್ಲ ದಾಟಿಸುತ್ತಿದ್ದರು ಎಂದು ನಂಬುವ ಸತ್ಯನಾರಾಯಣ ಈ ದಾಟಿಸುವ ಕ್ರಿಯೆಯಲ್ಲಿ ಅರ್ಥಪಡೆದುಕೊಳ್ಳುತ್ತದೆ ಎಂದು ಕಂಡುಕೊಂಡವರು. ತಮ್ಮ ಮೊದಲ ಕಥೆಯಲ್ಲೇ ಈ ರೀತಿಯ ಪ್ರಯೋಗಕ್ಕೆ ಮುಂದಾದ ಸತ್ಯನಾರಾಯಣ ಈ ಶೈಲಿಯನ್ನೇ ಅವರದ್ದೇ ಆದ ರೀತಿಯಲ್ಲಿ ಪಳಗಿಸುವ ಪ್ರಯತ್ನಗಳನ್ನು ಮಾಡಿದ್ದಾರೆ.

ಉದಾಹರಣೆಗೆ ಈ ಸಂಕಲನದ "ನಡೆಯುತ್ತಿತ್ತು: ಕತೆ ಬೆಳೆಯುತ್ತಿತ ಹಾಗೂ 'ಹೀಗಿಲ್ಲಿ ಅಮೆರಿಕಾ" – ಈ ಎರಡು ಕತೆಗಳನ್ನು ಗಮನಿಸಬಹುದು. ಕಥೆ ನಡೆಯುತ್ತಿತ್ತ, ಕಥೆ ಬೆಳೆಯುತ್ತಿತ್ತ ಕತೆ ದಾಟಿಸುವ ಮಾಸ್ತಿ ಪರಂಪರೆಯನ್ನು ತಂತ್ರವಾಗಿ ಸತ್ಯನಾರಾಯಣ ಬಳಸಿಕೊಂಡಿದ್ದಾರೆ. ಈ ಕಾಲದ ಈ ಸಮಯದ ಕಥೆ ದಾಟಿಸಲು ಮತ್ತು ಈ ರೀತಿಯ ಕಥೆಗಾಗಿ ಪುನರ್ ವಿನ್ಯಾಸಗೊಳಿಸಿದ್ದರ ಸೃಜನಶೀಲ ಉದಾಹರಣೆಯಾಗಿ ನಮ್ಮನ್ನು ಸೆಳೆಯುತ್ತದೆ.

ಇವರ ಕಥೆಗಳಲ್ಲಿ ಜಿಡ್ಡು ಕೃಷ್ಣಮೂರ್ತಿಯವರ ಒಂದು ವೈಚಾರಿಕ ಆಕೃತಿಯೋ ಜೀವಂತ ಸ್ಪಂದನವೋ (ಭೂಪಟವೋ, ಭೂಮಿಯೋ) ಎಂಬ ಅರಿವು ಮರೆವುಗಳ ಸಂದಿಯಲ್ಲಿ ಬಿಡಿಸುವ ಬುದ್ಧಿ ಭಾವನೆಗಳೆರಡನೂ ಬೇಡುವ ಸಾಹಸ ಮೂರ್ತೀಕರಿಸುವ ಕಥೆಗಳಾಗಿವೆ. ಇವರ ಕಥೆಗಳಲ್ಲಿ ಜಿಡ್ಡು ಕೃಷ್ಣಮೂರ್ತಿ ಒಂದಿಲ್ಲೊಂದು ರೀತಿಯ ಪ್ರಭಾವವಿದ್ದರೇ – ನಡೆ–ನುಡಿ ಈ ಒಬ್ಬೊಬ್ಬ ವ್ಯಕ್ತಿತ್ವದ ಕನ್ನಡಿಯಲ್ಲೂ ಒಂದೊಂದು ರೀತಿ ಕಾಣಬಹುದು.

ಕೆ.ಸತ್ಯನಾರಾಯಣರ ಕಥೆಗಳು ನಮ್ಮ ಕಾಲದ ಕಥೆಗಳನ್ನು ಹೇಳುತ್ತ, ಈ ಕಾಲದ ಪ್ರಸ್ತುತ ಕಥೆಗಳನ್ನು ಮಾಸ್ತಿಯವರಂತೆ ಕಥೆಯೊಳಗೆ ಇದ್ದು ಇಲ್ಲದಂತೆ ಹೇಳುವ ಕಲೆಗಾರಿಕೆ ಪ್ರದರ್ಶಿಸುವ ಮೂಲಕ ಮಾಸ್ತಿಪರಂಪರೆಯನ್ನು ಹೊಸ ನೆಲೆಗಳಿಗೆ ವಿಸ್ತರಿಸುವುದನ್ನು ನಾವು ಕಾಣಬಹುದು.

ಮಾಸ್ತಿ ರೀತಿಯ ಕಥೆಗಳನ್ನೇ ಹೋಲುವ ಸತ್ಯನಾರಾಯಣರವರ ಕಥೆಗಳಲ್ಲಿ ಸಾಮಾನ್ಯ ಹೆಣ್ಣುಮಕ್ಕಳ ಪಾತ್ರಗಳ ಮೂಲಕ ಸತ್ಯನಾರಾಯಣ ಸ್ಪಂದನಶೀಲತೆಯ ರಹಸ್ಯಗಳನ್ನೇ ಗುರುತಿಸಬಹುದು. ಉದ್ಯೋಗಸ್ತ ಮಹಿಳೆಯ ಅಂತರಾಳ, ಸೈಕಲ್ ಇನ್ನೊಂದು ಸಾಕು, ಆಧುನೀಕರಣದ ಅಬ್ಬರದಲ್ಲಿ ಕಳೆದು ಹೋಗುತ್ತಿರುವ .... ಎಂಬುದನ್ನು ಗುರುತಿಸಲಾಗದಷ್ಟು ರೂಕ್ಷವಾಗುತ್ತಿರುವ ಪರಿಸರ ತಣ್ಣನೆಯ ದುರಂತವನ್ನು ಅಷ್ಟೇ ತಣ್ಣಗೆ ಚಿತ್ರಿಸುತ್ತದೆ.

ಲೋಕನಾಯಕ ಮೇಲುಕೋಟೆ ಪುರಾಣ ಕತೆಗಳ ಭಾವಕೇಂದ್ರದಲ್ಲಿರುವವರು ಹೆಣ್ಣುಗಳೇ. ಬದುಕಿನಂತೆ ಕಥೆಗೆ ಕೂಡಾ ಧಾರಣಶಕ್ತಿ ನೀಡುವುದು ಹೆಣ್ತನವೇ ಎಂಬುದು ಸತ್ಯನಾರಾಯಣ ಅವರು ತಮ್ಮ ಕಥಾ ಕಲೆಗಾರಿಕೆಯ ಮೂಲಕ ಕಂಡುಕೊಂಡಿರುವ ಸತ್ಯವಿರಬಹುದು. ಇದು ಮೂಲತಃ ಲೋಕವನ್ನು ಪ್ರೀತಿಯಿಂದ ಸಹಾನುಭೂತಿಯಿಂದ ಕಾಣಬೇಕೆಂಬ, ಆ ಕಾಣುವ ಕ್ರಿಯೆಯ ಭಾಗವಾಗಿಯೇ ಕಥೆ ಮೂಡಿ ಬರಬೇಕೆಂಬ, ಮಾಸ್ತಿ ಕಥಾ ಧರ್ಮದ ತತ್ವವೇ ಆಗಿವೆ. ಇದಕ್ಕೆ ಪೂರಕವಾಗಿ ಬರುವುದು,

ಕಥಾ ಸಂದರ್ಭದ ಪ್ರತಿಯೊಂದು ಸನ್ನಿವೇಶವನ್ನೂ ಅಕ್ಕಪಕ್ಕದಲ್ಲಿರುವಂತೆ ಅದರ ಎಲ್ಲಾ ಸಣ್ಣ ಅಥೆಂಟಿಕ್ ವಿವರಗಳೊಂದಿಗೆ ಅವು ಕೂಡಾ ಬಹುಮುಖ್ಯ ತುರ್ತಿನೊಂದಿಗೆ ಮಂಡಿಸುವ ಸತ್ಯನಾರಾಯಣ ಅವರ ತುಂಬು ಸಡಗರದ ಶೈಲಿ – ಕೆಲವು ಕಡೆ, ನವಮಧ್ಯಮ ವರ್ಗಕ್ಕೆ ವಿಶಿಷ್ಟವಾದ ಈ ಸಡಗರವು – ಕಥೆಗಾರನ ಅತಿಯಾದ ಪ್ರವೇಶ, ಮಾತು ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಡುತ್ತದೆ ಎನಿಸುತ್ತದೆ.

ಈ ಶೈಲಿ, ವರ್ಗಸ್ಥಿವಾದ ಸತ್ಯನಾರಾಯಣರಂಥ ಲೇಖಕನಿಗೆ (ಇದನ್ನು ಅವರು ತಮ್ಮ ಕಥೆಗಳ ಮಧ್ಯಂತರ ಪ್ರವೇಶಗಳಲ್ಲಿಯೇ ಸೂಚಿಸಿಕೊಂಡಿದ್ದಾರೆ). ಸ್ವಲ್ಪ ಅಪಾಯದ ಶೈಲಿಯೇ, ಸ್ವಲ್ಪ ಹದ ತಪ್ಪಿದರೆ ಈ ಶೈಲಿ ಬರೀ ಉಡಾಫೆಯ ಮಟ್ಟಕ್ಕಿಳಿಯುವ, ಕೇವಲ ಬೌದ್ಧಿಕ ಕಸರತ್ತಿನಲ್ಲಿ ಕಾಣಿಸುವ, ಜಾಣಮಾತುಗಾರನ, ಸಾಂಸ್ಕೃತಿಕ ಹರಿಕಥೆಯಂತೆ ಕೇಳಿಸುವ ಕಥೆಗಳನ್ನು ಸೃಷ್ಟಿಸಬಲ್ಲದು ಈ ಸಂಕಲನದ ಮಿಕ್ಕ ಕಥೆಗಳು ಇದಕ್ಕೆ ಉದಾಹರಣೆಗಳಂತಿವೆ.

ಅದೇ ರೀತಿ 'ವಿಕ್ಟೋರಿ ಮಗ ದೇವಲಿಂಗು' ಕಥೆಯಲ್ಲಿ ನಮ್ಮ ಪಾರಂಪರಿಕ ಕಥೆಗಾರಿಕೆಗೆ ಒದಗಿರುವ ಸಾಂಸ್ಕೃತಿಕ ಬಿಕ್ಕಟ್ಟನ್ನು ಸತ್ಯನಾರಾಯಣ ತಮ್ಮದೇ ವಿಶಿಷ್ಟ ವಾಸ್ತವವಾದೀ ಸಡಗರ ಶೈಲಿಯಲ್ಲಿ ಸಾಂಕೇತಿಕವಾಗಿ ಹೇಳಲು ಹೋಗಿ, ಒಂದು ಬೌದ್ಧಿಕ ಗೊಂದಲ ಸೃಷ್ಟಿಸುವುದರಲ್ಲಷ್ಟೇ ಯಶಸ್ವಿಯಾಗುತ್ತಾರೆ.

ಈ ಕಥೆಗಳಲ್ಲಿ ಶೈಲಿಯ ಬಿಕ್ಕಟ್ಟಿನ ಜೊತೆಗೆ ಕಥಾ ಆವರಣದ ಸಾಮಾಜಿಕ ಅಪರಿಚಿತತೆಯೂ ಸೇರಿ, ಕಥೆಗಾರಿಕೆಯಲ್ಲಿ ಒಂದು ರೀತಿ ವಕ್ರತೆ ಕಾಣತೊಡಗುತ್ತದೆ. ಹೀಗೇ "ಇನ್ನೊಬ್ಬ ಗಾಂಧಿಯ ಹೆಂಡತಿ" "ಇಂಗ್ಲೀಷ್ ಗೌಡರು ಎಂಬ ಭಯವೂ" ಹಾಗೂ "ಚಿನ್ನಸ್ವಾಮಿಯೆಂಬ ಮಂಡಲವರದಿ" ಸಹ ಕಥೆಗಳಲ್ಲಿ ಓದುಗನಿಗೆ ನೀರಸ ಕಂಡು ಬರುತ್ತದೆ. ಬದಲಾಗುತ್ತಿರುವ ಕಾಲದ ಹೊಸ ಸವಾಲುಗಳನ್ನು ಕಂಗೆಡಿಸಿ ಉಂಟು ಮಾಡುವ ವಿಸಂಗತಿಗಳನ್ನು ಚಿತ್ರಿಸುವ ಗಂಭೀರ ಉದ್ದೇಶದಿಂದ ಹೊರಡುತ್ತದಾದರೂ, ಅಂತಿಮವಾಗಿ ಇವು ವಿವಾದಕ್ಕೆ ಬದಲಾಗಿ ವ್ಯಂಗ್ಯವನ್ನು ಸೃಷ್ಟಿಸುವುದರೊಂದಿಗೆ ಕಥೆಗಾರನ ನೋಟದಲ್ಲೇ ಏನೋ ಐಬಿದೆ ಎಂಬ ಅನುಮಾನಗಳನ್ನು ಉಂಟುಮಾಡುತ್ತದೆ. ಇದಕ್ಕೆ ಮುಖ್ಯ ಕಾರಣ ಸತ್ಯನಾರಾಯಣ ತಮ್ಮ ವರ್ಗದಾಚೆಗಿನ ಬದುಕಿನ ವ್ಯಾಖ್ಯಾನಕ್ಕಾಗಿ ಹರಿಬಿಡುವುದು. ಇದರಿಂದ ಈ ಕ್ರಿಯೆಗಳ ದೇವಲಿಂಗು, ಕೆ.ಎಮ್. ಗೌಡ ಅಂಡ್ ಕೋ, ಸಿ.ಎಸ್. ಆಚಾರ್ಯ ಹಾಗೂ ಚಿನ್ನಸ್ವಾಮಿ ಅಂಡ ಕೋ, ಹೊಸ ಕಾಲದ ಒತ್ತಡಗಳಿಗೆ ಬದಲು, ಅಣಕಕ್ಕೆ ಒದಗಿ ಬರುವ ವಿದೂಷಕರಾಗಿ ಮೂಡಿಬರುತ್ತಾರೆ. ವರ್ಗದೋಷದಿಂದ ಉಂಟಾಗುವ ಈ ಆಭಾಸ ಕಥೆಗಾರನಾಗಿ ಸತ್ಯನಾರಾಯಣ ಇನ್ನೂ ಅಂತರ್ಯದ ಸಮಗ್ರತೆಯನ್ನು ಸಾಧಿಸಲಾಗಿಲ್ಲ ಎನ್ನುವುದನ್ನು ತೋರುತ್ತದೆ.

ಈ ದೃಷ್ಟಿಯಿಂದ ಸತ್ಯನಾರಾಯಣ ತಮ್ಮ ಗುರು ಮಾಸ್ತಿಯಿಂದ "ತಂತ್ರ" ದೀಕ್ಷೆ ಪಡೆದಂತೆ "ಮಂತ್ರ" ದೀಕ್ಷೆಯನ್ನೂ ಪಡೆಯಬೇಕಾಗಿದೆ. ಕಥೆಗಳನ್ನು ದಾಟಿಸುವ ಕಲೆಗಾರಿಕೆಯಲ್ಲಿ ಮನಸ್ಸಿಟ್ಟ ಸತ್ಯನಾರಾಯಣ ತಮ್ಮನ್ನು ತಾವು ದಾಟಿಕೊಳ್ಳುವ ಕಡೆಗೆ ಮನಸ್ಸಿಟ್ಟಂತೆ ತೋರುತ್ತಿಲ್ಲ. ಇದು ಮೇಲ್ನೋಟಕ್ಕೆ ಕಥೆಗಾರನ ಕಸಬುದಾರಿಕೆಯ ಸಾಮರ್ಥ್ಯಧ ಪ್ರಶ್ನೆಯಾಗಿ ಕಂಡರೂ – ಮೂಲಭೂತವಾಗಿ ಕಥೆಗಾರನ ವ್ಯಕ್ತಿತ್ವದ ಅಖಂಡತೆ – ಪೂರ್ಣತೆಗೆ ಸಂಬಂಧಪಟ್ಟ ಆಧ್ಯಾತ್ಮಿಕ ಪ್ರಶ್ನೆ. ಈ ದೊಡ್ಡ ಪ್ರಶ್ನೆಯನ್ನು ಎಷ್ಟರಮಟ್ಟಿಗೆ ಕಥೆಗಾರ ಎದುರಿಸಿದ್ದಾನೆ ಎಂಬುದರ ಮೇಲೆ ಆತನ ಕಥೆಗಾರಿಕೆಯ ಒಟ್ಟಾರೆ ಸಾರ್ಥಕತೆಯ ನಿರ್ಧಾರಿತವಾಗುತ್ತದೆ. ಇಲ್ಲಿನ ಕಥಾ ಮೀಮಾಂಸೆಯಲ್ಲಿ ಅರಿವು ಯಾವುದು ಮರೆವು ಯಾವುದು ಎಂಬ ಪ್ರಶ್ನೆಯು ಕಥೆ ಮತ್ತು ಅದು ಚಿತ್ರಿಸುವ ಬದುಕಿನ ಮರೆವು ಯಾವುದು ಎಂಬ ಪ್ರಶ್ನೆಯು ಕಥೆ ಮತ್ತು ಅದು ಚಿತ್ರಿಸುವ ಬದುಕಿನ ನಡುವಣ ಪ್ರಶ್ನೆ ಮಾತ್ರ ಅಲ್ಲ ಅದು ಕಥೆ ಮತ್ತು ಕಥೆಗಾರನ ನಡುವಣ ಪ್ರಶ್ನೆ ಕೂಡ ಎಂಬುದನ್ನು ಸತ್ಯನಾರಾಯಣ ಅರಿಯದೇ ಹೋದಲ್ಲಿ ಇವರ ಯಶಸ್ವೀ ಎನಿಸುವ ಕತೆಗಳು ಕೂಡಾ ಆತ್ಯಂತಿಕ ನೋಟದಲ್ಲಿ ಮರೆವುಗಳಾಗಿಯೇ ಕಂಡಾವು. ಸತ್ಯನಾರಾಯಣ ಕನ್ನಡದ ಮಹತ್ವದ, ವಿಭಿನ್ನ ರೀತಿಯ ಕಥೆಗಾರರಾಗಿ ಹೊರ ಹೊಮ್ಮುತ್ತಿರುವುದರಿಂದಾಗಿ ಈ ಮಾತುಗಳನ್ನು ಹೇಳಬೇಕಾಗಿದೆ.

ಮಾಸ್ತಿಯವರ ಅನುಭವಗಳ ಆಳ ವಿಸ್ತಾರಗಳನ್ನು ಎರವಲು ಪಡೆದು ತಮ್ಮದೇ ಶೈಲಿಯಲ್ಲಿ ಪುನರ್ ಕಟ್ಟಿಕೊಡುವ ಕಥೆಗಳು ಇವರದು. ಸಾಮಾಜಿಕ ಹಾಗೂ ತಾತ್ವಿಕವಾಗಿ ಇವರ ಕಥೆಗಳನ್ನು ನೋಡುತ್ತಾ ಹೋದಾಗ ಸಾಹಿತ್ಯ ಕ್ರಾಂತಿ ಮುಗ್ಗರಿಸಲು ಹೋದಾಗ ಹಳೆ ಸಂಪ್ರದಾಯ ಹೊಸ ಮೌಲ್ಯಗಳನ್ನು ಬದಲಾವಣೆಯಂತೆ ಆಲೋಚಿಸುವ ಮನೋಭಾವ ಇವರ ಕಥೆಯಲ್ಲಿದೆ. ಇವರ ಕಥೆಗಳಲ್ಲಿ ಭಾಷೆ ಕಾರಣದಿಂದಾಗಲಿ, ಜಾತಿ ಕಾರಣದಿಂದಾಗಲಿ, ತಾತ್ವಿಕವಾಗಿ ವಿರೋಧಗಳನ್ನು ಆಪೇಕ್ಷಿಸಲಾಗದು. ಮಾರ್ಕ್ಸ್‌ವಾದಿ, ಕಮ್ಯೂನಿಸ್ಟ್ ಧೋರಣೆಗಳೆರಡು ಇವರ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ಹೊಸ ಎಚ್ಚರಗಳನ್ನು ಕಟ್ಟಿಕೊಡದ ಬಿರುಕು ಈ ಕಥೆಗಳಲ್ಲಿದೆ. ವಿದ್ಯಾವಂತ, ಉದ್ಯೋಗಸ್ಥ, ದಲಿತರನ್ನು ಶ್ರೀಮಂತಿಕೆ ಪ್ರತಿಷ್ಠವಾದಿ ನೆಲೆಯಲ್ಲಿ ಗುರುತಿಸುವ ಸತ್ಯನಾರಾಯಣ ಅವರು ಅಂಬೇಡ್ಕರ್ ಸಿದ್ಧಾಂತವನ್ನು ಓದಿಕೊಂಡಿರುವರು.

ಅಡಿ ಟಿಪ್ಪಣಿ:

ಅನುಭೂತಿ, ಸಪ್ನಬುಕ್ ಹೌಸ್, ಸಾಹಿತ್ಯ ಕುರಿತ ವಿಮರ್ಶಾ ಬರಹಗಳು, 2016
ಸಂಪಾದಕಿ: ಬಿ.ಆರ್. ಸುಮಿತ್ರಾ, ವಿಕ್ಟೋರಿಯಾ ಮಗ ದೇವಲಿಂಗು ಕಥಾಸಂಕಲನಕ್ಕೆ ಬರೆದ ಮುನ್ನುಡಿ, 1998
ಅನುಭೂತಿ, 2007ರಲ್ಲಿ ಪ್ರಕಟವಾದ ಅಂಕಣ.
ಸಾಹಿತ್ಯಕೃತಿ, ಅನುಭೂತಿ, ಸಂವಾದ – 1999

ಬಾಣ ಅರ್ಧ ಬರೆದಿಟ್ಟಿರುವ "ಕಾದಂಬರಿ" ಯನ್ನು ಅವನ ಮಗ ಭೂಷಣ ಮುಂದುವರಿಸಿದನಂತೆ. ಮಾಸ್ತಿಯವರ ಅಲಿಖಿತ ಕತೆಗಳನ್ನು ಸತ್ಯನಾರಾಯಣ ಈಗ ಬರೆಯುತ್ತಿದ್ದಾರೇನೋ ಅನ್ನಿಸುತ್ತದೆ. ಆದರೆ ಸತ್ಯನಾರಾಯಣರು ಋಣಿಯಾಗಿರುವುದು ಮಾಸ್ತಿಯವರ ಕಥನ ತಂತ್ರಕ್ಕೆ ಮಾತ್ರ.

ಮಾಸ್ತಿಯವರದು "ತಿಳಿಸುವ ಕತೆ" ಯಾದರೆ, ಸತ್ಯನಾರಾಯಣ ಬರೆಯುತ್ತಿರುವ 'ತಿಳಿಯದ ಕತೆ'. ಮಾಸ್ತಿ ಭಕ್ತಿ ಪರಂಪರೆಯವರು, ಸತ್ಯನಾರಾಯಣರದ್ದು ಸಂಶಯ ಭಕ್ತಿ. "ಕಥಾಪ್ರಬಂಧ ದ (Narative) ವೃತ್ತಿ ನೈಪುಣ್ಯದಲ್ಲಿ ಸತ್ಯನಾರಾಯಣರಿಗೆ ವಿಶೇಷ ಆಸಕ್ತಿ. ಕಥೆಗೆ ಕಾವ್ಯ ಸ್ಪರ್ಶ ನೀಡುವುದಕ್ಕಿಂತ ಕಥನ ಕೌಶಲದ ಆಟಗಳು ಅವರಿಗೆ ಇಷ್ಟ".[1]

ಇಲ್ಲಿಯ ಕಥೆಗಳು ನೂರಕ್ಕೆ ನೂರರಷ್ಟು ನಮ್ಮ ಕಾಲದ ಕಥೆಗಳು. ಕಳೆದ ಎರಡು ಮೂರು ದಶಕಗಳಲ್ಲಿ ಕನ್ನಡ ಸಮುದಾಯವು ಅನುಭವಿಸಿದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಇಲ್ಲಿ ನೂರಾರು ಮಾನುಷಿಕ ವಾಸ್ತವತೆಗಳ ಮೂಲಕ ಮೈದಳೆದಿವೆ. ಕೊನೆಗೂ ಕಲೆಯಲ್ಲಿ ನಿಜವೆನಿಸುವುದು ಈ ರೀತಿ ಮಂಡಿಸಿದ ವಾಸ್ತವ ಮಾತ್ರ. ಆದರೆ ಮುಷ್ಟಿಗ್ರಾಹ್ಯವಾದ ಈ ಘಟನೆಗಳ ಫಲವಾಗಿ ಮನುಷ್ಯನ ಸ್ವಭಾವದ ನಿಜಗಳಲ್ಲಿಯೇ ಏನಾದರೂ ಬದಲಾವಣೆ ಆಗಿದೆಯೇ? ಆಗಿದ್ದರೆ ಅದರ ನಿರ್ದಿಷ್ಟ ಸ್ವರೂಪ ಯಾವುದು? ಅದರಲ್ಲಿ ನವವಸಾಹತುಶಾಹಿಯ ಆಕ್ರಮಣಶೀಲ ನೆಲೆಗಳ ಪಾತ್ರವೇನು? ಮುಂತಾದ ಮಹತ್ವದ ಪ್ರಶ್ನೆಗಳನ್ನು ಈ ಕಥೆಗಾರರು ಕೇಳಿಕೊಂಡಿದ್ದಾರೆ. ಇತರ ಪ್ರಮುಖ ಲೇಖಕರಂತೆ ಸೃಜನಶೀಲ ಏಕಾಂತದಲ್ಲಿ ಉತ್ತರಗಳಿಗಾಗಿ ತಡಕಾಡಿದ್ದರೆ.

ಕೆ.ಸತ್ಯನಾರಾಯಣರದ್ದು ಪ್ರಕೃತಿ ಸದೃಶ್ಯ ತಂತ್ರ, ಕಥೆ ಬರೆಯುವ ಸಂದರ್ಭಗಳಲ್ಲಿ ಅವರು ನೋಡಿದ್ದು ಕೇಳಿದ್ದು, ಹೊಳೆದದ್ದು ಎಲ್ಲವೂ ಸಹ ಕಥೆಯಲ್ಲಿ ಬರೆಯುತ್ತಾರೆ. ಕೆಲವೊಮ್ಮೆ ಸಂಗತಿಗಳು ಪೂರಕವಲ್ಲದೇ ಬಂದಂತೆ ಎನಿಸಿದರೂ, ಯಾಕೆ ಪೂರಕವಲ್ಲ? ಎಂದು ಅನಿಸುತ್ತವೆ. ಅದ್ಭುತ ಸೃಜನಶೀಲತೆ, ಸಾಹಿತ್ಯದ ವ್ಯಸನ ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ಜಾತಿ ಮತ ಪಂಥಗಳ ಜನರೊಡನೆ ಬದುಕಿ ಬಾಳದುದರಿಂದ ವ್ಯಾಪಕ ಅನುಭವದ ದರ್ಶನವಾಗುತ್ತದೆ. ಕಥೆಯ ನಿರೂಪಣೆಯಲ್ಲಿ ವೈವಿದ್ಯತೆ, ಪ್ರಯೋಗಶೀಲತೆ ಇದೆ, ಆದರೆ ಭಾಷೆಯಲ್ಲಿ ವೈವಿದ್ಯತೆ ಇಲ್ಲ. ವ್ಯಕ್ತಿ, ಜನ ಸಮಾಜ ಯಾವುದನ್ನು ಮರೆಮಾಚಲು ಬಯಸುತ್ತಾರೋ ನೇರವಾಗಿ ಅಲ್ಲಿಗೆ ಕೈಹಾಕಿ ಬಿಚ್ಚಿಸುವ ಲೇಖಕರು ಹಲವು ಕಥೆಗಳಲ್ಲಿ

ಅಡಿ ಟಿಪ್ಪಣಿ:
ಅನುಭೂತಿ, ಸಪ್ನಬುಕ್ ಹೌಸ್, ಸಾಹಿತ್ಯ ಕುರಿತ ವಿಮರ್ಶಾ ಬರಹಗಳು, ಸಮಾಜದ ಸಮಗ್ರ ಚಿತ್ರ, ಪುಟ ಸಂಖ್ಯೆ – 235–236, 2016

ಸೂಚ್ಯವಾಗಿ ಹೇಳಬೇಕೆಂಬ ದೃಷ್ಟಿಯಿಂದ ಕನಸುಗಳಿಗೆ ದೊರೆ ಹೋಗುತ್ತಾರೆ. ಅದು ಸುಪ್ತ ಮನಸ್ಸನ್ನು ಅನಾವರಣಗೊಳಿಸುವ ಕ್ರಮ.

ಮಾಸ್ತಿಪರಂಪರೆಯನ್ನು ಇನ್ನಷ್ಟು ಸಶಕ್ತಗೊಳಿಸಿ, ನವೀಕರಿಸಿ ಮುಂದುವರೆಸುತ್ತಿರುವ ಕೆ. ಸತ್ಯನಾರಾಯಣರವರು ಕನ್ನಡ ಕಥಾಪರಂಪರೆಯಲ್ಲಿ ತಮ್ಮದೇ ಆದ ಛಾಪು ನಿರ್ಮಿಸುತ್ತಿದ್ದಾರೆ.

ಸತ್ಯನಾರಾಯಣರ ಕಥೆಗಾರಿಕೆಯನ್ನು ಮಾಸ್ತಿಯವರಿಗೆ ಹೋಲಿಸಲು ಮುಖ್ಯ ಕಾರಣವೆಂದರೆ ಸತ್ಯನಾರಾಯಣರ ಕಥೆಗಳಲ್ಲಿ ಒಬ್ಬ ನಿರೂಪಕ ತನ್ನ ಪರಿಚಯದ ಮೂಲಕ ಪರಿಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳನ್ನು ನಿರೂಪಿಸುತ್ತಾ ಹೋಗುತ್ತಾರೆ. ಕೆಲವು ಕಥೆಗಳಲ್ಲಿ ನಿರೂಪಕ ಒಬ್ಬ ಮುಖ್ಯ ಪಾತ್ರವಾಗಿಯೂ ಕತೆಯಲ್ಲಿ ಭಾಗವಹಿಸುತ್ತಾನೆ. ಇನ್ನು ಕೆಲವು ಕಥೆಗಳಲ್ಲಿ ನಿರೂಪಕ ಪಾತ್ರವಾಗಿ ಬರುವುದಿಲ್ಲವಾದರೂ ಕತೆಯ ಬೆಳವಣಿಗೆಯನ್ನು ಗಮನಿಸಿ ನಮಗೆ ಹೇಳುವುದಕ್ಕಾಗಿ ಹಲವಾರು ಸನ್ನಿವೇಶಗಳಲ್ಲಿ ಪ್ರವೇಶ ಪಡೆಯುತ್ತಾರೆ.

ಮಾಸ್ತಿ ಪ್ರಭಾವವನ್ನು ಸತ್ಯನಾರಾಯಣರು "ಪ್ರಸಿದ್ಧನಾಮಾ" ಕಥಾ ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. 1991 ರ ಸುಮಾರಿಗೆ ತಾವು, ಚಳ್ಳಕೆರೆಯಲ್ಲಿ ಮಾಸ್ತಿ ಕುರಿತ ವಿಚಾರಸಂಕಿರಣವೊಂದರಲ್ಲಿ ಕಥಾಸಾಹಿತ್ಯದ ಬಗ್ಗೆ ಒಂದು ಪ್ರಬಂಧ ಮಂಡಿಸುವ ತಯಾರಿಯಲ್ಲಿ ಮಾಸ್ತಿಯವರ ಬಹುಪಾಲು ಕತೆಗಳನ್ನು "ಒಟ್ಟಿಗೇ ಒಂದು ರೀತಿಯ ಜ್ವರ ಮತ್ತು ಕಂಪನದ ನಡುವೆ" ಓದಿದ್ದಾಗ ಈ "ತೀವ್ರ ಅನುರಕ್ತಿಯಿಂದ ಮತ್ತು ತಲ್ಲಣಗಳಿಂದ" ಕೂಡಿದ ಓದು ತಮಗೆ ಗೊತ್ತಿಲ್ಲದಂತೆ ತಾವು ಮಾಸ್ತಿಯವರ ಮನೋಧರ್ಮ ತಾವು ಮಾಸ್ತಿಯವರ ಮನೋಧರ್ಮಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದ್ದನ್ನೂ ಸತ್ಯನಾರಾಯಣರನ್ನು ದೀರ್ಘಕಾಲ ಹಿಡಿದಿಡುವುದು ಸಾಧ್ಯವಿಲ್ಲ ಎನ್ನುವುದಕ್ಕೆ ಅದೇ ಸುಮಾರಿಗೆ ಅವರು ಬರೆದ 'ಸನ್ನಿಧಾನ' ಕಾದಂಬರಿಯಲ್ಲಿ ಕುರುಹುಗಳು ಕಾಣಸಿಗುತ್ತವೆ. ಸತ್ಯನಾರಾಯಣರು ಮೇಲೆ ಹೇಳಿದ ಜ್ವರದ ಮದ್ದಿನ ಕಹಿಯನ್ನು ತಮ್ಮ ನಾಲಿಗೆ ಮರೆವ ಹೊತ್ತಿಗೇ ಈ ಕಾದಂಬರಿಯನ್ನು ಅವರ 'ನಕ್ಸಲ್‌ವರಸೆ' ಮತ್ತು "ಪ್ರಸಿದ್ಧನಾಮಾ" ಕಥಾಸಂಕಲಗಳೊಂದಿಗೆ ಮತ್ತೆ ಓದಿದಾಗ ಅವರನ್ನು ಮಾಸ್ತಿಯವರ ಉತ್ತಾರಾಧಿಕಾರಿ ಎಂದು ಹೇಳಹೊರಟರೆ ಸತ್ಯನಾರಾಯಣರ ಕಥಾಸಾಧ್ಯತೆಗಳನ್ನು ಮಿತಿಗೊಳಿಸಿದ ಹಾಗೆ ಮತ್ತು ಓದುಗರನ್ನು ದಿಕ್ಕುತಪ್ಪಿಸುವ ಹಾಗೆ ಎಂದೂ ಅನಿಸತೊಡಗಿತು. ಹೊಸ ತಲೆಮಾರಿನ ಕತೆಗಾರರೊಬ್ಬರ ಬಗ್ಗೆ ಬರೆಯುತ್ತ

ಹಿರಿಯ ವಿಮರ್ಶಕ ರಹಮತ ತರಿಕೆರೆಯವರು ಮಾಸ್ತಿಯವರ ಕತೆಗಳ ಬಗ್ಗೆ ಹೇಳಿದ ಗಂಭೀರತಮ ಮಾತುಗಳ ಹಿನ್ನೆಲೆಯಲ್ಲಿ ಈ ವಿವರವನ್ನು ಗಮನಿಸಬೇಕು.

'ಉತ್ತರಾಧಿಕಾರಿ' ಎಂಬ ಪದವನ್ನು ನಾವು ಕಾನೂನಿನಲ್ಲಿ ಬಳಸುವುದು "Legal Heir" ಎಂಬರ್ಥದಲ್ಲಿ. ಮೃತರ ಆಸ್ತಿಪಾಸ್ತಿಗಳ ಮೇಲೆ ಹಕ್ಕು ಸಾಧಿಸಬಯಸುವವರಂತೂ ಈ ಪದವನ್ನು ನಿರ್ಭಿಡೆಯಿಂದ ಮತ್ತು ಹಲವು ಅರ್ಥ ಸಾಧ್ಯತೆಗಳಿಂದ ಬಳಸಲು ಯತ್ನಿಸುತ್ತಾರೆ. ಸತ್ಯನಾರಾಯಣರರಾದರೋ, ಮಾಸ್ತಿ ಕಥಾಮಾರ್ಗದ ಮೇಲೆ ಹಕ್ಕು ಸಾಧಿಸುವ ಪ್ರಯತ್ನ ಮಾಡಿದ್ದಕ್ಕಿಂತ, ಕತೆಹೇಳುವ ಎಲ್ಲ ಸಾಧ್ಯತೆಗಳನ್ನು ತಮ್ಮ ಪ್ರಯೋಗಗಳಿಗೆ ದಕ್ಕಿಸಿಕೊಳ್ಳಲು ಪ್ರಯತ್ನಿಸಿದ್ದೇ ನನಗೆ ಹೆಚ್ಚು ಕುತೂಹಲಕಾರಿಯಾಗಿ ಕಾಣಿಸುತ್ತದೆ. ಅವರ ಕಥೆಗಳಲ್ಲಿ "ತಮಗೆ ದೊರಕಿದ ಇಲ್ಲವೇ ತಮ್ಮ ನಿರಂತರ ಕಲೆಯಾಗಿ ಪರಿವರ್ತಿಸುವ ಸೃಜನಶೀಲತೆಯ ಸ್ವಂತಿಕೆ"(ಟಿ.ಎಸ್. ರಘುನಾಥ ಪ್ರಸಿದ್ಧನಾಮಾ ಮುನ್ನುಡಿ)ಯನ್ನು ನಾವು ಗುರುತಿಸದೇ ಉಳಿದಲ್ಲಿ ಅದು ಸತ್ಯನಾರಾಯಣರ ಕತೆಗಾರಿಕೆ ವಿಮರ್ಶಕರೆ ಸಲ್ಲಿಸುವ ಅತಿದೊಡ್ಡ ಅಪಚಾರ ಎಂದು ನನಗನ್ನಿಸುತ್ತದೆ.

ಸತ್ಯನಾರಾಯಣರ 'ಪ್ರಸಿದ್ಧನಾಮಾ' ಪ್ರಕಟವಾದದ್ದು 2011ರಲ್ಲಿ ಕುತೂಹಲದ ಸಂಗತಿಯೆಂದರೆ ಮೊದಲ ಸಂಕಲನದ ಮೂರು ಸಣ್ಣಕತೆಗಳು ಸಂಕಲನದಲ್ಲಿ ಮತ್ತೆ ಬರುತ್ತವೆ. ಮುದುಕಿ ಹೇಳಿದ ಸರ್. ಎಂ.ವಿ. ಕತೆ, ನಜೀರ್ ಸಾಬು ಚರಿತ್ರೆಯು ಮತ್ತು ಮಾರ್ಕ್‌ಟುಲಿ ಹೇಳಬೇಕಾಗಿ ಬಂದ ಕತೆ. ಸಂಕಲನದ ಉಳಿದ ಕತೆಗಳೂ ಇಲ್ಲಿ ಹೇಳಿದ್ದನ್ನು ಮುಂದುವರಿಸಿಕೊಂಡು ಹೋಗುವ ಚಮತ್ಕಾರವೊಂದನ್ನು ರೂಢಿಸಿಕೊಳ್ಳಲು ಯತ್ನಿಸುವುದು ಕಾಣಿಸುತ್ತದೆ. "ನಮ್ಮ ಕಾಲದ ಬದುಕಿನ ಮೇಲೆ ಪರಿಣಾಮ ಬೀರಿದ ಮತ್ತು ನಮ್ಮ ಕಾಲದಿಂದಲೂ ಪ್ರಭಾವಿತರಾದ ಸಾರ್ವಜನಿಕವಾಗಿ ಲೋಕಪ್ರಸಿದ್ಧರಾದರೂ, ನಮ್ಮೊಳಗೆ ಕೂಡಾ ಸೇರಿಕೊಂಡಿರುವವರು ಮತ್ತು ನಾವು ಕೂಡ ಅವರೆಲ್ಲರ ವ್ಯಕ್ತಿತ್ವದ ಒಂದು ಭಾಗ. ಹಾಗಾಗಿ ಇವರ ಬಗ್ಗೆ ಬರೆಯುವುದೆಂದರೆ ನಮ್ಮ ಬಗ್ಗೆ ಬರೆದುಕೊಂಡಂತೆಯೇ ಸರಿ" ಎಂದೂ ಬರೆದ ಸತ್ಯನಾರಾಯಣರು ತಮ್ಮ ಪ್ರಯೋಗಗಳ ಬಗ್ಗೆ ಇರಿಸಿಕೊಂಡ ಮಹತ್ವಾಕಾಂಕ್ಷೆಯನ್ನು ಇಲ್ಲಿ ವಿಶದಪಡಿಸಿದೆ. "ಇಲ್ಲಿ ಕತೆಗಳನ್ನು ಓದಿದ ಮೇಲೆ ನಮ್ಮ ಕಾಲದ ಬದುಕು ಎದುರಿಸುತ್ತಿರುವ ಸವಾಲುಗಳ ಭಿನ್ನ ಭಿನ್ನ ಆಯಾಮಗಳ ಅರಿವು ಓದುಗರಲ್ಲಿ ಕಿಂಚಿತ್ತಾದರೂ ಮೂಡಬಹುದೆಂಬ ಆಸೆ, ನಂಬಿಕೆ ನನಗಿದೆ".

ಈ ಮಾತುಗಳನ್ನು ಮತ್ತೆ ಓದಿದಾಗ ಸತ್ಯನಾರಾಯಣರು ತಮ್ಮ ಕಥಾ ಸಾಧ್ಯತೆಗಳನ್ನು ಕುರಿತೂ ಕತೆ ಹೇಳುವುದಕ್ಕಿಂತ ಹೆಚ್ಚಿನದನ್ನು ಅಪೇಕ್ಷಿಸುವುದು ಮನದಟ್ಟಾಗುತ್ತದೆ. ಅವರ ಪ್ರಯೋಗಪರತೆ, ತಮ್ಮ ಕತೆ ನಿಂತ ನೀರಾಗುವುದನ್ನು ಒಪ್ಪಿಕೊಳ್ಳದಿರುವುದನ್ನು ಕುತೂಹಲಕಾರಿಯಾಗಿ ಹೇಳುತ್ತದೆ.

ಅಡಿ ಟಿಪ್ಪಣಿ:
ಅನುಭೂತಿ, ಸಪ್ನಬುಕ್ ಹೌಸ್, ಅಕ್ಷತ ಸಂಗತಿಗಳ ಕಥನ, ಪುಟಸಂಖ್ಯೆ – 68–69, 2016

ಚೆನ್ನಾದ ಕಥೆಗಳು

ಅನುಭವ ಎಂದರೇನು? ಅದನ್ನು ದಕ್ಕಿಸಿಕೊಳ್ಳುವ ಬಗೆ ಹೇಗೆ? ಬೇರೊಬ್ಬರ ಜೀವನಾನುಭವ, ನೋವು, ಸಂಕಟ, ಮಾನಸಿಕ ತುಮುಲ ಇವೆಲ್ಲವನ್ನು ನಮ್ಮ ಒಳ ಮನಸ್ಸಿಗೆ ತಂದುಕೊಂಡು, ಅದನ್ನು ಅಥವಾ ಅದರ ಛಾಯೆಯನ್ನು ಸಾಹಿತ್ಯಕ ಚೌಕಟ್ಟಿನಲ್ಲಿ ಹಿಡಿದಿಡುವ ಕಥನ ಕಲೆಯ ಕಲಾತ್ಮಕತೆ ಈ ಕಥೆಗಳಲ್ಲಿವೆ. ಸಾವಿರಗಟ್ಟಲೆ ಜನರನ್ನೂ ಕಂಡೂ ಅವರೆಲ್ಲರ ನೆನಪೂ ನಮ್ಮ ಜ್ಞಾಪಕದಲ್ಲಿದ್ದರೆ ಅದೊಂದು ಪವಾಡವೆ. ಮುಟ್ಟಿಹೋಗುವ ಸಂಬಂಧಗಳೆಷ್ಟೋ? ಒಂದು ಘಟನೆ, ಒಬ್ಬವ್ಯಕ್ತಿ, ಒಂದು ಸಂದರ್ಭ ಹೇಗೋ ಏನೋ ನಮ್ಮನ್ನು ಆಗಾಗ ಕಾಡುವುದುಂಟು....... ಇರಲಿ

ನಿಮ್ಮ ಕಥೆಗಳು ಒಂದು ವಿಭಿನ್ನ ನೆಲೆಯಲ್ಲಿ ಮೈಗೂಡಿದ್ದು ಒಂದು 'ವರ್ಗದ' 'ಸಮುದಾಯದ' ಸಂವೇದನೆ, ಸಂಶಯ, ಕೀಳರಿಮೆ, ಅಪ್ರಾಕೃತ ನಡಾವಳಿ, ಉದಾಸೀನ ಭಾವ, ಮೇಲುನೋಟದ ತೋರಿಕೆ- ಇವೆಲ್ಲವೂ ಕಥೆಗಳಲ್ಲಿ ಹಿಡಿಯಲ್ಪಟ್ಟಿವೆ. ಕಥಾ ಪ್ರಪಂಚದಲ್ಲಿ ನೆಲೆಯೂರಿರುವ ದಾರಿಯನ್ನು ತುಳಿಯುತ್ತಲೇ ಅದರಾಚೆಗೆ ದಾಟಿ ಬರೆಯುವ ನಿಮ್ಮ ಒಂದೊಂದು ಕಥೆಯ ವೈವಿಧ್ಯಪೂರ್ಣ 'ಸಮಾನತೆ' ಗೆ ಒಂದು ಹೊಸ ವ್ಯಾಖ್ಯೆ 'ನವ್ಯ ದೃಷ್ಟಿಯಿದೆ'.............

ಕಥೆಯ ಒಳಪದರಗಳನ್ನು ಬಿಚ್ಚುತ್ತ (ಟುಲಿ ಹೇಳಿದ ಕಥೆ) ಬಾಬೂರಾಯನ ಪತ್ರಮುಖೇನ ಒಳವ್ಯಾಪಾರಗಳ ಚಿತ್ರಣ 'ಸಬ್ ಸಬಾಲ್ಟ್ರನ'ದಲ್ಲಿ ಬರುವ ನಿಜಘಟನೆಗಳ ಮೂಲಕ 'ರಾಜಕೀಯಕ್ಕೆ' ಕೈ ಹಿಡಿದ ಕನ್ನಡಿ. ಮೊದಲ ಆ ದಲಿತ ಕಥೆ ಕರುಣಾಮಯಿ, ಮನೋಪಲ್ಲಟಗಳ ಜೊತೆ ಹಡೆಯುವ ಮುನ್ನ ಹೆಣ್ಣಿನ (ಹಿಂದೊಮ್ಮೆ ಓದಿದ ನೆನಪು) ದಲಿತನೊಬ್ಬನ ನೋವು – ಒಳತೋಟಿಗಳು, ಅವನ್ನು ಅನಾಮಧೇಯ ಅಜ್ಞಾತವಾಗಿ ಇರಿಸುವ ರೀತಿ ನಗರೀಕರಣದ ಜೊತೆ ಶೋಷಣೆ, 'ಕೋನ' ದಲ್ಲಿ ಬರುವ ರವೀಂದ್ರಕುಮಾರ್‌ನ 'ದಲಿತತೆಯ' ವೈಚಿತ್ರ್ಯಗಳು, ಓಬಳಯ್ಯನ ಸುತ್ತ–ಮುತ್ತ ಎಲ್ಲವೂ ಚೆನ್ನಾದ ಕಥೆಗಳು.

ಅಡಿ ಟಿಪ್ಪಣಿ:
ಅನುಭೂತಿ, ಸಪ್ನಬುಕ್ ಹೌಸ್, ಹೆಚ್.ಜಿ. ಸೋಮಶೇಖರ್, ಪುಟ ಸಂಖ್ಯೆ– 247–248 2016

ಸೂಕ್ಷ್ಮ ಕಂಪನದ ಕಥೆ

ಎಲ್ಲ ದೃಷ್ಟಿಯಿಂದಲೂ ಅಚ್ಚುಕಟ್ಟಾದ ಕತೆ, 'ನಾವೇನು ಬೇಡುವುದು ಇವರ ಬಳಿ ಬಂದು' ಈ ಕಥೆಯ ಅಚ್ಚುಕಟ್ಟುತನವೇ ಕತೆಯ ಮಿತಿಯೂ ಆಗಿಬಿಡಬಹುದು. ಆದರೆ ಕತೆಗಾರರ ಪ್ರತಿಭೆ ಈ ಕುಶಲತೆಯನ್ನು ಮೀರಿ ಬದುಕಿನ ಆಳಕ್ಕೆ ಪ್ರವೇಶಿಸುವುದಿರಂದಾಗಿ ಕತೆ ಮುಖ್ಯವಾಗುತ್ತದೆ. ಕತೆಗಾರರ ನಿರೂಪಣಾ ಕ್ರಮ ಕನ್ನಡ ಕಥಾ ಪರಂಪರೆಯಿಂದ ಪಡೆದುಕೊಂಡಿದ್ದು, ಅಭಿಜಾತವೆನ್ನಿಸುವಂಥದ್ದು, ಆ ಮೂಲಕ ಕತೆಗಾರರು ನಿರ್ಮಿಸುವ ಜಗತ್ತು ಸಮಕಾಲೀನವಾಗಿದ್ದು, ನಾವೆಲ್ಲರೂ ಅನುಭವಿಸುತ್ತಿರುವ ವಿಷಾದಕರ ಸತ್ಯವೊಂದನ್ನು ಕತೆ ತನ್ನ ಆಕೃತಿಯಲ್ಲಿ ಅನುಭವಕ್ಕೆ ತರಲು ಪ್ರಯತ್ನಿಸುತ್ತದೆ. ನಾವು ಪ್ರೀತಿಸುವ ಎಳೆಯ ಹೃದಯಗಳೂ ಕ್ರಮೇಣ ತಲುಪುವ ಸ್ಥಿತಿ ಯಾವುದು? ರಮ್ಯ ಕಲ್ಪನೆಗೂ ವಾಸ್ತವಕ್ಕೂ ನಡುವೆ ಪ್ರವೇಶಿಸುವ ಶಕ್ತಿಗಳು ಯಾವುವು? ಇಂಥ ಅನೇಕ ಪ್ರಶ್ನೆಗಳನ್ನು ಕತೆ ನಮ್ಮ ಮುಂದಿಡುತ್ತದೆ. ನಮ್ಮನ್ನು ತಲ್ಲಣಗೊಳಿಸು ಶಕ್ತಿ ಕತೆಗಿಲ್ಲದಿದ್ದರೂ ಸೂಕ್ಷ್ಮ ಕಂಪನದ ಮೂಲಕ ಸೆಳೆದು ನಿಲ್ಲಿಸುತ್ತದೆ.

ಅಡಿ ಟಿಪ್ಪಣಿ:
ಅನುಭೂತಿ, ಕನ್ನಡಪ್ರಭ ಪತ್ರಿಕೆ, ಸಂಕ್ರಾಂತಿ ಕಥಾ ಸ್ಪರ್ಧೆಯ ತೀರ್ಪುಗಾರರ ಮಾತು

ಕೆ. ಸತ್ಯನಾರಾಯಣರವರ ಕಥೆಯಲ್ಲಿ ಮನೋವೈಜ್ಞಾನಿಕತೆ

ಕೆ. ಸತ್ಯನಾರಾಯಣರವರ ಕಥೆಯಲ್ಲಿ ಕಂಡು ಬರುವ ಪ್ರಮುಖ ಅಂಶವೆಂದರೆ ಮನೋವೈಜ್ಞಾನಿಕತೆ ಪ್ರಮುಖವಾಗಿ ಕಂಡುಬರುತ್ತದೆ. ಡಾಕ್ಟರ್‌ನ ಮಗ ಹುಚ್ಚ ಕಥೆಯಲ್ಲಿ ವ್ಯಕ್ತವಾಗುವ ಅಂಶಗಳೆಂದರೆ ಸಮಾಜದಲ್ಲಿ ಡಾಕ್ಟರ್ ಆಗಿ ಗುಣಪಡಿಸುವ ಡಾಕ್ಟರ್‌ನ ಮಗನೆ ಹುಚ್ಚನಾದ ಪರಿಸ್ಥಿತಿಯಲ್ಲಿ ಅವರು ಪಡವ ಕಷ್ಟಗಳು ಹಾಗೂ ತಂದೆ – ತಾಯಿಗಳ ಪರಿಸ್ಥಿತಿ ಹಾಗೂ ಈ ಪರಿಸ್ಥಿತಿಯಿಂದ ಅವರು ಪರಾಗುವ ಸನ್ನಿವೇಶ ಇದ್ದರು ಸಹ ಒಪ್ಪುವ ಮನಸ್ಸು ಕಂಡು ಬರುತ್ತದೆ.

ಡಾಕ್ಟರ ಮಗ ಹುಚ್ಚ ಕಥೆಯಲ್ಲಿ ಹುಚ್ಚನಾದ ರಾಮಚಂದ್ರನನ್ನು ಸಮಾಜ ನೋಡುವ ರೀತಿ ವಿಭಿನ್ನವಾಗಿ ಚಿತ್ರಿತವಾಗಿದೆ. ತಮ್ಮ ಮಕ್ಕಳು ಉತ್ತಮವಾಗಿದ್ದರೆ ಮಾತ್ರ ತಂದೆ–ತಾಯಿಗಳು ಸ್ವೀಕರಿಸುವುದು ಎಂಬ ಮಾತು ಸಹ ನಿಜವಾದ ರೀತಿ ಕಂಡು ಬರುತ್ತದೆ.

ಕೊನೆಗೆ ಮಗ ಸತ್ತನಂತರ ಸುದ್ಧಿ ತಿಳಿದು ಕೊನೆಗೆ ಮಗ ಸಿಕ್ಕ ಎಂಬ ಸುದ್ಧಿ ಮೂಲಕ ಕಥೆಯ ಅಂತ್ಯ ಕಂಡುಬರುತ್ತದೆ. ಡಾ॥ ಸೋಮಶೇಖರ ತನ್ನ ಮಗ ರಾಮಚಂದ್ರನನ್ನು ತಂದೆ–ತಾಯಿಗಳು ನೋಡುವ ರೀತಿ ಹಾಗೂ ಸಮಾಜ ಹುಚ್ಚನ್ನಾಗಿ ನೋಡುವ ರೀತಿ ಭಿನ್ನವಾಗಿ ವ್ಯಕ್ತವಾಗಿದೆ. ಡಾ॥ ಸೋಮಶೇಖರ ತನ್ನ ಮಗನನ್ನು ಮೆಮೂನ್ ವಿಲ್ಲಾ ಎಂಬ ಬಂಗಲೆಯಲ್ಲಿರುವ ಹುಚ್ಚ ಮಕ್ಕಳಲ್ಲಿ ತಮ್ಮ ಮಗನನ್ನು ಕಾಣುವುದು ಸಹ ವಿಶಿಷ್ಟವಾಗಿದೆ.

ಈ ಸನ್ನಿವೇಶ ಮೊದಲ ಆ ದಲಿತ ಕಥೆ ಎಂಬ ಕಥೆಯಲ್ಲೂ ಸಹ ಕಂಡುಬರುತ್ತದೆ. ಕಥೆಯ ನಾಯಕಿಯ ಮಗ ಕೂಡ ಮಾನಸಿಕ ಅಸ್ವಸ್ಥನಾಗಿದ್ದರಿಂದ. ಅದನ್ನು ಅವರು ಯಾರ ಬಳಿಯು ಸಹ ಹೇಳಲ್ಲೂ ಸಾಧ್ಯವಿಲ್ಲದ ಸನ್ನಿವೇಶ ನಿರ್ಮಾಣವಾಗುತ್ತದೆ.

ಕಥಾನಾಯಕಿ ಉನ್ನತ್ತ ಅಧಿಕಾರಿಯಾದರೂ ಸಹ ಅಂತರಾಳದ ನೋವಿನ ವಿಷಯ ತನ್ನಲ್ಲಿಯೇ ಉಳಿಸಿಕೊಂಡು ಬದುಕುತ್ತಿರುವುದು ಹಾಗೂ ಈ ನೋವು ನಮಗೆ ಮಾತ್ರ ಸೀಮಿತ ಎಂತ ತಿಳಿದು ಬಂದಿರುವುದು ಕಂಡು ಬರುತ್ತದೆ.

ಕೊನೆಗೆ ಕಥಾನಾಯಕಿ 3ನೇ ಮಗುವನ್ನು ಪಡೆಯುವುದರ ಮೂಲಕ ಮೊದಲನೇ ಮಗುವಿನ ನೋವಿನ ವಿಚಾರವನ್ನು ಮರೆಯುವ ಪ್ರಯತ್ನ ಮಾಡುತ್ತಾರೆ. ಆದರೆ ಮೊದಲನೆ ಮಗನ ವರ್ತನೆಗಳು ಕಣ್ಣಾರೆ ಕಂಡು ಲೇಖಕರು ಸಹ ಅವನ್ನು ಕಂಡು ಕಾಣದ ಪರಿಸ್ಥಿತಿ ಬರುವುದನ್ನು ನಾವು ಕಾಣಬಹುದು.

ಪ್ರಮುಖವಾಗಿ ಶ್ರೀಮಂತರಾದವರು ಸಮಾಜದಲ್ಲಿ ಪ್ರತಿಷ್ಠೆಯಿಂದ ಬದುಕುತ್ತಿರುವ ಮನೆಗಳಲ್ಲೂ ಸಮಸ್ಯೆಗಳು ಇರುವುದು ಕಂಡು ಬರುತ್ತದೆ.

ಉದಾ: ಮೊದಲ ಆ ದಲಿತ ಕಥೆಯ ಮಾಧವಿ (ಮಗ) ಡಾಕ್ಟರನ ಮಗ ಹುಚ್ಚ.

ಕಥೆಗಳ ಮನೋವೈಜ್ಞಾನಿಕ ಹಿನ್ನೆಲೆಗೆ ಸೇರಿಸಬಹುದು.

ಡಾಕ್ಟರ ಮಗ ಹುಚ್ಚ ಎಂಬ ಕಥೆಯಲ್ಲಿ ಹುಚ್ಚನಾದ ಮಗನೊಂದಿಗೆ ತಂದೆ-ತಾಯಗಳ ಬದುಕು ಸಮಾಜ ಹುಚ್ಚನನ್ನು ಕಾಣುವ ಬಗೆ ಭಿನ್ನವಾಗದೆ ಅನಿವಾರ್ಯವಾದರೆ ಅದು ಸಮಾಜಕ್ಕೆ ಅಸಹ್ಯವಾಗಿ ಕಂಡು ಬರುತ್ತದೆ.

ಈ ಸಮಸ್ಯೆಗಳನ್ನು ತಂದೆ-ತಾಯಿಗಳು ನಮಗೇಕೆ ಈ ರೀತಿ ಮಗುವನ್ನು ಕೊಟ್ಟ ದೇವರು ಎಂದು ದೂಷಿಸುವುದು ಸೋಮಶೇಖರ ಹೆಂಡತಿ ಲಲಿತಾಸಹಸ್ರನಾಮದ ಪುಸ್ತಕವನ್ನೆಲ್ಲ ಹರಿದು-ಹಾರುವುದು ಸಹ ಸಮಾಜದಲ್ಲಿ ಒಂದು ಊನಮಗುವನ್ನು ಕಾಣುವ ರೀತಿಯೇ ಭಿನ್ನವಾಗಿದೆ ಹಾಗೂ ಪ್ರಜ್ಞೆಸ್ಥಿತಿಯಲ್ಲಿರುವ ಮನುಷ್ಯರಲ್ಲಿ ಇಂದು ನಾನಾ ರೀತಿಯ. ಬದುಕನ್ನು ಕಾಣುತ್ತೇವೆ. ಆದರೆ ಯಾವುದೇ ಪ್ರಜ್ಞೆ ಇಲ್ಲದ ಊನ ಮಗುವನ್ನು ಕಾಣುವ ಸಮಾಜ ಸ್ಥಿತಿ ಸಹ ಕಥೆಯಲ್ಲಿ ಘೋರವಾಗಿದೆ.

ತಂದೆ - ತಾಯಿ - ತಂಗಿ ಭಿನ್ನವಾಗಿ ಒಂದು ರೀತಿಯ ಸ್ಥಿತಿಯಲ್ಲಿದ್ದರೆ. ಊನ ಮಗುವಾದ ರಾಮಚಂದ್ರನಿಂದ ತಂದೆ-ತಾಯಿಗಳ ಸ್ಥಿತಿ ಭಿನ್ನವಾಗಿದೆ. ಒಂದು ಕಡೆ ಸಮಾಜ, ಒಂದು ಕಡೆ ಸಂಸಾರ, ಈ ರೀತಿ ಅಪಮಾನದ ಸರಮಾಲೆಗಳ ಮೂಲಕ ಡಾಕ್ಟರ ತನ್ನ ಕಥೆಯನು ಹೇಳಿಕೊಳ್ಳುತ್ತಾರೆ.

ಕಥೆಯ ಅಂತ್ಯಕೂಡ ಹುಚ್ಚುಮಗು ಸಾವಿನ ನಂತರ ಗಾಂಧಿವಾದಿ ಕಕ್ಕಸ ಎಂಬ ಬಳಿ ಇರುವ ಮಕ್ಕಳಿಗೆ ಲಾಲಾಟ ನೀಡುವ ತಮ್ಮ ಮಗ ರಾಮಚಂದ್ರನ ನೋಡುವಿಕೆ ಕಂಡು ಬರುತ್ತದೆ.

ಮೊದಲ ಆ ದಲಿತ ಕಥೆ ಹಾಗೂ ಡಾಕ್ಟರ ಮಗ ಹುಚ್ಚ ಕಥೆಯಲ್ಲಿ ಕಂಡು ಬರುವ ಪ್ರಮುಖ ಅಂಶಗಳೆಂದೆ, ಮೊದಲ ಆ ದಲಿತ ಕಥೆಯ ನಾಯಕಿ ಮಾಧವಿ ಸಹ ತನ್ನ ಅಂತರಾಳದ ನೋವನ್ನು ಲೇಖಕರ ಬಳಿ ಹೇಳುತ್ತಾಳೆ. ಆದರೆ ಡಾಕ್ಟರ ಮಗ ಹುಚ್ಚ ಕಥೆಯಲ್ಲಿ ಡಾಕ್ಟರ ಲೇಖಕರ ಬಳಿ ತನ್ನ ಕಥೆ ಹೇಳುತ್ತಾರೆ.

3 ಕಥೆಯಲ್ಲಿ ಕಂಡುಬರುವ ಸ್ತ್ರೀಪಾತ್ರಗಳ ಸ್ಥಿತಿ ಚಿಂತಾಜನಕವಾಗಿ ಅಗಾಧವಾದ ನೋವಿನ ಸ್ಥಿತಿಯಲ್ಲಿ ಅವರು ಪಡುವ ವ್ಯಥೆಯಲ್ಲಿ ಸಹ ಕಥೆಯಲ್ಲಿ ಅಡಕವಾಗಿವೆ.

ಮೊದಲ ಆ ದಲಿತ ಕಥೆಯಲ್ಲಿ ಮಾಧವಿ, ಕೆಳ ವರ್ಗದ ಸಾಮನ್ಯ ಹೆಣ್ಣು ಮಗಳು. ಉನ್ನತ ಅಧಿಕರಿಯಾಗಿದ್ದರೂ ಸಹ ತನ್ನ ಕೈ ಕೆಳಗಿನ ಮೇಲ್ವರ್ಗದ ಜನರ ಜೊತೆ ಸಹ ಬಹಳ ಶಿಸ್ತಿನಿಂದ ವರ್ತಿಸುವ ಮಾಧವಿ ಸಹ ತನ್ನ ಬದುಕಿನ ಅಸಹಾಯಕತೆಯ ಬಗ್ಗೆ ಯಾರಿಗೂ ಹೇಳದೆ ವ್ಯಥೆ ಪಡುತ್ತಾಳೆ ಹಾಗೂ ಆ ನೋವು ನನಗೆ ಮಾತ್ರ ಎಂದು ತಿಳಿಯುತ್ತಾಳೆ. ನಂತರ ಲೇಖಕರಿಗೆ ಈ ಸಮಸ್ಯೆ ಹೇಳುವ ಮೂಲಕ ಮತ್ತೊಂದು ಮಗು ಹಡೆದು ಇಂಜನಿಯರಿಂಗ್ ಪಾಸ್ ಮಾಡಿ ಅತ್ಯುತ್ತಮ ರ್‍ಯಾಂಕ್ ಬರುತ್ತಾನೆ.ಆದರೆ ಮೊದಲ ಮಗ ಮಾನಸಿಕ ಅಸ್ವಸ್ಥನಾಗಿ ಮನೆಯಲ್ಲಿ ಇರುವುದು ಮಾಧವಿಗೆ ತಡೆಯಲಾರದ ನೋವು ಹಾಗೂ ಲೇಖಕರು ಮಾಧವಿ ಮನೆಗೆ ಹೋದಾಗ ಆಗುವ ಅವಾಂತರಗಳಿಗೆ ಹಾಗೂ ಅವರು ಕೊಡುವ ಕಾಟಗಳನ್ನು ತಡೆಯುವುದು ಕೂಡ ಕಷ್ಟವಾಗುತ್ತದೆ. ಈ ರೀತಿಯಗಿ ಮಾಧವಿ ಸಹ ತನ್ನ ಮಾನಸಿಕ ಅಸ್ವಸ್ಥರಗಿರುವುದು ಕಂಡು ಬರುತ್ತದೆ. ಕಮ್ಯೂನಿಸ್ಟ್ ಜೋಯಿಸ ಪ್ರೀತಿ ಕಥೆಯಲ್ಲಿ ಬರುವ ರಾಮಭಟ್ಟರ ಶಿವರಾಮ ದೊಡ್ಡಪ್ಪ ರಾಜಭವಿಷ್ಯ ಹೇಳುತ್ತಿರಲಿಲ್ಲ ತೀರ ಸಾಮಾನ್ಯ ಜನಗಳ ಭವಿಷ್ಯ ಹೇಳುತ್ತಿದ್ದರು ಅಂದರೆ ಹಸು ಎಮ್ಮೆ ತಪ್ಪಿಸಿಕೊಂಡರೆ ಭೂಮಿ ಪೂಜೆ, ಕುಂಡಲ ಹೇಳುವುದು, ಜಾತಕಗಳನ್ನು ನೋಡುವುದು ಹಾಗೂ ಗಂಡು ಹೆಣ್ಣು ಸಂಸಾರ ಸುಖವಾಗಿರುತ್ತದೆ ಎಂದು ಸಹ ಹೇಳುತ್ತಿದ್ದರು. ಒಂದೊಂದು ಸಾರಿ ಎಮ್ಮೆ ಕಳೆದುಕೊಂಡವರು ಬಂದು ಹೇಳಿದಾಗ ಎಮ್ಮೆ ಈ ದಿಕ್ಕಿಗೆ ಹೋಗಿದೆ ಎಂದು ಹೇಳುತ್ತಿದ್ದರು.

ರಾತ್ರಿಯಲ್ಲಾ ಎಮ್ಮೆ ಹೋದ ದಿಕ್ಕಿನ ಬಗ್ಗೆ ತಲೆ ಕೇಡಿಸಿಕೊಳ್ಳುತ್ತಾ ಇಬ್ಬರ ಕೊನೆಗೆ ಸ್ವತಃ ಆ ಎಮ್ಮೆಯನ್ನು ಹುಡುಕಿಕೊಂಡು ಬರುತ್ತಾ ಇದ್ದರು. ಈ ರೀತಿಯಾಗಿ ಸಾಮಾನ್ಯ ಜನರ ಭವಿಷ್ಯ ಹೇಳುತ್ತಿದ್ದ ರಾಮಭಟ್ಟರ ದೊಡ್ಡಪ್ಪನವರ ಬದುಕಿನಲ್ಲೇ ಒಂದು ಘಟನೆ ನಡೆಯಿತು. ತನ್ನ ಮಗಳು ಕಮಲಿಗೆ ಮದುವೆಯಾಗಿರಲಿಲ್ಲ. ಕೊನೆಗೆ ವೆಂಕಟರಾಮಯ್ಯ ಎಂಬ ಅಡುಗೆ ಭಟ್ಟನನ್ನು ಮದುವೆ ಮಾಡಿದರು. ಅವರು ಸುಖವಾಗಿ ಬಾಳಿದರು ಇದು ರಾಮಭಟ್ಟ ಜೋಯಿಸ ದೊಡ್ಡಪ್ಪನ ಮಗಳ ಮದುವೆ. ಆದರೆ ಶಿವರಾಮ ದೊಡ್ಡಪ್ಪನ ಮಗಳ ಮದುವೆ. ಆದರೆ ಶಿವರಾಮ ದೊಡ್ಡಪ್ಪನವರ ಜೀವನದಲ್ಲಿ ನಡೆದ

ದೊಡ್ಡ ಘಟನೆ. ಅವರು ಭವಿಷ್ಯ ಹೇಳುವುದನ್ನೇ ನಿಲ್ಲಿಸಬೇಕಾಯಿತು. ಇವರ ಕಡೆಯ ಭೂಮಿಗೆ ಅಂಟುರೋಗ ಬಂದು ಕ್ರಿಮಿನಾಂಶಕವನ್ನು ತತ್‌ಕ್ಷಣ ಸಿಂಪಡಿನದೇ ಹೋದರು ಬೆಳೆದು ನಿಂತಿರುವ ಬೆಳೆ ನಾಶವಗುತ್ತದೆ, ಎಂದು ಸರ್ಕಾರ ಆ ಸೀಮೆಯ ಭಾಗಕ್ಕೆ ವಿಮಾನದ ಮೂಲಕ ಔಷಧಿ ಸಿಂಪಡಿಸುತ್ತಾರೆ. ಕೊನೆಗೆ ಈ ರೀತಿ ಸಿಂಪಡಿಸುವಾಗ ವಿಮಾನ ಗಿರಗಿರ ತಿರುಗುತ್ತಾ ಕರಕರ ಶಬ್ದಬಂದು ವಿಮಾನ ಅಪಘಾತವಾಯಿತು. ಈ ವಿಮಾನ ಶಿವರಾಮನ ಮಗ ತಿರುಮಲನನ್ನು ಬಲಿ ತೆಗೆದು ಕೊಂಡಿತ್ತು. ಹೆಬ್ಬಳ ಬಳಿ ಗುತ್ತಲಮ್ಮನ ಗುಡಿ ಬಯಲಲ್ಲಿ ತುಂಬಿ ಹೂ ಬಿಲ್ವಪತ್ರ ತರಲು ಹೋದವ. ಈ ರೀತಿ ಸಾವಿನಲ್ಲಿ ಅಂತ್ಯವಾದ ಶಿವರಾಮ ದೊಡ್ಡಪ್ಪನವರಿಗೆ ತಿರುಮಲ ಜಾತಕ ನೋಡಿದರು ನಮ್ಮ ಊರಿನಲ್ಲಿ ಯಾವ ವಿಮಾನ ಬರುತ್ತವೆ ಎಂದು ಜಾತಕ ಬರ್ದಿಟ್ಟಿದರು. ಕೊನೆಗೆ ಶಿವರಾಮ ದೊಡ್ಡಪ್ಪನವರು ಮಾನವಾಗಿ, ಊಟ ತಿಂಡಿ, ಸಂಧ್ಯಾವಂದನೆ, ಪೂಜೆ ಬಿಟ್ಟು ಮರಣ ಹೊಂದಿದರು.

ಸತ್ಯನಾರಾಯಣ ಕಥೆಯಲ್ಲಿ ಮಾರ್ಕ್ಸ್‌ವಾದ

ಕಾರ್ಲ್‌ಮಾರ್ಕ್ಸ್ ನಂಜಮ್ಮ ಕಥೆಯೂ ಸಹ ಒಂದು ಸಿದ್ಧಾಂತದ ಹಿನ್ನಲೆಯಿಂದ ರೂಪುಗೊಂಡಿರುವ ಕಥೆಯಾಗಿದೆ. ಕಥೆ ಪ್ರಾರಂಭವಾಗುವುದು ಭಾರತಕ್ಕೆ ಈಗಲ್‌ಟನ್ ಬರುವುದು ಒಂದೇ ದಿನ ಕಾರ್ಲ್‌ಮಾರ್ಕ್ಸ್ ಕುರಿತ ಅನುವಾದದ 2 ಕೃತಿಗಳನ್ನು ಬೇರೆ ಬೇರೆ ಕಡೆ ಬಿಡುಗಡೆ ಮಾಡುವುದರಿಂದ ಪ್ರಾರಂಭವಾಗುತ್ತದೆ.

ನಂಜಮ್ಮ ಸಾಮಾನ್ಯಳಲ್ಲಿ ಸಾಮಾನ್ಯ ಮನೆಕೆಲಸದಾಕೆಯನ್ನು ನೋಡಿದ ಈಗಲ್‌ಟನ್ ಅವಳನ್ನು ಗಮನಿಸುವುದು ಹಾಗೂ ಈಗಲ್‌ಟನ್ ಭಾರತಕ್ಕೆ ಬಂದಾಗ ಉಳಿದುಕೊಳ್ಳುವುದು ಮೈಸೂರಿನಲ್ಲಿ ಹಾಗೂ ಸಂಚರಿಸುವುದು ಸಾಮಾನ್ಯ ಜನರು ಸಂಚರಿಸುವ ಬಸ್ಸುಗಳಲ್ಲಿ ಸಂಚರಿಸು ಈಗಲ್‌ಟನ್ ಸಾಮಾನ್ಯ ಜನರಲ್ಲಿ ಮಾರ್ಕ್ಸ್‌ನ ಹುಡುಕಾಟಕ್ಕೆ ಮುಂದಾಗಿದ್ದಾನೆ.

ಸಾಮಾನ್ಯ ಮನೆಗೆಲಸದ ನಂಜಮ್ಮ ಯಾವುದೇ ಒಂದು ಐಡಿಯಾಲಜಿಯ ಅನುಯಾಯಿಯಾಗದೆ ತಾನು ಬೆಳೆದ ಪರಿಸರದಲ್ಲಿ ಬದುಕುವ ಆಶಾವಾದಿತನ ಹಾಗೂ ತನ್ನ ಮುಂದಿನ ಜನಾಂಗವು ಸಹ ಉತ್ತಮವಾಗಿ ಬಾಳಿ ಬದುಕಬೇಕು ಎಂಬ ಪ್ರಯತ್ನ ನಂಜಮ್ಮನಲ್ಲಿ ಕಂಡು ಬರುತ್ತದೆ.

ಸಾಮಾನ್ಯವಾಗಿ ನಂಜಮ್ಮ ಭೂತಕಾಲಕ್ಕಿಂತ ವರ್ತಮಾನ ಹಾಗೂ ಭವಿಷ್ಯತ್ ಕಾಲದ ಬದುಕಿಗೆ ಹೆಚ್ಚು ಒತ್ತು ಕೊಟ್ಟು ಕಾರ್ಯನಿರ್ವಹಿಸುವ ವ್ಯಕ್ತಿಯಾಗಿ ನಂಜಮ್ಮ ಕಂಡು ಬಂದಿದ್ದಾಳೆ. ಕಾರ್ಲ್‌ಮಾರ್ಕ್ಸ್ ಕಂಡ ಒಂದು ಸಿದ್ಧಾಂತವನ್ನು ರೂಪಿಸಿದನೆ ಹೊರತು ಆದರೆ ಕಾರ್ಯರೂಪಕ್ಕೆ ಬರುವಲ್ಲಿ ಬಹಳಷ್ಟು ಪ್ರಯತ್ನ ಮಾಡಿರಲಿಲ್ಲಾ. ಒಂದು ಸಿದ್ಧಾಂತ ರೂಪುಗೊಂಡರು ಸಹ ಅದು ಅಸ್ತಿತ್ವಕ್ಕೆ ಬರದೆ ಇದ್ದರೆ ಅದು ಕೇವಲ ಒಂದು ಸಿದ್ಧಾಂತವಾಗಿ ಉಳಿಯುತ್ತದೆ.

ಒಂದು ಸಿದ್ಧಾಂತಕ್ಕೆ ಕಾರ್ಯ ಹಾಗೂ ಕಾರ್ಯಕಾರಿಣಿ ಸಂಬಂಧ ಬಹಳ ಮುಖ್ಯವಾಗಿದೆ. ಸಿದ್ಧಾಂತ ಕ್ರಿಯಾತ್ಮಕವಾಗ ಬೇಕಾಗುತ್ತದೆ. ಅದಕ್ಕೆ ದುಡಿಮೆ ಅನಿವಾರ್ಯತೆ ಇದು ನಂಜಮ್ಮನಲ್ಲಿ ಕಂಡು ಬರುತ್ತದೆ.

ಸಿದ್ಧ ಮಾದರಿಯ ಸಿದ್ಧಾಂತಕ್ಕಿಂತ ಕ್ರಿಯಾತ್ಮವಾಗಿ ದುಡಿಯುವ ಒಂದು ವರ್ಗಕ್ಕೆ ನಂಜಮ್ಮ ಸೇರಿರುವುದನ್ನು ಕಥೆಯಲ್ಲಿ ಗಮನಿಸಬಹುದು.

ಕಥೆಯ ಪ್ರಾರಂಭದಲ್ಲೇ ನಡೆಯುವ ಕಾರ್ಯಕ್ರಮಗಳಲ್ಲಿ ನಗರದ 2 ಕಡೆ ಮಾರ್ಕ್ಸ್‌ನ ಅನುವಾದ ಪುಸ್ತಕಗಳನ್ನು ಬಿಡುಗಡೆ ಮಾಡಿದ ಈಗಲ್‌ಟನ್ ಸಹ ನಗರದ ಯಾವುದೋ ಹೋಟೇಲಿನಲ್ಲಿ ಉಳಿದುಕೊಳ್ಳದೆ ಮೈಸೂರು – ನಂಜನಗೂಡಿನಲ್ಲಿ ಉಳಿದುಕೊಳ್ಳುವುದು. ಸಾಮಾನ್ಯ ಜನರಲ್ಲಿ ಮಾರ್ಕ್ಸ್ ಹುಡುಕಾಟ ಕಥೆಯಲ್ಲಿ ಕಂಡು ಬರುತ್ತದೆ.

ಈಗಲ್‌ಟನ್ ಉಳಿದುಕೊಳ್ಳುವ ಸ್ಥಳವು ಸಹ ಭಾರತ ಒಂದು ಮದ್ಯಮವರ್ಗದ ಮನೆಯಾಗಿರುತ್ತದೆ.

ಮಾರ್ಕ್ಸ್‌ವಾದದ ಬಗ್ಗೆ ಪುಸ್ತಕ ಬರೆದು ಅನುವಾದ ಮಾಡಿದರೆ ಮಾರ್ಕ್ಸ್‌ವಾದದ ಭವಿಷ್ಯ ಪ್ರಕಾಶಿಸುವುದಿಲ್ಲಾ. ನಂಜಮ್ಮನಂತಃವಳಿಂದ ಮಾತ್ರ ಮಾರ್ಕ್ಸ್‌ವಾದದ ಭವಿಷ್ಯವಿದೆಯೆಂದು ಈಗಲ್‌ಟನ್ ಕಂಡುಕೊಳ್ಳುತ್ತಾನೆ. ಕಮ್ಯೂನಿಷ್ಟ್ ರಾಮಭಟ್ಟರ ಜೋಯಿಸ ಪ್ರೀತಿ ಎಂಬ ಕಥೆಯಲ್ಲಿ ಒಂದು ಸಂಪ್ರದಾಯಬದ್ಧ ಕುಟುಂಬದಲ್ಲಿ ಜನಿಸಿದ ರಾಮಭಟ್ಟರು ಓದಿದ್ದು ಹೊಂಬೇಗೌಡ ನಗರದ ಹೊಯ್ಸಳ ಹಾಸ್ಟೇಲ್‌ನಲ್ಲಿ ಇವರು ಶಾಲಾ ದಿನಗಳಲ್ಲೇ ಬುದ್ಧಿ ಜೀವಿಗಳು, ಪ್ರಗತಿಪರರು, ಮುಂತಾದವರನ್ನು ಕರೆಸಿ ಭಾಷಣ ಮಾಡಿಸುತ್ತಾರೆ. ಇದರಿಂದ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ಮುಂದೆ ಇವರು ಭಟ್ಟರು ದೆಹಲಿಗೆ ಓದುವುದಕ್ಕೆ ಹೋಗುವುದು. ಅಲ್ಲಿಯೂ ಪ್ರತಿಭಟನೆ, ಹೋರಾಟ. ರಷ್ಯಾದಲ್ಲಿ ಕೆಲವು ವರ್ಷಗಳ ಕಾಲ ಇರುವುದು ಹಾಗೂ ಅಲ್ಲಿಂದಲೇ ಮಾಸ್ಕೋದಿಂದ ಕನ್ನಡ ಭಾಷಣ ಗಳನ್ನು ಮಾಡ್ತಾ ಇದ್ದರು. ಬಂಗಾಳಿ ಹುಡುಗಿಯನ್ನು ಮದುವೆಯಾದದ್ದು, ಮದುವೆಯಿಂದ ಡೈವೋರ್ಸ್ ಅಂತ ಪಡೆಯದೆ ಹೋದರು ಸಹ ಭಟ್ಟರ ಹೆಂಡತಿ ನಟಿಸಿ ನಿರ್ದೇಶನ ಎಂದು ದೂರ ಉಳಿದದ್ದು. ಕರ್ನಾಟಕದ ಎಲ್ಲಾ ಪತ್ರಿಕೆಗಳಿಗೆ ದೆಹಲಿಯಿಂದ ವಾಚಕರವಾಣಿಗೆ ಪತ್ರಗಳನ್ನು ಬರೆಯುತ್ತಿದ್ದರು. ಚಿಕ್ಕಬಾಣಾವರದ ಹಳ್ಳಿಯ ಸಮಸ್ಯೆ ರಸ್ತೆ ದುರಸ್ತಿ, ಜನತಾಗೃಹಗಳ ನಿರ್ಮಾಣ, ಆಸ್ಪತ್ರೆಗಳ ದಾದಿಯರ ಕೊರತೆ ಎಕ್ಸ್‌ರೇ ಯಂತ್ರ ಸರಿಯಾಗಿ ಕೆಲಸ ಮಾಡದೇ ಹೋಗುವುದು ಸಹ ಅವರ ಪತ್ರಗಳ ಒಕ್ಕಣಾ ಪ್ರಪಂಚ.

ಈ ರಾಮಭಟ್ಟರ ಭವಿಷ್ಯದ ಭಾರತದ ಬಗ್ಗೆ ಕನಸು ಕಂಡ ವ್ಯಕ್ತಿಯಾದರು ಸಹ ಕಮ್ಯನಿಸಂ ಬೆಳೆಸಿಕೊಂಡರು ಸಹ ಅವರು ಅವನು ರಷ್ಯಾದಲ್ಲಿ ಕಮ್ಯೂನಿಸ್ಟರಿಗೂ ಸಹ ಭವಿಷ್ಯ ನುಡಿಯುವ ಕೆಲಸ ಮಾಡುತ್ತಿದ್ದರು. ಅಂದರೆ ರಷ್ಯಾ ದೃಷ್ಟಿಕೋನದಿಂದ ಇಡೀ ಜಗತ್ತು ನಾಲ್ಕು, ಹತ್ತು, ಹದಿನೈದು ವರ್ಷಗಳ ನಂತರ ರಷ್ಯಾ ಯಾವ ರೀತಿ ಇರುತ್ತವೆ ಈ ಸಂಸ್ಥೆ ಆಡಳಿತ ಮಂಡಳಿಗೆ ವರದಿ ಒಪ್ಪಿಸಿತು.

ಈ ರೀತಿ ಒಂದು ಸಂಪ್ರದಾಯಬದ್ಧ ಕುಟುಂಬದಲ್ಲಿ ಹುಟ್ಟಿದ ರಾಮಭಟ್ಟ ಕಮ್ಯೂನಿಸ್ಟ್ ಆದರೆ ಸಹ ಅವರು ಭವಿಷ್ಯಕಾರನಾಗಿ ಉಳಿಯುವುದನು ಕಾಣಬಹುದು. ಆದುನಿಕ ಬದುಕಿನ ವಿಕೃತ ಅನುಭವಗಳನ್ನು ಅನನ್ಯತೆಯಿಂದ ದಾಖಲಿಸುವ ಬರಹಗಾರರಾಗಿ ಸಮಾಜವಾದಿಯಾಗಿ ಎಲ್ಲರಿಗೂ ಅರ್ಥವಾಗುವ ದಾಟಿಯಲ್ಲಿ ಪಾತ್ರಗಳ ಸೃಜಿಸಿ ತಮ್ಮದೇ ಆದ ಪರಿವೇಶಗಳನ್ನು ಕಥೆಗೆ ಕಥೆಗಾರರು ಜೋಡಿಸಿದ್ದಾರೆ.

ಮಾರ್ಕ್ಸ್‌ವಾದ

ಕನ್ನಡದ ಪ್ರಗತಿಶೀಲ ಚಳುವಳಿಯನ್ನು ಹುಟ್ಟು ಹಾಕುವಂತೆ ಮಾರ್ಕ್ಸವಾದ ಪ್ರೇರಣೆ ನೀಡುವುದರ ಜೊತೆಗೆ ಬಂಡಾಯ ಹಾಗೂ ದಲಿತ ಸಾಹಿತಿಗಳಲ್ಲಿ ಮಾರ್ಕ್ಸ್‌ವಾದಿತನವನ್ನು ಗುರುತಿಸಬಹುದು. ಇಲ್ಲಿ ಸತ್ಯನಾರಾಯಣರವರು ಅವರ ಕಥೆಗಳು ಬರಹಗಾರನೊಬ್ಬನ ಮಾನಸಿಕ ಚಿಂತನೆಗೆ ಕನ್ನಡಿ ಹಿಡಿದಂತೆ ಪ್ರತಿಬಿಂಬಿಸುತ್ತಿವೆ. ಸತ್ಯನಾರಾಯಣರವರ ಕಥೆಗಳಲ್ಲಿ ವಿವಿಧ ವರ್ಗಗಳಿಂದ ಪ್ರಭಾವಿತವದ ಅಂಶಗಳಿದ್ದು ಅದರಲ್ಲಿ ಮಾರ್ಕ್ಸ್‌ವಾದವು ಕೂಡ ಒಂದಾಗಿದೆ. ಮಾರ್ಕ್ಸವಾದಿ ಸೈದ್ಧಾಂತಿಕತೆಯನ್ನು ಎತ್ತಿಹೇಳುವ ಉದ್ದೇಶದಿಂದಲೇ ಎಂಬಂತೆ ಕಾರ್ಲ್‌ಮಾರ್ಕ್ಸ್ ನಂಜಮ್ಮ ಕಥೆ ವಿಸ್ತರಿತವಾಗಿರುವುದನು ಕಾಣಬಹುದು. ಜನಾಂಗೀಯ ಆಶಾವಾದಿತನ ಭವಿಷ್ಯ ಹಂಬಲಿಕೆ ನಂಜಮ್ಮ ಪಾತ್ರದಲ್ಲಿ ಅರಳಿವೆ. ಸಿದ್ಧಾಂತವೊಂದನ್ನು ಮೀರಿದ ಬದುಕ್ಕೊಂದನು ಈ ಪಾತ್ರ ನಮಗೆ ಕಟ್ಟಿಕೊಟ್ಟಿದೆ.

ಒಂದು ಪುಸ್ತಕ ಮತ್ತೆ ಮತ್ತೆ ಬೇರೆ ಬೇರೆ ಭಾಷೆಗಳಲ್ಲಿ ತರ್ಜುಮೆಗೊಳ್ಳುವುದಕ್ಕಿಂತ ಆ ಪುಸ್ತಕದಲ್ಲಿ ವ್ಯಕ್ತವಾಗುವಂತಹ ಕಾರ್ಲ್‌ಮಾರ್ಕ್ಸ್ ಸಿದ್ಧಾಂತ ಇಲ್ಲೇ ತಮ್ಮ ಕಗ್ಗೆಮರಿಗೆ ಒಂದು ವ್ಯಕ್ತಿಯಾಗಿ ಅರಳಿರುವುದನು ಈಗಲಟನ್ ಗುರುತಿಸಿ ವಾಸ್ತವದ ಕಾರ್ಲ್‌ಮಾರ್ಕ್ಸ್‌ನನ್ನು ನಂಜಮ್ಮನಲ್ಲಿ ಗುರುತಿಸುತ್ತಾರೆ. ಐಡಿಯಾಲಜಿ ಓದಿಕೊಳ್ಳದ ನಂಜಮ್ಮನ ಬದುಕಿನ ಎತ್ತರ ಬೇರೆ ಎಂದು ಈಗಲಟನ್ ಕುತುಹಲಿತರಾಗುತ್ತಾರೆ. ಒಬ್ಬ ಕಮ್ಯೂನಿಸ್ಟ್ ಮಾರ್ಕ್ಸ್‌ವಾದಿಯಾಗಿ ಹೆಸರುಗಳಿಸಲು ರಾಮಭಟ್ಟ ಮನೆತನದಿಂದ ಬಳುವಳಿಯಾಗಿ ಬಂದಿದ್ದ ರಕ್ತಗತವಾಗಿ ತಮ್ಮಲ ಉಳಿದಿದ್ದ ಜ್ಯೋತಿಷಕೆಯಿನ ಮರೆತು ದೊಡ್ಡ ದೊಡ್ಡ ಸಮಾಜದ

ಪ್ರತಿಭಟನೆ ಸಮಾವೇಶ ಇಂತಹದರಲ್ಲಿ ಕಾಲಯಾಪನೆ ಮಾಡುತ್ತಾ ಎಂದೋ ತಮ್ಮ ಮಗನ ಜಾತಕದಲ್ಲಿ ವಿಮಾನ ಅಪಘಾತದಿಂದ ಮಗನ ಸಾವು ಎಂದಿದ್ದರು ಕೂಡ ಅದರ ಬಗ್ಗೆ ಜಾಗೃತರಾಗದೆ ಅದಕ್ಕೆ ಪರಿಹಾರವನ್ನು ಹುಡುಕಿಕೊಳ್ಳದೆ ಉಳಿದ ಬೇಜವ್ದಾರಿ ತಂದೆತನವನ್ನು ಶಿರ್ಷಿಕೆಯಲ್ಲಿ ಸತ್ಯನಾರಾಯಣರು ಈ ಜ್ಯೋತಿಷ್ಯ ಪ್ರೀತಿ ಎಂದು ಹೆಸರು ಕೊಟ್ಟಿದ್ದಾರೆ.

ಅಡಿ ಟಿಪ್ಪಣಿ:
ಅಮೆರಿಕನ್ ಮನೆ, ಪರಸ್ಪರ ಪ್ರಕಾಶನ, ಮುನ್ನುಡಿ, 2016

ಕೆ. ಸತ್ಯನಾರಾಯಣರವರ ಸಂದರ್ಶನ ಲೇಖನ



ಕೆ. ಸತ್ಯನಾರಾಯಣರವರು ಮಂಡ್ಯಜಿಲ್ಲೆ, ಮದ್ದೂರು ತಾಲೂಕು ಕೊಪ್ಪದಲ್ಲಿ 1954ರ ಏಪ್ರಿಲ್ 21ರಂದು ಕೆ.ಎಸ್. ಕೃಷ್ಣಮೂರ್ತಿ ಮತ್ತು ಲಕ್ಷ್ಮಿನರಸಮ್ಮ ದಂಪತಿಗಳ ಮಗನಾಗಿ ಜನಿಸಿದರು. 1972 ರಲ್ಲಿ ಅರ್ಥಶಾಸ್ತ್ರದಲ್ಲಿ ಬಿ.ಎ. ಸುವರ್ಣ ಪದಕದೊಂದಿಗೆ ಮತ್ತು 1974 ಸ್ನಾತಕೋತ್ತರ ಪದವಿಯನ್ನು ಮೈಸೂರು ವಿವಿಯಲ್ಲಿ ಪೂರ್ಣಗೋಳಿಸಿದರು. ಭಾರತ ಸರ್ಕಾರದ ಆದಾಯ ತೆರಿಗೆ ಇಲಾಖೆಯಲ್ಲಿ ವೃತ್ತಿಗೆ ಸೇರಿ, ಮುಂಬೈ, ನಾಗಪುರ, ಬೆಂಗಳೂರು, ಚೆನ್ನೈ, ಹೈದರಾಬಾದ್, ಸೇರಿದಂತೆ ಇನ್ನೂ ಅನೇಕ ನಗರ ಪಟ್ಟಣಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇದೇ ಇಲಾಖೆಯ ಮುಖ್ಯ ಆಯುಕ್ತರಾಗಿ ನಿವೃತ್ತರಾಗಿದ್ದಾರೆ. ಈ ಕಥಾ ಸಂಕಲವನ್ನು ಹೊರತು ಪಡಿಸಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಇವರ 27 ಸ್ವತಂತ್ರ ಕೃತಿಗಳು ಪ್ರಕಟವಾಗಿವೆ. ಇವುಗಳಲ್ಲಿ ಕ್ರಮವಾಗಿ ಪ್ರಬಂಧ, ಕಾದಂಬರಿ ಮತ್ತು ಸಣ್ಣಕಥೆಗಳ ಪ್ರಕಾರಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು 1988-1992-2012ರಲ್ಲಿ ಪ್ರಶಸ್ತಿ ನೀಡಿದೆ. ಮಾಸ್ತಿ ಪ್ರತಿಷ್ಠಾನವು, 'ನಕ್ಸಲ್ ವರಸೆ' ಕಥಾ ಸಂಕಲನಕ್ಕೆ ಕಥಾ ಪ್ರಶಸ್ತಿಯನ್ನು ಮತ್ತು ಒಟ್ಟು ಕಥಾ ಸಾಹಿತ್ಯದ ಬರವಣಿಗೆಗೆ ಗೌರವ ಪ್ರಶಸ್ತಿಗಳೆರಡನ್ನು ನೀಡಿದೆ. ಸಾಹಿತ್ಯದ ವಿವಿಧ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ 2012ರಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ. ಪ್ರಶಸ್ತಿ, 2014ರಲ್ಲಿ ರಾ.ಗೌ. ಪ್ರಶಸ್ತಿ 2016ರಲ್ಲಿ ಬಿ.ಎಚ್. ಶ್ರೀಧರ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಸಾಹಿತ್ಯ ಸಾಧನೆ ಮತ್ತು ಆಡಳಿತದ ಸೇವೆಗಳನ್ನು ಪರಿಗಣಿಸಿ ಬೆಂಗಳೂರು ವಿವಿ 2013ರಲ್ಲಿ ಗೌರವ ಡಾಕ್ಟರೇಟ್ ನೀಡಿದೆ. ಸಧ್ಯ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಕೆ. ಸತ್ಯನಾರಾಯಣ ತಮ್ಮ ಸೃಜನಶೀಲ, ಕ್ರಿಯಾತ್ಮಕ ಮತ್ತು ನೈಜ, ಘಟನೆಗಳ, ಕಲ್ಪನೆ ಆಧಾರಿತ ಬರಹಗಳ ಮೂಲಕ ತಮ್ಮನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿಕೊಂಡವರು. ಅವರು ತಮ್ಮ ಬಗ್ಗೆ ಹಂಚಿಕೊಂಡ ಸಂದರ್ಶನದ ಸಾರ ಇಲ್ಲಿದೆ.

ನಮಸ್ಕಾರ ಸಾರ್,

1. ಸಾಹಿತ್ಯಾಭಿರುಚಿಗೆ ಕಾರಣವಾದ ಸಂಗತಿ ಯಾವುದು?

ಸಾಮಾನ್ಯವಾಗಿ ಕೆ. ಸತ್ಯನಾರಾಯಣರವರು ಹಳ್ಳಿಯಿಂದ ಬಂದವರಾದ್ದರಿಂದ ಹಳ್ಳಿಗಳ ಕುರುಕ್ಷೇತ್ರ ರಾಮಾಯಣ ಮುಂತಾದ ನಾಟಕಗಳಿಂದ ಸಾಹಿತ್ಯಾಭಿರುಚಿ ಮೂಡಲು ಹಳ್ಳಿಯು ಸಹ ಕಾರಣವಾಗಿದೆ. ಮುಂದೆ ಅವರು ಹಳ್ಳಿಯ ಶಾಲೆಯ ಮೇಷ್ಟ್ರಗಳು ಸಹ ತಮಗೆ ಉನ್ನತ ಮಟ್ಟದಲ್ಲಿ ಪಾಠಗಳನ್ನು ಮಾಡುತ್ತಿದ್ದುದರಿಂದ ಸಹಜವಾಗಿ ಸಾಹಿತ್ಯದಲ್ಲಿ ಆಸಕ್ತಿ ಮೂಡಲು ಕಾರಣವಾಯ್ತು ಹಾಗೂ ತಮ್ಮ ಅಜ್ಜಿಯೊಂದಿಗೆ ಬಾಲ್ಯದಲ್ಲಿ ಕಳೆದಾಗ ಹಾಗೂ ಏಕಾಂಗಿತನವನ್ನು ಕೂಡ ಸಹ ಸಾಹಿತ್ಯಾಸಕಿಗೆ ಕಾರಣವಾಯಿತು. ಮುಂದೆ ಇವರು, ಬಿ.ಎ. ಮುಂತಾದ ಪದವಿಯಲ್ಲಿ ಕನ್ನಡ ಉಪನ್ಯಾಸಕರ ಉತ್ತಮ ಪಾಠಗಳು ಸಹ ಸಾಹಿತ್ಯಾಸಕ್ತಿಎಗ ಕಾರಣವಾಗಿದೆ. ಓದುವಿಕೆ ಪ್ರಾರಂಭದಿಂದ ಬೆಳೆದು ಬಂದರು, ಬರವಣಿಗೆ ತಡವಾಗಿ ಬಂದದ್ದು. ಇವರ ಬರವಣಿಗೆಗೆ ಪ್ರಮುಖವಾಗಿ ಹಳ್ಳಿಯ ಜೀವನವು ಸಹ ಕಾರಣವಾಗಿದೆ.

2. ಕಾದಂಬರಿಕಾರರಾಗಿ, ಕಥೆಗಾರರಾಗಿ, ಅಂಕಣ ಬರಹಗಾರರಾಗಿ ಗುರುತಿಸಿಕೊಳ್ಳುತ್ತಿರೋ? ತಮಗೆ ಕೀರ್ತ ತಂದ ಪ್ರಕಾರ ಯಾವುದು?

ಕಥೆ, ಕಾದಂಬರಿ, ವಿಮರ್ಶೆ, ಅಂಕಣಿಕೆಗೆ ತನ್ನದೇ ಆದ ವೈಶಿಷ್ಟ್ಯವಿದೆ. ತಮ್ಮ ಅನುಭವ ವಿಭಿನ್ನವಾಗಿ ಚಿತ್ರಿತವಾಗುತ್ತಿದೆ. ಈ ರೀತಿಯ ಪ್ರಕಾರವೇ ಹೆಚ್ಚು ಖುಷಿ ಕೊಟ್ಟಿದ ಎಂದು ಹೇಳಲು ಸಾಧ್ಯವಿಲ್ಲ. ಆತ್ಮಚರಿತ್ರೆ ಬರೆದವರು ಸಹ ನನ್ನ ಕಥೆಗಳ ಬಗ್ಗೆ ಹೆಚ್ಚು ವಿಮರ್ಶೆ ಬಂದಿರುವುದರಿಂದ ಕಥೆಗಾರನಾಗಿ ಗುರುತಿಸಿಕೊಳ್ಳುತ್ತೇನೆ. ಹಾಗೂ ವಿಮರ್ಶಕರ ದೃಷ್ಟಿಯಿಂದ ನೋಡಿದರೆ ನನಗೆ ಕೀರ್ತಿ ತಂದು ಕೊಟ್ಟ ಪ್ರಕಾರ ಕಥೆಗಾರನಾಗಿ.

3. ಮಾಸ್ತಿ ಪರಂಪರೆಯಿಂದ ಗುರುತಿಸಿಕೊಳ್ಳುತ್ತಿರೋ, ಸಮಕಾಲೀನ ಕಥೆಗಾರರ ಜೊತೆ ಗುರುತಿಸಿಕೊಳ್ಳುತ್ತಿರೋ?

ಮಾಸ್ತಿ ಪರಂಪರೆ ಮಾಸ್ತಿಗೆ ಮಾತ್ರ ಸಿಮೀತ. ಕಥೆಹೇಳುವುದು, ಕೇಳುವುದು, ಮಾಸ್ತಿ ಸಂಪ್ರದಾಯವಾಗಿದೆ. ಮಾಸ್ತಿ ಒಂದು ಸಮುದಾಯದ ಒಂದು ಭಾಗವಾಗಿ ಕಥೆ ಬರೆದರು. ಪಶ್ಚಿಮದ

ಪ್ರಭಾವ ಮಾಸ್ತಿ ಕತೆಗಳಲ್ಲಿ ಕಂಡು ಬರುತ್ತದೆ. ಒಂದು ಕಥೆಯಲ್ಲಿ ನಮ್ಮ ಬಾಲ್ಯ, ನನ್ನ ಹಳ್ಳಿ, ಮಾಸ್ತಿ ಅವರ ಕಥೆಗಳಲ್ಲಿ ಕಂಡು ಬರುತ್ತದೆ. ಕಲ್ಪನೆ ಮತ್ತು ವಾಸ್ತವಕ್ಕೆ ಕಲ್ಪನಾತ್ಮಕೆಯನ್ನು ಮಾಸ್ತಿ ಕಟ್ಟಿಕೊಟ್ಟಿದ್ದಾರೆ. ಉದಾಹರಣೆಗೆ ಮೊಸರಿನ ಮಂಗಮ್ಮ ಮುಂತಾದ ವೈವಿಧ್ಯ ಪಾತ್ರ ಮಾಸ್ತಿ ಕಥೆಗಳಲ್ಲಿ ಕಂಡು ಬರುತ್ತದೆ. ಇನ್ನೊಬ್ಬರ ನೋವು ನನ್ನ ಕಥೆಗಳಲ್ಲಿ ಮತ್ತು ಮಾಸ್ತಿ ಕಥೆಗಳಲ್ಲಿಯೂ ಇರುವುದರಿಂದ ನಾನು ಮಾಸ್ತಿ ಪರಂಪರೆಯ ಜೊತೆಗೆ ಗುರುತಿಸಿಕೊಳ್ಳುತ್ತೇನೆ.

4. ಆದಾಯ ತೆರಿಗೆ ಇಲಾಖೆಯಲ್ಲಿದ್ದು ಸಾಹಿತ್ಯದಲ್ಲಿ ತೊಡಗಿಸಿಕೊಳ್ಳು ಸಾಧ್ಯವಾಗಿದ್ದು ಹೇಗೆ? ವೃತ್ತಿ ಬದುಕು ಹೇಗೆ ನೆರವು ನೀಡಿದೆ.

ಪ್ರತಿಯೊಬ್ಬರ ಬದುಕಿನಲ್ಲಿ ಉದ್ದೇಶವಿರುತ್ತದೆ. ತೆರಿಗೆ ಇಲಾಖೆಗೆ ನಾನು ಸೇರಿದ್ದು ಆಕಸ್ಮಿಕ. ಆದರೆ ಬರಹಗಾರನಾಗಿದ್ದು ನನ್ನ ಆಸಕ್ತಿಯಿಂದ. ಆಕಸ್ಮಾತ್ ತೆರಿಗೆ ಇಲಾಖೆಯಲ್ಲಿ ಇರದಿದ್ದರೆ ಬರಹಗಾರನಾಗಿ ಹೊರಹೊಮ್ಮುತ್ತಿದ್ದೆ. ತೆರಿಗೆ ಇಲಾಖೆಯಾದ್ದುದರಿಂದ ಬೇರೆ ಬೇರೆ ಊರು, ನಗರದಲ್ಲಿ ಇದ್ದಿದ್ದರಿಂದ ಭಿನ್ನ ಕಥೆಗಳು ನನಗೆ ಸಿಗಲು ಸಾಧ್ಯವಾಯಿತು.

ವೃತ್ತಿ ಬದುಕಿನಲ್ಲಿ ನಾನು ಕಂಡ ಎಲ್ಲಾ ಅನುಭವಗಳನ್ನು ಚಿತ್ರಿಸಿದೆ.

5. ತಾವು ಅಧಿಕಾರದಲ್ಲಿದ್ದು ತಮ್ಮ ವೃತ್ತಿ ಅನುಭವಗಳನ್ನು ಕಟ್ಟಿಡುವಲ್ಲಿ ನಿಮ್ಮ ಕಥೆಗಳು ಮಾಧ್ಯಮಗಳೇ?

ಪೂರ್ಣವಾಗಿ ಇಲ್ಲ ಅದು ವೃತ್ತಿವಿಲಾಸ ಪುಸ್ತಕದಲ್ಲಿ ಹಾಗೂ ಆತ್ಮಚರಿತ್ರೆಯಲ್ಲಿ ಬರೆದಿದ್ದೇನೆ.

6. ಸಾಹಿತ್ಯದ ಜೊತೆಗೆ ನಿಮ್ಮ ಮನೆಯವರ ಸಹಕಾರ

(ಲೇಖಕರ ಪತ್ನಿಯ ಮಾತು) ಸಹಕಾರ ಎಂದು ಹೇಳಲು ಸಾಧ್ಯವಿಲ್ಲ. ಅವರು ಬರೆದ ಸಂದರ್ಭದಲ್ಲಿ ನನ್ನ ಜೊತಗೆ ಚರ್ಚೆ ಮಾಡಿದಾಗ ನಾನು ತಿಳಿದಾಗ ಹಾಗೇ ಸಹಕರಿಸಿದ್ದೇನೆ. ಹಾಗಾದರೆ ಲೇಖಕರ ಕಥೆಯ ಮೊದಲ ವಿಮರ್ಶಕಿ ನೀವೇ ಮೇಡಂ. ನನಗೆ ತಿಳಿದ ಹಾಗೇ ಹೇಳಿದ್ದೇನೆ.

7. ನಿಮ್ಮ ಕಥೆಗಳು ಅನುಭವಗಳೇ ಹಾಗೂ ಕಲ್ಪನೆಗಳೇ

ಅನುಭವವನ್ನೇ ಹೇಳುವುದು ಸಾಧ್ಯವಿಲ್ಲ. ಒಂದು ಕಥೆಗೆ ಕಲ್ಪನೆ ಇದ್ದರೆ ಆದರ ಬೆಳವಣಿಗೆ ಉತ್ತಮವಾಗತ್ತದೆ. ಉದಾಹರಣೆಗೆ – ನಕ್ಸಲ್‌ವರಸೆ, ಬರೆದನು ಕತೆಯ ಯಾಕೂಬ್ ನಲಕೊಂಡ, ಅಮೆರಿಕನ ಮನೆ (ವೇದತ್ತೆ)ಕಥೆಗಳ ಕೆಲವು ಪಾತ್ರಗಳು ಕಲ್ಪನೆಯಾಗಿವೆ.

8. ನಿಮ್ಮ ಕಥೆಗಳಲ್ಲಿ ಸ್ತ್ರೀ ಪಾತ್ರಗಳನ್ನು ಪ್ರಧಾನ ಧಾರೆಯಲ್ಲಿ ಗುರುತಿಸುವ ಹಿನ್ನೆಲೆಯಲ್ಲಿ ಯಾವುದಾದರೂ ಉದ್ದೇಶ ಇದೆಯಾ / ವಿಶೇಷತೆ ಇದೆಯಾ.

ಸಮಾಜದ ಬದಲಾವಣೆಯ ಸಂದರ್ಭದಲ್ಲಿ ಮಹಿಳಾ ಶಿಕ್ಷಣ, ಉದ್ಯೋಗ ಮುಂತಾದವುಗಳಿಂದ ಸಮಾಜ, ಕೌಟುಂಬಿಕ ವ್ಯಕ್ತಿಗಳ ಮೇಲೆ ಬದಲಾವಣೆಗೆ ಹೆಚ್ಚಾಗುತ್ತದೆ. ಅದು ಸ್ತ್ರೀಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಅದು ಗಂಡಸಿನಲ್ಲಿ ಹೆಚ್ಚಾಗಿ ಕಾಣುವುದಿಲ್ಲ ಯಾಕೆಂದರೆ ಈಗಾಗಲೇ ಅವನು ಸ್ವತಂತ್ರನಾಗಿದ್ದಾನೆ...

ಧನ್ಯವಾದಗಳು ಸಾರ್.

ಸಮಾರೋಪ

ಸತ್ಯನಾರಾಯಣರ ಕಥೆಗಳು, ಸಾಮಾಜಿಕ ನೆಲೆಯದ್ದು ಆಗಿದ್ದು ಶೋಧಿಸುವ ಕುತೂಹಲಕಾರಿ ಅಧ್ಯಯನಕ್ಕೆ ನಾಂದಿ ಹಾಡಿವೆ. ಇವರ ಕಥಾ ಸಾಹಿತ್ಯದಲ್ಲಿ ಆಕೃತಿಯೊಳಗೆ ತನ್ನ ಪಾತ್ರಗಳನ್ನು ಗುರುತಿಸುವ ಕೆಲಸ ಸಾಗಿದೆ. ಸಾಂಪ್ರದಾಯಿಕ ಮೌಲ್ಯಗಳ ನಿಶ್ಚಿತ ಚೌಕಟ್ಟಿನಲ್ಲಿ ಧಾರ್ಮಿಕ ಶ್ರದ್ಧೆಯಿಂದ ಸಮಸ್ಯೆಗಳನ್ನು ಗ್ರಹಿಸುತ್ತಾರೆ. ಇವರ ಕಥೆಗಳ ಆಶಯ ಒಟ್ಟಾರೆಯಾಗಿ ಒಂದು ಜೀವನವನ್ನು ಹೇಳುವುದು ಅಥವಾ ಜೀವನ ಚಿತ್ರಣವನ್ನು ಕಟ್ಟಿಕೊಡುವುದು ಮುಖ್ಯವಾಗಿ ಗಮನಿಸಬಹುದು. ಸಂಪ್ರದಾಯ ಪ್ರಜ್ಞೆಯೊಳಗೆ ಸಂಸ್ಕೃತಿಯಲ್ಲಿರುವ ಕುಂದುಕೊರತೆಗಳನ್ನು ಇದರ ವಸ್ತು ನಿರೂಪಿಸುತ್ತದೆ. ಇವರ ಕಥೆಗಳಲ್ಲಿ ಪ್ರಾದೇಶಿಕತೆಯ ಅನುಭವಗಳು ಹೆಚ್ಚು ಹೆಚ್ಚಾಗಿ ಅಭಿವ್ಯಕ್ತಗೊಂಡಿವೆ. ಹೊಸ ಮತ್ತು ಹಳೆಕಾಲದ ಹೆಣ್ಣಿನ ಸ್ಥಿತಿಗತಿಯ ಮುಖಾಮುಖಿ ಏಕಕಾಲದಲ್ಲಿ ಇವರ ಕೃತಿ ಗುರುತಿಸಿದೆ.

ಕಥಾ ಸಾಹಿತ್ಯಕ್ಕೆ ಬೇಕಾದ ಕಥನಕ್ರಮ ವಿವರಣೆ ನಿರೂಪಣೆ ಸರಳವಾಗಿದ್ದು ಲೇಖಕರಲ್ಲಿ ಫಲಿತವಾಗಿದೆ. ಸಾಂಸ್ಕೃತಿಕ ಸಾಮಗ್ರಿ ಇವರ ಸಾಹಿತ್ಯದ ಮುಖ್ಯ ಸರಕು. ಈ ಕಾಲಘಟ್ಟದ ಕಥೆಗಾರರಲ್ಲಿ ಹೊಸದನ್ನು ಹುಡುಕುವ ವಿವೇಚಿಸುವ ಕಥೆಗಾರರ ಸಾಲಿನಲ್ಲಿ ಸತ್ಯನಾರಾಯಣರವರನ್ನು ಗುರುತಿಸಬಹುದು. ಪ್ರಗತಿಶೀಲ ಮನೋಭಾವದ ಕಪ್ಪು ಬಿಳುಪಿನ ಪಾತ್ರಗಳು ಇವರ ಕೃತಿಗಳಲ್ಲಿ ಹೆಚ್ಚು ಸಂಸಾರದಲ್ಲಿ ಬರುವ ಸಮಸ್ಯೆಗಳನ್ನು ಸಮಸ್ಯೆ ಎಂದು ಕೇಳಿ ಕೊಳ್ಳದೆ ಒಪ್ಪಿಕೊಂಡು ಬದುಕುವ ರೀತಿ ಅವರದು. ಈ ಸಂದರ್ಭದಲ್ಲಿ ಸಾರ್ವಕಾಲಿಕ ಹುಡುಕಾಟದ ಪ್ರಧಾನ ಕಾಳಜಿ ಕಾಣಬಹುದು. ಮನುಷ್ಯರ ಬದುಕಿಗೆ ದುರಂತತೆಯನ್ನು ಒಂದು ರೀತಿ ಭೀತಿಯ ವಾತಾವರಣದಲ್ಲೇ ಜೋಡಿಸಿರುತ್ತಾರೆ.

ಬದುಕಿನ ಸಮಸ್ಯೆಗಳಿಗೆ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಪರಿಹಾರ ಹುಡುಕುವ ಇವರ ರೀತಿ ಮಾಸ್ತಿಯವರ ಕಥಾ ಮನೋಧರ್ಮವನ್ನು ನೆನಪಿಸುತ್ತದೆ. ಸಮಾಜದ ಸ್ಥಿತ್ಯಂತರಗಳ್ನು ಕೂಡ ಸಮರ್ಥವಾಗಿ ಹೇಳುವ ಅಭ್ಯಾಸ ಇವರ ಕಥೆಗಳದ್ದು. ಈ ಸಂದರ್ಭದಲ್ಲಿ ಆ ನಿರೂಪಣೆಗಳು ನೀರಸ ದಾಖಲಾತಿಗಳೆನಿಸುತ್ತವೆ.

ಇವರ ಕಥೆಗಳಲ್ಲಿ ಮರೆಯಲಾಗದ ಕಥಾ ಬಂಧಗಳು ಸಹಜತೆ ಕಾಪಾಡಿಕೊಳ್ಳುತ್ತಾ ಈ ನೀರಸತೆ ಉಂಟಾಗದೆಯೆನೋ ಎನಿಸುತ್ತದೆ. ವಸ್ತು ವೈವಿಧ್ಯತೆ ನೋಡಬಹುದು. ಇವರ ಕಥೆಗಳು ಅನುಭವ ಪ್ರೇರಿತವಾಗಿದ್ದು ಅವುಗಳ ರಚನೆಯ ರೀತಿ ಪ್ರಬಂಧಕ್ಕೆ ಹತ್ತಿರವಾಗಿವೆ. ಬದುಕಿನ ಅನುಭವಗಳು ಇವರ

ಕಥೆಗಳ ಪ್ರಧಾನ ಕಾಳಜಿಯಾಗಿದೆ. ಕಥೆಯ ಓಟ ಮತ್ತು ಗಾತ್ರದ ಕಾರಣದಿಂದ ಕೆಲವು ಸಾರಿ ಓದುಗರ ಮನಸ್ಸಿನಲ್ಲಿ ಪೂರ್ಣವಾಗಿ ಉಳಿಯುವಲ್ಲಿ ಸೋಲುತ್ತದೆ. ಒಟ್ಟಾರೆಯಾಗಿ ಮಾಸ್ತಿಯವರ ಪ್ರತಿಭೆ ಪ್ರಯೋಗಗಳ ಮುಂದಿನ ಮಾದರಿಯಂತೆ ಇವರ ಕಥೆಗಳು ಮೂಡಿಬಂದಿದ್ದು, ಕನ್ನಡ ಸಣ್ಣಕಥಾ ಲೋಕದಲ್ಲಿ ಪ್ರತಿಪಾದನೆ ಪರಿಪಕ್ವತೆಯ ಕಥೆಗಳಾಗಿ ಸತ್ಯನಾರಾಯಣ ಕಥೆಗಳನ್ನು ಗುರುತಿಸಬಹುದು.

ಅನುಬಂಧ:

1. ಕೆ. ಸತ್ಯನಾರಾಯಣ – ಅಮೆರಿಕನ್ ಮನೆ (ಕಥಾಸಂಕಲನ)
ಪರಸ್ಪರ ಪ್ರಕಾಶನ.
2. ಕೆ. ಸತ್ಯನಾರಾಯಣ – ನಕ್ಸಲ್ ವರಸೆ (ಕಥಾಸಂಕಲನ)
ಅಕ್ಷರ ಪ್ರಕಾಶನ. ಹೆಗ್ಗೋಡು (ಸಾಗರ)
3. ಕೆ. ಸತ್ಯನಾರಾಯಣ – ಈ ತನಕದ ಕಥೆಗಳು (ಕಥಾಸಂಕಲನ)
ಮೆ॥ ಗೀತಾಂಜಲಿ ಪಬ್ಲಿಕೇಷನ್
4. ಕೆ. ಸತ್ಯನಾರಾಯಣ – ಹೆಗ್ಗುರುತು (ಕಥಾಸಂಕಲನ)
ಮನೋಹರ ಗ್ರಂಥಮಾಲಾ, ಧಾರವಾಡ
5. ಕೆ. ಸತ್ಯನಾರಾಯಣ – ಪ್ರಸಿದ್ಧನಾಮಾ (ಕಥಾಸಂಕಲನ)
ಸುಭಾಷ್ ಸ್ಟೋರ್ಸ್

ಆಕರ ಗ್ರಂಥಗಳು

1. ಬಿ. ಆರ್. ಸುಮಿತ್ರ (ಸಂಪಾದಕಿ) – ಕೆ. ಸತ್ಯನಾರಾಯಣರ ಸಾಹಿತ್ಯ ಕುರಿತ ವಿಮರ್ಶಾ ಬರಹಗಳು
ಸಪ್ನ ಬುಕ್ ಹೌಸ್ – ಮುದ್ರಣ – 2016

2. ಡಾ.ಕೆ. ಜಯಲಕ್ಷ್ಮಿ – ಹೆಣ್ಣು ಅಸ್ತಿತ್ವದ ಹೋರಾಟದಲ್ಲಿ
ಅನಾವರಣ – ಮುದ್ರಣ – 2006

3. ಡಾ॥ ಪುರುಷೋತ್ತಮ ಬಿಳಿಮಲೆ – ಬಂಡಾಯ – ದಲಿತ ಸಾಹಿತ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ ಮುದ್ರಣ – 1990

4. ಸುಧಾ ಸೀತಾರಾಮನ – ಮಹಿಳಾ ಅಧ್ಯಯನ ಸಮಾಜಶಾಸ್ತ್ರೀಯ ದೃಷ್ಟಿಕೋನ
ಪ್ರೀತಿಲೇಖ – ಮುದ್ರಣ – 2010

5. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗುಳಿ

6. ಶತಮಾನದ ಸಣ್ಣಕತೆ – ಕರೀಗೌಡ ಬೀಚನಹಳ್ಳಿ